ಸಂಪುಟ: 05 ಸಂಚಿಕೆ: 116 ಪುಟಗಳು: 08 ಬುಧವಾರ 09 ಜುಲೈ 2025
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833 ₹5

**ಮುಂಜಾನೆ ಮಾತು**

ಅವರು ಮೊದಲು ನಿಮ್ಮನ್ನು ನಿರ್ಲಕ್ಷಿಸುತ್ತಾರೆ, ನಂತರ ನಿಮ್ಮನ್ನು ನೋಡಿ ನಗುತ್ತಾರೆ, ಬಳಿಕ ನಿಮ್ಮೊಂದಿಗೆ ಸಂಘರ್ಷಕ್ಕಿಳಿಯುತ್ತಾರೆ, ಆಗ ನೀವು ಗೆದ್ದಂತೆ.

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

# ಬೆಂಗಳೂರಿನ ರಸ್ತೆಗೆ 3 ಲಕ್ಷ ಹೊಸ ವಾಹನಗಳು ಎಂಟ್ರಿ!

## । ಬೆಂಗಳೂರಿನಲ್ಲಿ ಸಾರ್ವಜನಿಕ ವಾಹನ ಬಳಕೆಗಿಂತ ಸ್ವಂತ ವಾಹನ ಹೊಂದುವವರ ಸಂಖ್ಯೆ ಏರುಗತಿ

• ಉದಯವಾಹಿನಿ, ಬೆಂಗಳೂರು

ರಾಜಧಾನಿಯಲ್ಲಿ ಸಾರ್ವಜನಿಕ ವಾಹನ ಬಳಕೆಗಿಂತ ಸ್ವಂತ ವಾಹನ ಹೊಂದುವವರ ಸಂಖ್ಯೆ ಏರುಗತಿಯಲ್ಲಿ ಸಾಗಿದ್ದು, ವಾಹನಗಳ ಖರೀದಿ ಭರಾಟೆ ಜೋರಾಗಿದೆ. ಕಳೆದ ಆರು ತಿಂಗಳಲ್ಲಿ 3 ಲಕ್ಷ ಹೊಸ ಖಾಸಗಿ ವಾಹನಗಳು ನಗರದ ರಸ್ತೆಗಿಳಿದಿವೆ. ನಗರವಾಸಿಗಳಲ್ಲಿ ಸ್ವಂತ ವಾಹನ ಹೊಂದುವ ಹಂಬಲ ಹೆಚ್ಚುತ್ತಲೇ ಇದ್ದು, ಪ್ರತಿ ನಿತ್ಯ ಹೊಸ ಕಾರು, ಬೈಕ್‌ಗಳು ರಸ್ತೆಗಿಳಿಯುತ್ತಿವೆ.

ಬ್ಯಾಂಕ್‌ಗಳು ಸರಳವಾಗಿ ಸಾಲ ಒದಗಿಸುವುದರಿಂದ ಜನರು ಪೈಪೋಟಿಗಿಳಿದು ಹೊಸ ವಾಹನ ಖರೀದಿಸುತ್ತಿದ್ದಾರೆ. ಆದಾಯ ಹೆಚ್ಚಿದಂತೆ ಹೊಸ ಕಾರು, ಬೈಕ್ ಖರೀದಿಗೆ ಒಲವು ತೋರುತ್ತಿದ್ದಾರೆ. ಮತ್ತೊಂದಷ್ಟು ಜನ ವಾಹನದ ಮೇಲಿನ ವ್ಯಾಮೋಹದಿಂದ ಒಂದರ ಜತೆಗೆ ಮತ್ತೊಂದು ಇರಲಿ, ಸ್ಥಳೀಯವಾಗಿ ಒಂದು ವಾಹನವಾದರೆ, ದೂರದ ಸುಖಕರ ಪ್ರಯಾಣಕ್ಕೆ ಸುಸಜ್ಜಿತ ವಾಹನವಿರಲಿ ಎಂದು ಖರೀದಿ ಮಾಡುತ್ತಿದ್ದಾರೆ.

ಸಾರಿಗೆ ಇಲಾಖೆ ಮಾಹಿತಿ ಪ್ರಕಾರ ಜೂನ್ ಒಂದೇ ತಿಂಗಳಲ್ಲಿ ಹೊಸ 49,620 ಖಾಸಗಿ ವಾಹನಗಳು ನೋಂದಣಿಯಾಗಿದ್ದು, ಇದು ನಗರದಲ್ಲಿ ಹೆಚ್ಚುತ್ತಿರುವ ಮೂಲ ಸೌಕರ್ಯವನ್ನು ಎತ್ತಿ ತೋರಿಸುತ್ತದೆ. ಆದರೆ, ರಾಜ್ಯದ ಬೇರೆ ಜಿಲ್ಲೆಹಾಗೂ ನಗರಗಳ ಚಿತ್ರಣವೇ ಬೇರೆ ಇದೆ. ಹೊರ ಜಿಲ್ಲೆಮತ್ತು ನಗರಗಳಲ್ಲಿವಾಹನಗಳ ಖರೀದಿ ಮತ್ತು ನೋಂದಣಿ ಪ್ರಮಾಣವು ಇಷ್ಟು ದೊಡ್ಡ ಪ್ರಮಾಣದಲ್ಲಿಲ್ಲ.



**ವಾಹನ ಸಂಚಾರಕ್ಕೆ ವಿಘ್ನ:** ಬೆಂಗಳೂರಿನ ರಸ್ತೆಗಳ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯ ವಾಹನಗಳು ರಸ್ತೆಗಿಳಿಯುತ್ತಿವೆ. ಜನಸಂಖ್ಯೆ ಹೆಚ್ಚಳಕ್ಕೆ ಪೂರಕವಾಗಿ ವಾಹನಗಳ ಸಂಖ್ಯೆಯೂ ಏರಿಕೆಯಾಗುತ್ತಿದೆ. ಖಾಸಗಿ ವಾಹನಗಳ ತ್ವರಿತ ಹೆಚ್ಚಳವು ನಗರದ ಸಾರ್ವಜನಿಕ ಸಾರಿಗೆ ವ್ಯವಸ್ಥೆಗೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ. ಇದರಿಂದ ಸಂಚಾರ ವ್ಯವಸ್ಥೆಯು ಹಲವು ಸಮಸ್ಯೆಗಳನ್ನು ಎದುರಿಸುವಂತಾಗಿದೆ.

ಬೆಂಗಳೂರು ನಗರವು ದೇಶದ ಎರಡನೇ ಅತಿ ದೊಡ್ಡ ಮೆಟ್ರೋ ರೈಲು ಜಾಲ (76.9 ಕಿ.ಮೀ.) ಹೊಂದಿದ್ದರೂ, ಬಿಎಂಆರ್‌ಸಿಎಲ್ ಸೀಮಿತ ಪ್ರದೇಶಕ್ಕೆ ಮಾತ್ರ ಸೇವೆ ಒದಗಿಸಿದೆ. 6,835 ಬಸ್‌ಗಳನ್ನು ಹೊಂದಿರುವ ಬಿಎಂಟಿಸಿ, ಸಾರಿಗೆಯ ಬೇಡಿಕೆಯನ್ನು ಪೂರೈಸುವ ಒತ್ತಡದಲ್ಲಿದೆ. ವಾಹನ ದಟ್ಟಣೆಯು ದೈನಂದಿನ ಗೋಳಾಗಿದ್ದು, ಸಂಚಾರ ವ್ಯವಸ್ಥೆಯು ಸಂಪೂರ್ಣ ಹದಗೆಟ್ಟಿದೆ.

**ಜೂನ್‌ನಲ್ಲಿ ಅತಿ ಹೆಚ್ಚು ದಟ್ಟಣೆ:** ಸಂಚಾರ ಪೊಲೀಸರ ವರದಿ ಪ್ರಕಾರ ಜೂನ್ ತಿಂಗಳಲ್ಲಿ ಅತಿ ಹೆಚ್ಚು ವಾಹನ ದಟ್ಟಣೆ ಉಂಟಾಗಿದೆ. ಸರಾಸರಿ ದೈನಂದಿನ ವಾಹನ ದಟ್ಟಣೆಯ ಉದ್ದ 189.6 ಕಿ.ಮೀ. ಆಗಿದ್ದು, ಜೂನ್ 11ರಂದು ತಿಂಗಳ ಅತಿ ಹೆಚ್ಚು ಟ್ರಾಫಿಕ್ ಜಾಮ್ (2,377 ಕಿ.ಮೀ.) ಕಂಡು ಬಂದಿದೆ. ವರ್ತೂರು ಮುಖ್ಯ ರಸ್ತೆ ಮತ್ತು ಹೊರ ವರ್ತುಲ ರಸ್ತೆಯಲ್ಲಿ ಅನಿಯಮಿತ ದಟ್ಟಣೆ ಉಂಟಾಗಿದೆ.

## ಇಬ್ಬರು ಜಿಲ್ಲಾಧಿಕಾರಿಗಳು ಸೇರಿ 13 ಐಎಎಸ್ ಅಧಿಕಾರಿಗಳ ವರ್ಗಾವಣೆ

• ಉದಯವಾಹಿನಿ, ಬೆಂಗಳೂರು

ವಿಜಯನಗರ, ಯಾದಗಿರಿ ಜಿಲ್ಲಾಧಿಕಾರಿಗಳು ಸೇರಿದಂತೆ 13 ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಕರ್ನಾಟಕ ಸರ್ಕಾರ ಆದೇಶ ಹೊರಡಿಸಿದೆ. ವಿಜಯನಗರ ಜಿಲ್ಲಾಧಿಕಾರಿಯಾಗಿದ್ದ ಭೂಬಾಲನ್ ಟಿ ಅವರನ್ನು ಇ ಆಡಳಿತ ಇಲಾಖೆಯ ಇ ಆಡಳಿತ ಕೇಂದ್ರದ ಸಿಇಓ ಆಗಿ ವರ್ಗಾವಣೆ ಮಾಡಲಾಗಿದೆ.

ಯಾದಗಿರಿ ಜಿಲ್ಲಾಧಿಕಾರಿಗಳಾಗಿದ್ದ ಸುಶೀಲ ಬಿ ಅವರನ್ನು ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ವ್ಯವಸ್ಥಾಪಕ ನಿರ್ದೇಶಕ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸಿಇಓ ಆಗಿದ್ದ ಆನಂದ್ ಕೆ ಅವರನ್ನು ವಿಜಯನಗರ ಜಿಲ್ಲೆಗೆ ಜಿಲ್ಲಾಧಿಕಾರಿಗಳಾಗಿ ನೇಮಕ ಮಾಡಲಾಗಿದೆ. ಅಟಲ್ ಜನಸ್ನೇಹಿ ಕೇಂದ್ರದ ಎಂಡಿ ಆಗಿದ್ದ ಭೂಯಲ್ ಹರ್ಷಲ್ ನಾರಾಯಣ ರಾವ್ ಅವರನ್ನು ಯಾದಗಿರಿ ಜಿಲ್ಲಾಧಿಕಾರಿಯಾಗಿ ನೇಮಿಸಲಾಗಿದೆ.

## ಸರ್ಕಾರಿ ಆಸ್ಪತ್ರೆ: ಗುಣಮಟ್ಟದ ಸೇವೆ ನೀಡದಿದ್ದರೆ ಕ್ರಮ: ಇಲಾಖೆ

• ಉದಯವಾಹಿನಿ, ಬೆಂಗಳೂರು

ರಾಷ್ಟ್ರೀಯ ಗುಣಮಟ್ಟ ಭರವಸೆಯ ಮಾನದಂಡಗಳ (ಎನ್‌ಕ್ಯೂಎಎಸ್) ಅಳವಡಿಕೆಗೆ ಸಂಬಂಧಿಸಿದಂತೆ ನಿರೀಕ್ಷಿತ ಗುರಿ ಸಾಧಿಸದೇ ಇದ್ದಲ್ಲಿ ಆಸ್ಪತ್ರೆಗಳ ವೈದ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಆರೋಗ್ಯ ಇಲಾಖೆ ತಿಳಿಸಿದೆ.

ಈ ಬಗ್ಗೆ ಇಲಾಖೆ ಆದೇಶ ಹೊರಡಿಸಿದೆ. 'ಮುಂದಿನ ಮೂರು ತಿಂಗಳಲ್ಲಿ ಈ ಮಾನದಂಡಗಳನ್ನು ಅಳವಡಿಸಿಕೊಂಡು, ನಿರೀಕ್ಷಿತ ಮಟ್ಟದಲ್ಲಿ ಗುರಿ ಸಾಧಿಸಬೇಕು. ಈ ಗುರಿ ಸಾಧಿಸಲು ವಿಫಲವಾದಲ್ಲಿ 'ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ' (ಎಬಿ-ಎಆರ್‌ಕೆ) ಅಡಿ ನೀಡಲಾಗುತ್ತಿರುವ ಪ್ರೋತ್ಸಾಹಧನದಿಂದ ಆಸ್ಪತ್ರೆಯನ್ನು ಅನರ್ಹಗೊಳಿಸಲಾಗುವುದು' ಎಂದು ತಿಳಿಸಲಾಗಿದೆ.

'ಕನಿಷ್ಠ 6 ತಿಂಗಳ ಒಳಗಾದರೂ ಮಾನದಂಡಗಳ ಗುರಿ ಸಾಧನೆ ಮಾಡಬೇಕು. ಇಲ್ಲವಾದಲ್ಲಿ, ಆಸ್ಪತ್ರೆಗಳ ವೈದ್ಯಕೀಯ ಮತ್ತು ಅರೆವೈದ್ಯಕೀಯ ಅಧಿಕಾರಿಗಳು ಹಾಗೂ ಸಿಬ್ಬಂದಿಯ ವರ್ಗಾವಣೆಗೆ ಕ್ರಮ ವಹಿಸಲಾಗುವುದು. 9 ತಿಂಗಳೊಳಗೆ ಯಾವುದೇ ಸಾಧನೆ ಮಾಡದಿದ್ದರೆ, ಅಂತಹ ಆರೋಗ್ಯ ಸಂಸ್ಥೆಗಳಲ್ಲಿ ಕೆಲಸ ಮಾಡುವ ಎಲ್ಲ ಮುಖ್ಯ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಅಧಿಕಾರಿ ಹಾಗೂ ಸಿಬ್ಬಂದಿಯ ವಾರ್ಷಿಕ ವೇತನ ಬಡ್ತಿ ತಡೆ ಹಿಡಿಯಲಾಗುವುದು' ಎಂದು ಹೇಳಲಾಗಿದೆ.

## 500 ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ 2,500 ಕೋಟಿ ಅನುದಾನ


• ಉದಯವಾಹಿನಿ, ಬೆಳಗಾವಿ

ರಾಜ್ಯದಲ್ಲಿ ಮೊದಲ ಹಂತದಲ್ಲಿ 500 ಕರ್ನಾಟಕ ಪಬ್ಲಿಕ್ ಶಾಲೆಗಳನ್ನು ಆರಂಭಿಸಲಾಗುತ್ತಿದೆ. ಇದಕ್ಕೆ 2,500 ಕೋಟಿ ಅನುದಾನ ಅಗತ್ಯ. ಈ ಸಂಬಂಧ ಎಡಿಬಿ ಬ್ಯಾಂಕ್ ಜೊತೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ' ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು.

ನಗರದಲ್ಲಿ ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಎಲ್ಲಾ ಶಾಸಕರಿಗೂ ತಲಾ 2 ಅಥವಾ 3 ಶಾಲೆಗಳನ್ನು ನೀಡಲಾಗುವುದು. ಗ್ರಾಮ ಮಟ್ಟದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವಲ್ಲಿ ಇದು ಪ್ರಮುಖ ಹೆಜ್ಜೆ' ಎಂದರು. 'ಮೂರು ವರ್ಷಗಳಲ್ಲಿ 13,500 ಪ್ರಾಥಮಿಕ ಶಾಲೆ ಶಿಕ್ಷಕರ ನೇಮಕಾತಿ ಆಗಿದೆ. ಶೀಘ್ರದಲ್ಲೇ 20 ಸಾವಿರ ಶಿಕ್ಷಕರ ನೇಮಕಾತಿಗೆ ಅಧಿಸೂಚನೆ ಹೊರಡಿಸಲಾಗುವುದು. 'ಚುನಾವಣೆಯೂ ಸೇರಿದಂತೆ ಬೇರೆ ಯಾವುದೇ ಚಟುವಟಿಕೆಗೆ ಸರ್ಕಾರಿ ಶಾಲೆ ಶಿಕ್ಷಕರನ್ನು ನಿಯೋಜನೆ ಮಾಡಬಾರದು ಎಂಬ ನಿರ್ಧಾರ ತೆಗೆದುಕೊಂಡಿದ್ದೇವೆ.

ಈ ಬಗ್ಗೆ ಮುಖ್ಯಮಂತ್ರಿ ಅವರಿಗೂ ಮನವರಿಕೆ ಮಾಡಿದ್ದೇನೆ. ಶಿಕ್ಷಕರು ಶಾಲೆಯಲ್ಲೇ ಹೆಚ್ಚು ಚಟುವಟಿಕೆ ಆರಂಭಿಸಲು ಅನುಕೂಲ ಮಾಡಿಕೊಡಲಾಗುವುದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

# ನಾಯಕತ್ವದ ಪುನರುಚ್ಚಾರ ರಾಜಕೀಯ ಲೆಕ್ಕಾಚಾರ




• ಉದಯವಾಹಿನಿ, ಹೊಸದಿಲ್ಲಿ

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ ಶಿವಕುಮಾರ್ ದೆಹಲಿ ಭೇಟಿ ವರಿಷ್ಠರ ಜತೆಗಿನ ಸಭೆ ಚರ್ಚೆಗಳು ಕುತೂಹಕ್ಕೆಡೆ ಮಾಡಿದ್ದು, ಬರುವ ಇವರಿಬ್ಬರು ಕಾಂಗ್ರೆಸ್‌ನ ವರಿಷ್ಠ ರಾಹುಲ್ ಗಾಂಧಿಯವರು ಇವರಿಬ್ಬರ ಜತೆ ಚರ್ಚೆ ನಡೆಸಲಿದ್ದಾರೆ ವಿದೇಶ ಪ್ರವಾಸ ಮುಗಿಸಿ ವಾಪಸ್ ಆಗಿರುವ ರಾಹುಲ್ ಜತೆ ಈ ಇಬ್ಬರು ನಾಯಕರ ಭೇಟಿ ಚರ್ಚೆಗಳು ರಾಜಕೀಯವಾಗಿ ಮಹತ್ವ ಪಡೆದುಕೊಂಡಿದೆ.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿ ವಿರುದ್ಧ ಅಸಮಾಧಾನಗೊಂಡಿದ್ದ ಶಾಸಕರನ್ನು ಸಮಾಧಾನಗೊಳಿಸಲು ರಾಜ್ಯ ಕಾಂಗ್ರೆಸ್ ಉಸ್ತುವಾರಿ ಸುರ್ಜೇವಾಲಾ ಅವರು ಶಾಸಕರ ಜತೆ ಪ್ರತ್ಯೇಕ ಸಭೆ ನಡೆಸಿರುವಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ದೆಹಲಿಗೆ ತೆರಳಲಿದ್ದು, ಉಪಮುಖ್ಯಮಂತ್ರಿ ಡಿಕೆಶಿವಕುಮಾರ್ ದೆಹಲಿಗೆ ತೆರಳಿದ್ದಾರೆ.

ಡಿಕೆಶಿವಕುಮಾರ್ ಕೇಂದ್ರದ ಜಲಶಕ್ತಿ ಸಚಿವರೂ ಸೇರಿದಂತೆ ಕೆಲ ಸಚಿವರನ್ನು ಭೇಟಿ ಮಾಡಿ ದೆಹಲಿಯಲ್ಲೇ ವಾಸ್ತವ್ಯ ಹೂಡುವರು. ಗುರುವಾರ ಈ ಇಬ್ಬರು ನಾಯಕರು ಕಾಂಗ್ರೆಸ್ ವರಿಷ್ಠ ರಾಹುಲ್‌ಗಾಂಧಿ ಸೇರಿದಂತೆ ಹಲವರನ್ನು ಭೇಟಿ ಮಾಡಿ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಬಗ್ಗೆ ಚರ್ಚೆ ನಡೆಸುವರು ಎಂದು ಹೇಳಲಾಗಿದೆ.


ಸಿಎಂ ಸಿದ್ದರಾಮಯ್ಯ ಅವರು ರಾಷ್ಟ್ರ ರಾಜಕಾರಣಕ್ಕೆ ಮುಖಮಾಡುತ್ತಿದ್ದಾರೆ ಎಂಬ ಚರ್ಚೆಯ ನಡುವೆ ಡಿಸಿಎಂ ಡಿಕೆಶಿವಕುಮಾರ್ ಕೊಟ್ಟ ಉತ್ತರ ಕುತೂಹಲಕ್ಕೆ ಕಾರಣವಾಗಿದೆ.

**ಸಿಎಂ ಸ್ಥಾನಗಾಗಿ ಕೈನಲ್ಲಿ ಸರ್ಕಸ್...!**

ಹಿಂದುಳಿದ ವರ್ಗಗಳ ರಾಷ್ಟ್ರೀಯ ಮಟ್ಟದ ಎಐಸಿಸಿ ಸಲಹಾ ಸಮಿತಿಗೆ ಸಿದ್ದರಾಮಯ್ಯ ನೇತೃತ್ವದ ಬೆನ್ನಲ್ಲೇ ಈ ಚರ್ಚೆ ಶುರುವಾಗಿದೆ. ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗಗಳ ಪ್ರಭಾವಿ ನಾಯಕರು, ಅವರ ನಾಯಕತ್ವ ಪಕ್ಷ ಬಳಸಿಕೊಳ್ಳುತ್ತಿದೆ. 15ರಂದು ರಾಷ್ಟ್ರಮಟ್ಟದ ಹಿಂದುಳಿದ ವರ್ಗಗಳ ಸಮಿತಿ ಸಭೆಯು ಸಿದ್ದರಾಮಯ್ಯ ಅವರ ನೇತೃತ್ವದಲ್ಲೇ ನಡೆಯಲಿದೆ'' ಎಂದು ಡಿಸಿಎಂ ಡಿಕೆಶಿವಕುಮಾರ್ ತಿಳಿಸಿದರು. ದೆಹಲಿಯಲ್ಲಿ ರಾಜಕೀಯಕ್ಕೆ ಸಂಬಂಧಿಸಿದಂತೆ ಏನಾದರೂ ಸಭೆ ಮಾಡುತ್ತೀರಾ ಎಂದು ಕೇಳಿದಾಗ, ''ಇದೇ 10ರಂದು ನಾನು, ಸಿಎಂ ಸಿದ್ದರಾಮಯ್ಯ ಹಾಗೂ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳು ಸಭೆ ಮಾಡಲಿದ್ದು, ಪಕ್ಷದ ವಿಚಾರವಾಗಿ ಚರ್ಚೆ ಮಾಡಲಾಗುವುದು'' ಎಂದು ತಿಳಿಸಿದರು.

**ಸಿಎಂ ಸ್ಥಾನ ಖಾಲಿ ಇಲ್ಲ:** ಸಿಎಂ ಸ್ಥಾನಕ್ಕೆ ಶಾಸಕರು ನಿಮ್ಮನ್ನು ಬೆಂಬಲಿಸಿ ಮಾತನಾಡಿದ್ದಾರೆ ಎಂದು ಕೇಳಿದಾಗ, ''ಸಧ್ಯಕ್ಕೆ ಸಿಎಂ ಸ್ಥಾನ ಖಾಲಿ ಇಲ್ಲ. ಹೀಗಾಗಿ ಈ ವಿಚಾರವಾಗಿ ಈಗ ಚರ್ಚೆ ಮಾಡಲು ಇದು ಸಮಯವಲ್ಲ'' ಎಂದು ತಿಳಿಸಿದರು. ಅನ್ನಭಾಗ್ಯ ಅಕ್ಕಿ ಸಾಗಾಣಿಕ ವಾಹನಗಳಿಗೆ ನೀಡಲು ಹಣವಿಲ್ಲ ಎಂಬ ವಿಚಾರವಾಗಿ ಕೇಳಿದಾಗ, ''ಈ ವಿಚಾರವಾಗಿ ಮಾಹಿತಿ ಇಲ್ಲ. ಮಾಹಿತಿ ಪಡೆದು ಪ್ರತಿಕ್ರಿಯೆ ನೀಡುವೆ'' ಎಂದರು.

### ಖರ್ಗೆ ಭೇಟಿ ಮಾಡುವ ಸಾಧ್ಯತೆ



ನಾಲ್ಕು ವಿಧಾನ ಪರಿಷತ್ ಸದಸ್ಯ ಸ್ಥಾನಗಳ ನಾಮನಿರ್ದೇಶನ ಮತ್ತು ನಿಗಮ ಮಂಡಳಿಗಳಿಗೆ ಸದಸ್ಯರು, ಅಧ್ಯಕ್ಷರ ಆಯ್ಕೆಗೆ ಕಾಂಗ್ರೆಸ್ ಹೈಕಮಾಂಡ್ ಅನುಮೋದನೆ ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್ ನವದೆಹಲಿಗೆ ತೆರಳಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗಿನ ಭೇಟಿ ಖಚಿತವಾಗಿಲ್ಲವಾದರೂ, ಗುರುವಾರ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಭೇಟಿ ಮಾಡುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಖರ್ಗೆ ಅವರು ನಾಲ್ಕು ಎಂಎಲ್‌ಸಿ ನಾಮನಿರ್ದೇಶಿತರ ಪಟ್ಟಿಯನ್ನು ಅಂತಿಮಗೊಳಿಸಿದ್ದು, ಒಂದೆರಡು ಬದಲಾವಣೆಗಳಿಗೆ ಸೂಚಿಸುವ ಸಾಧ್ಯತೆಗಳಿವೆ ಎಂದು ಹೇಳಲಾಗುತ್ತಿದೆ. ಈಗಾಗಲೇ ದೆಹಲಿಯಲ್ಲಿರುವ ಡಿಕೆ.ಶಿವಕುಮಾರ್ ಅವರು ಇದು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್. ಪಾಟೀಲ್ ಮತ್ತು ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರನ್ನು ಭೇಟಿ ಮಾಡಲಿದ್ದು, ಈ ಮೂಲಕ ತಮ್ಮ ಮೂರು ದಿನಗಳ ಭೇಟಿಯನ್ನು ಆರಂಭಿಸಲಿದ್ದಾರೆ.

### ದೆಹಲಿಗೆ ಭೇಟಿ ಕೊಡುವುದು ಹೊಸದೇನಲ್ಲ


ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ದೆಹಲಿಗೆ ಭೇಟಿ ಕೊಡುವುದು ಹೊಸದೇನಲ್ಲ. ಇದಕ್ಕೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವ ಲಕ್ಷ್ಮೀ ಹೆಬ್ಬಾಳಕರ್ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಆಡಳಿತಾತ್ಮಕ ವಿಷಯವಾಗಿ ಕೇಂದ್ರ ಸಚಿವರನ್ನು ಭೇಟಿಯಾಗಲು ಹೋಗಿದ್ದಾರೆ. ಇಲಾಖೆ ವಿಷಯವಾಗಿ ನಾನು ಕೂಡ ದೆಹಲಿಗೆ ಹೋಗುತ್ತಾ ಇರುತ್ತೇನೆ. ಬಿಜೆಪಿಯವರಿಗೆ ಬೇರೆ ಕೆಲಸವಿಲ್ಲ. ಸರ್ಕಾರ ಬದಲಾವಣೆ, ಮುಖ್ಯಮಂತ್ರಿಗಳ ಬದಲಾವಣೆ ವಿಷಯಗಳನ್ನಷ್ಟೇ ಸುಖಾಸುಮ್ಮನೆ ಮಾತನಾಡುತ್ತಿರುತ್ತಾರೆ. ನಮ್ಮ ಪಕ್ಷದಲ್ಲಿ ಎಲ್ಲದಕ್ಕೂ ಹೈಕಮಾಂಡ್ ನಿರ್ಧಾರವೇ ಅಂತಿಮ ಎಂದರು. ಕರ್ನಾಟಕ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೆವಾಲಾ ಅವರನ್ನು ನಮ್ಮ ಶಾಸಕ ಮಿತ್ರರು ಭೇಟಿಯಾಗುವುದು ಹೊಸದೇನಲ್ಲ. ಇದು ನಿರಂತರ ಪ್ರತಿಕ್ರಿಯೆ. ಈ ಬಾರಿ ಸ್ವಲ್ಪ ತಡವಾಗಿದೆ ಅಷ್ಟೇ ಎಂದು ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಉತ್ತರಿಸಿದರು.

1 ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿಕೆಶಿ ದೆಹಲಿ ಪ್ರವಾಸ

2 ದೆಹಲಿಯಲ್ಲೇ ವಾಸ್ತವ್ಯ, ಹೈಕಮಾಂಡ್ ಭೇಟಿ, ರಾಜ್ಯದ ಸ್ಥಿತಿಗತಿ ಚರ್ಚೆ

3 20ಕ್ಕೂ ಹೆಚ್ಚು ಶಾಸಕರ ಜೊತೆ ಸುರ್ಜೇವಾಲಾ ಸಭೆ

### ಬೊಮ್ಮಾಯಿ ವಾಗ್ದಾಳಿ



ಸಿದ್ದರಾಮಯ್ಯ, ಶಿವಕುಮಾರ್ ಕುರ್ಚಿ ಕಿತ್ತಾಟದಲ್ಲಿ ಜನರು ಮತ್ತು ರಾಜ್ಯವನ್ನು ಮರೆತಿದ್ದಾರೆ. ಕೇವಲ ತಮ್ಮ ಕುರ್ಚಿ ಉಳಿಸಿಕೊಳ್ಳಲು ಸಮಯ ಕಳೆಯುತ್ತಿದ್ದಾರೆ. ಈ ಸರ್ಕಾರವನ್ನು ತಂದಿರುವುದಕ್ಕಾಗಿ ಜನರು ಪಶ್ಚಾತ್ತಾಪಪಡುತ್ತಿದ್ದು ಈ ಸರ್ಕಾರವನ್ನು ಕಿತ್ತು ಹಾಕಲು ಹಿಡಿ ಶಾಪ ಹಾಕುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು. ಪಡಿತರ ಆಹಾರ ವಿತರಣೆ ಮಾಡುವ ಲಾರಿಗಳಿಗೆ ಸುಮಾರು 250 ಕೋಟಿ ರೂ. ಬಾಕಿ ಇರುವುದು ಅಕ್ಷಮ್ಯ ಅಪರಾಧ. ರಾಜ್ಯ ಸರ್ಕಾರ ಹಣಕಾಸು ನಿರ್ವಹಣೆಯಲ್ಲಿ ಸಂಪೂರ್ಣ ವಿಫಲವಾಗಿದೆ. ಹಿಂದೆ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಾಕಷ್ಟು ಯೋಜನೆಗಳಿಗೆ ಹಣ ಕೊಟ್ಟಿದ್ದೇವೆ. ಇವರು ಕೇವಲ ಸುಳ್ಳು ಹೇಳುತ್ತಿದ್ದಾರೆ ಎಂದು ಕಿಡಿಕಾರಿದರು.

**ಸಿಎಂಗೆ ಆಸಕ್ತಿ ಇಲ್ಲ:** ಎಐಸಿಸಿಯ ಓಬಿಸಿ ಸಲಹಾ ಮಂಡಳಿಗೆ ನೇಮಕಗೊಂಡಿರುವ ಸಿದ್ದರಾಮಯ್ಯ ಅವರು ರಾಷ್ಟ್ರ ರಾಜಕಾರಣಕ್ಕೆ ಹೋಗಲು ಆಸಕ್ತಿ ಹೊಂದಿಲ್ಲ ಎನ್ನಲಾಗಿದ್ದು, ನಾನು ಈ ಹಿಂದೆಯೇ ರಾಷ್ಟ್ರ ರಾಜಕಾರಣಕ್ಕೆ ಹೋಗಿಲ್ಲ ಈಗ ಏಕೆ ಹೋಗಲಿ ಎಂದು ತಮ್ಮ ಆಪ್ತರ ಬಳಿ ತಮ್ಮ ಮನದಾಳವನ್ನು ಬಿಚ್ಚಿಟ್ಟಿದ್ದಾರೆ ಎಂದು ಹೇಳಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ರಾಷ್ಟ್ರ ರಾಜಕಾರಣಕ್ಕೆ ಹೋಗುತ್ತಾರೆ ಎಂಬ ಸುದ್ದಿಗಳ ಬಗ್ಗೆ ತಮ್ಮ ಆಪ್ತರ ಜತೆ ಮಾತನಾಡಿರುವ ಅವರು ರಾಷ್ಟ್ರ ರಾಜಕಾರಣದಲ್ಲಿ ನನಗೆ ಆಸಕ್ತಿ ಇಲ್ಲ. ಈಗ ರಾಷ್ಟ್ರ ಮಟ್ಟದಲ್ಲಿ ಪಕ್ಷಕ್ಕೆ ಕೆಲಸ ಮಾಡುವ ವಯಸ್ಸು ನನ್ನದಲ್ಲ ರಾಜಕಾರಣದ ಕೊನೆಯ ಘಟ್ಟದಲ್ಲಿದ್ದೇನೆ.

# ಗಣಿ ಅಕ್ರಮ ತನಿಖೆ ವಿಳಂಬಕ್ಕೆ ಅಸಮಾಧಾನ

• ಉದಯವಾಹಿನಿ, ಬೆಂಗಳೂರು

ಗಣಿಗಾರಿಕೆಯಲ್ಲಿ ನಡೆದ ಅಕ್ರಮಗಳ ಕುರಿತ ತನಿಖೆ ವಿಳಂಬವಾಗಿರುವುದಕ್ಕೆ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ. ಪಾಟೀಲ ನೇತೃತ್ವದ ಸಚಿವ ಸಂಪುಟ ಉಪ ಸಮಿತಿ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ಗಣಿ ಅಕ್ರಮಗಳ ಕುರಿತಂತೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಶಿಫಾರಸು ಮಾಡಲು ರಚಿಸಲಾಗಿರುವ ಸಚಿವ ಸಂಪುಟದ ಉಪ ಸಮಿತಿಯ ಮೊದಲ ಸಭೆ ಮಂಗಳವಾರ ನಡೆಯಿತು. ಸಭೆಯಲ್ಲಿ ಆಹಾರ ಸಚಿವ ಕೆ.ಎಚ್. ಮುನಿಯಪ್ಪ, ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ, ಅರಣ್ಯ ಸಚಿವ ಈಶ್ವರ ಖಂಡ್ರೆ, ಹಿರಿಯ ಪೊಲೀಸ್ ಅಧಿಕಾರಿಗಳು ಭಾಗವಹಿಸಿದರು.

'ಗಣಿಗಾರಿಕೆಯಲ್ಲಿ ನಡೆದ ಅಕ್ರಮಗಳ ತನಿಖೆಯ ವೇಳೆ ಹಲವು ಅಚ್ಚರಿಯ ವಿಷಯಗಳು ಬಹಿರಂಗವಾಗಿದೆ. ಆದರೆ, ತನಿಖೆಯ ವಿಚಾರಕ್ಕೆ ಸಂಬಂಧಿಸಿದಂತೆ ಒಟ್ಟು ವ್ಯವಸ್ಥೆಯಲ್ಲಿ ಆಗಿರುವ ವಿಳಂಬವನ್ನು ಒಪ್ಪಲು ಸಾಧ್ಯ ಇಲ್ಲ. ಈ ವಿಚಾರದಲ್ಲಿ ಕೆಲವು ಮಹತ್ವದ ತೀರ್ಮಾನಗಳನ್ನು ಕೈಗೊಳ್ಳಬೇಕಾಗಿದೆ' ಎಂಬ ತೀರ್ಮಾನಕ್ಕೆ ಬಂದಿರುವ ಸಮಿತಿ, ಇದೇ 11ಕ್ಕೆ ಮತ್ತೆ ಸಭೆ ಸೇರಲು ನಿರ್ಧರಿಸಿದೆ.



**ಸಂಪುಟ ಉಪ ಸಮಿತಿಯ ಮೊದಲ ಸಭೆ**

ಅಕ್ರಮ ಗಣಿಗಾರಿಕೆಯಿಂದ ಸರ್ಕಾರದ ಬೊಕ್ಕಸಕ್ಕೆ ಉಂಟಾಗಿರುವ ನಷ್ಟವನ್ನು ವಸೂಲಿ ಮಾಡಲು ವಸೂಲಾತಿ ಆಯುಕ್ತರ ನೇಮಕ ಮತ್ತು ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ತ್ವರಿತ ನ್ಯಾಯಾಲಯ ಸ್ಥಾಪಿಸುವ ಬಗ್ಗೆ ಮುಂದಿನ ಸಭೆಯಲ್ಲಿ ಚರ್ಚಿಸಿ ತೀರ್ಮಾನಕ್ಕೆ ಬರಲು ಕೂಡಾ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

ವಾಣಿಜ್ಯ ತೆರಿಗೆ ವಂಚನೆ, ಅಬಕಾರಿ ಸುಂಕದ ವಂಚನೆ, ಅರಣ್ಯ ಅಭಿವೃದ್ಧಿ ಸುಂಕ ವಂಚಿಸಿದ ಅನೇಕ ಪ್ರಕರಣಗಳ ತನಿಖೆಯು ಸುದೀರ್ಘ 16 ವರ್ಷಗಳ ನಂತರವೂ ಶೈಶವಾವಸ್ಥೆಯಲ್ಲಿವೆ. 2013ರಿಂದ 2018ರ ಅವಧಿಯ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವ ಸಂಪುಟ ಉಪ ಸಮಿತಿ ಕೈಗೊಂಡ ಕ್ರಮಗಳಿಂದಾಗಿ 43ಕ್ಕೂ ಹೆಚ್ಚು ಪ್ರಕರಣಗಳ ಎಫ್‌ಐಆರ್ ಆಗಿ ತನಿಖೆ ನಡೆದು ಇನ್ನೂ ನ್ಯಾಯಾಲಯಗಳಲ್ಲಿ ವಿವಿಧ ಹಂತಗಳಲ್ಲಿ ವಿಚಾರಣೆ ನಡೆಯುತ್ತಿದೆ. 2013ರ ನ. 18ರಂದು ಒಂಬತ್ತು ಪ್ರಕರಣಗಳನ್ನು ಸರ್ಕಾರ ಸಿಬಿಐಗೆ ವಹಿಸಿತ್ತು. ಆ ಪೈಕಿ, ಆರು ಪ್ರಕರಣಗಳನ್ನು ತನಿಖೆ ಮಾಡಲು ಸಿಬಿಐ ನಿರಾಕರಿಸಿತ್ತು. ಮೂರು ಪ್ರಕರಣಗಳಲ್ಲಿ ಮಾತ್ರ ಸಿಬಿಐ ತನಿಖೆ ನಡೆದು ನ್ಯಾಯಾಲಯಗಳಿಗೆ ದೋಷಾರೋಪಪಟ್ಟಿ ಸಲ್ಲಿಸಲಾಗಿದೆ. ಸಿಬಿಐ ತನಿಖೆಗೆ ನಿರಾಕರಿಸಿದ್ದ ಆರು ಪ್ರಕರಣಗಳನ್ನು ಅಕ್ರಮ ಗಣಿಗಾರಿಕೆ ತನಿಖೆಗೆ ಲೋಕಾಯುಕ್ತದಡಿ ನೇಮಿಸಿದ್ದ ವಿಶೇಷ ತನಿಖಾ ದಳಕ್ಕೆ ರಾಜ್ಯ ಸರ್ಕಾರವು ವಹಿಸಿದೆ.

ಆದರೆ, ತನಿಖೆ ನಿರೀಕ್ಷಿತ ಪ್ರಗತಿ ಕಂಡಿಲ್ಲ ಎಂದು ಸಭೆಯಲ್ಲಿ ಚರ್ಚೆ ನಡೆಯಿತು. ಕೆಲವು ಪ್ರಕರಣಗಳಲ್ಲಿ 'ಬಿ' ಅಂತಿಮ ವರದಿ ಸಲ್ಲಿಸಲಾಗಿದೆ. ಯಾಕೆ ಈ ವರದಿ ಸಲ್ಲಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳನ್ನು ಸಮಿತಿಯ ಸದಸ್ಯರು ಪ್ರಶ್ನಿಸಿದ್ದಾರೆ.

ಎಲ್ಲಾ ವಿವರಗಳನ್ನು ಮುಂದಿನ ಸಭೆಯಲ್ಲಿ ಮಂಡಿಸುವುದಾಗಿ ಅಧಿಕಾರಿಗಳು ತಿಳಿಸಿದರು ಎಂದೂ ಗೊತ್ತಾಗಿದೆ.

# ಹಿಂದುಳಿದ ವರ್ಗಗಳನ್ನು ಸೆಳೆಯಲು ಕರ್ನಾಟಕ ಫಾರ್ಮುಲಾ!

## ● ಹಿಂದುಳಿದ ವರ್ಗಗಳನ್ನು ಸೆಳೆಯಲು ಎಐಸಿಸಿ ನಡೆಸುತ್ತಿದೆ ಪ್ಲ್ಯಾನ್ ● ಕಾಂಗ್ರೆಸ್ ರಾಷ್ಟ್ರೀಯ ನಾಯಕತ್ವ ನಿರ್ಧಾರ

• ಉದಯವಾಹಿನಿ, ಬೆಂಗಳೂರು


ಮುಂದಿನ ಲೋಕಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಹಿಂದುಳಿದ ವರ್ಗಗಳನ್ನು ಸೆಳೆಯುವ ನಿಟ್ಟಿನಲ್ಲಿ ಎಐಸಿಸಿ ಮುಂದಾಗಿದೆ. ಇದಕ್ಕಾಗಿ ಕರ್ನಾಟಕದ ಫಾರ್ಮುಲಾವನ್ನು ಅನುಸರಿಸಲು ಕಾಂಗ್ರೆಸ್ ರಾಷ್ಟ್ರೀಯ ನಾಯಕತ್ವ ನಿರ್ಧಾರ ಮಾಡಿದೆ. ಕರ್ನಾಟಕದಲ್ಲಿ ಸಿಎಂ ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗಗಳನ್ನು ಸೆಳೆಯುವಲ್ಲಿ ಯಶಸ್ವಿಯಾಗಿದ್ದಾರೆ. ಅಹಿಂದವೇ ಕರ್ನಾಟಕ ಕಾಂಗ್ರೆಸ್ ಬೆನ್ನೆಲುಬಾಗಿದೆ. ಇದೀಗ ಇದೇ ತಂತ್ರಗಾರಿಕೆಯನ್ನು ರಾಷ್ಟ್ರೀಯ ಮಟ್ಟದಲ್ಲಿ ಬಳಕೆ ಮಾಡಲು ಎಐಸಿಸಿ ಮುಂದಾಗಿದೆ.

**ಎಐಸಿಸಿಯ 2029ರ ಲೆಕ್ಕಾಚಾರ**

ಕರ್ನಾಟಕ ರಾಜಕಾರಣದಲ್ಲಿ ಹಿಂದುಳಿದ ವರ್ಗಗಳನ್ನು ತನ್ನತ್ತ ಸೆಳೆಯುವಲ್ಲಿ ಕಾಂಗ್ರೆಸ್ ಯಶಸ್ವಿಯಾಗಿದೆ. ಇದಕ್ಕೆ ಪ್ರಮುಖ ಕಾರಣಕರ್ತರು ಸಿದ್ದರಾಮಯ್ಯ ಅವರು. ಸಿಎಂ ಸಿದ್ದರಾಮಯ್ಯ ಕರ್ನಾಟಕದಲ್ಲಿ ಹಿಂದುಳಿದ ವರ್ಗಗಳ ಅಗ್ರ ನಾಯಕರಾಗಿ ಗುರುತಿಸಿಕೊಂಡಿದ್ದಾರೆ. ಹಿಂದುಳಿದ, ದಲಿತ ಹಾಗೂ ಅಲ್ಪಸಂಖ್ಯಾತ ಸಮುದಾಯವನ್ನ ಹಿಡಿತದಲ್ಲಿಟ್ಟುಕೊಳ್ಳುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಅಹಿಂದ ವರ್ಗಗಳಿಗೆ ಸಾಮಾಜಿಕ ನ್ಯಾಯ ನೀಡುವ ನಿಟ್ಟಿನಲ್ಲಿ ಸಿದ್ದರಾಮಯ್ಯ ಕೆಲಸ ಮಾಡಿದ್ದಾರೆ. ಜಾತಿ ಗಣತಿಯೂ ಇದರಲ್ಲಿ ಒಂದಾಗಿದೆ. ಆದರೆ ಜಾತಿ ಗಣತಿ ವರದಿ ವಿಚಾರವಾಗಿ ಸಿದ್ದರಾಮಯ್ಯ ಒಂದಿಷ್ಟು ಹಿಂದೇಟನ್ನು ಅನುಭವಿಸಿದ್ದಾರೆ ಎಂಬುವುದು ಸತ್ಯ. ಹೀಗಿದ್ದರೂ ಹಿಂದುಳಿದ ವರ್ಗ ಸಿದ್ದರಾಮಯ್ಯ ಅವರ ಕೈಬಿಟ್ಟಿಲ್ಲ.

ಕಳೆದ ಚುನಾವಣೆಯಲ್ಲಿ ಅಹಿಂದ ವರ್ಗವು ಕಾಂಗ್ರೆಸ್ ಕೈ ಹಿಡಿದ ಕಾರಣದಿಂದಾಗಿ ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೆ ಬಂದಿದೆ. ಅದರಲ್ಲೂ ಸಿದ್ದರಾಮಯ್ಯ ನಾಯಕತ್ವವನ್ನ ಹಿಂದುಳಿದ ವರ್ಗ ಸಂಪೂರ್ಣವಾಗಿ ಒಪ್ಪಿ ಅಪ್ಪಿಕೊಂಡ ಕಾರಣ ಕೈ ಅಧಿಕಾರಕ್ಕೆ ಎಂಬ ನಂಬಿಕೆ ಎಐಸಿಸಿಯಲ್ಲಿಯೂ ಇದೆ. ಇದೇ ಕಾರಣಕ್ಕೆ ಕರ್ನಾಟಕದ ಫಾರ್ಮುಲಾವನ್ನೇ ಎಐಸಿಸಿ ಮಟ್ಟದಲ್ಲೂ ಬಳಸಿಕೊಳ್ಳಬೇಕೆಂಬುವುದು ಎಐಸಿಸಿ ಲೆಕ್ಕಾಚಾರವಾಗಿದೆ.



ಸಿಈ ಸಲಹಾ ಮಂಡಳಿಯಲ್ಲಿ ನಾಲ್ವರು ಮಾಜಿ ಮುಖ್ಯಮಂತ್ರಿಗಳು ಸೇರಿದಂತೆ 24 ಸದಸ್ಯರಿರಲಿದ್ದಾರೆ. ಅದರಲ್ಲೂ ಮುಖ್ಯವಾಗಿ ಈ ಸಲಹಾ ಮಂಡಳಿಯನ್ನು ಸಿದ್ದರಾಮಯ್ಯ ಅವರು ಮುನ್ನಡೆಸಲಿದ್ದಾರೆ. ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಅಗ್ರಗಣ್ಯ ನಾಯಕರಾಗಿರುವ ಸಿದ್ದರಾಮಯ್ಯ ಅವರ ವರ್ಚಸ್ಸನ್ನು ಬಳಸಿಕೊಂಡು ದೇಶದಾದ್ಯಂತ ಹಿಂದುಳಿದ ವರ್ಗಗಳನ್ನು ತನ್ನತ್ತ ಸೆಳೆಯಲು ಎಐಸಿಸಿಯು ಈ ಮಂಡಳಿಯನ್ನು ರಚಿಸಿದೆ. ಇದರ ನೇತೃತ್ವವನ್ನು ಸಿದ್ದರಾಮಯ್ಯ ಅವರೇ ವಹಿಸಿಕೊಳ್ಳಬೇಕು ಎಂದು ರಾಹುಲ್ ಗಾಂಧಿ ಅವರೇ ಸೂಚಿಸಿದ್ದಾರೆ ಎಂದು ತಿಳಿದುಬಂದಿದೆ.

2029 ರಲ್ಲಿ ಲೋಕಸಭೆ ಚುನಾವಣೆ ಎದುರಾಗಲಿದೆ. ಲೋಕ ಚುನಾವಣೆಗೆ ಈಗಾಗಲೇ ಕಾಂಗ್ರೆಸ್ ಸಿದ್ಧತೆಗಳನ್ನು ನಡೆಸುತ್ತಿದೆ. ಅದರಲ್ಲೂ ಹಿಂದುಳಿದ ವರ್ಗಗಳನ್ನು ಸೆಳೆಯಲು ನಾನಾ ಕಸರತ್ತು ನಡೆಯುತ್ತಿದೆ. ಇದರ ಮುಂದುವರಿದ ಭಾಗವಾಗಿಯೇ ಜಾತಿ ಗಣತಿ ನಡೆಸುವಂತೆ ರಾಹುಲ್ ಗಾಂಧಿ ಒತ್ತಡ ಹೇರಿದ್ದರು. ಹಿಂದುಳಿದ ವರ್ಗಗಳಿಗೆ ನ್ಯಾಯಕೊಡಿಸುವ ನಿಟ್ಟಿನಲ್ಲಿ ಜಾತಿಗಣತಿಯೂ ಪ್ರಮುಖ ಅಸ್ತ್ರವಾಗಿದೆ. ಕರ್ನಾಟಕದಲ್ಲಿ 2015 ರಲ್ಲೇ ಸಿಎಂ ಆಗಿದ್ದ ಸಿದ್ದರಾಮಯ್ಯ ಅವರು ಪ್ರಯೋಗ ಮಾಡಿದ್ದರು ಎಂಬುವುದು ಗಮನಾರ್ಹ.

### ಸಿದ್ದರಾಮಯ್ಯ ಹೆಸರು ಸೂಚಿಸಿರೋ ರಾಹುಲ್ ಗಾಂಧಿ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ಅಸ್ತಿತ್ವಕ್ಕೆ ಬಂದಿದೆ. ಜುಲೈ 15ರಂದು ಬೆಂಗಳೂರಿನಲ್ಲಿ ಮೊದಲ ಸಭೆ ನಡೆಯಲಿದೆ. ದೇಶದಲ್ಲಿ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಸಮುದಾಯಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳನ್ನು ಕೂಲಂಕಷವಾಗಿ ಅರಿತು, ಅವುಗಳಿಗೆ ಪರಿಹಾರ ಒದಗಿಸುವ ದಿಕ್ಕಿನಲ್ಲಿ ಕಾರ್ಯತಂತ್ರ ರೂಪಿಸುವ ನಿಟ್ಟಿನಲ್ಲಿ ಈ ಸಮಿತಿ ಮಹತ್ವದ ಪಾತ್ರವನ್ನು ನಿರ್ವಹಣೆ ಮಾಡಲಿದೆ. ಈ ಸಮಿತಿಯು ಮುಂದಿನ ದಿನಗಳಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಹಿಂದುಳಿದ ವರ್ಗಗಳ ಘಟಕಕ್ಕೆ ಪ್ರಮುಖ ಸಲಹೆಗಳನ್ನು ನೀಡಲಿದೆ. ಘಟಕದ ಮುಂದಿನ ಕಾರ್ಯಯೋಜನೆಗಳು ಮತ್ತು ಅವುಗಳ ಅನುಷ್ಠಾನಕ್ಕೆ ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬೇಕು ಎಂಬ ವಿಚಾರವಾಗಿ ಸಲಹೆ ನೀಡಲಿದೆ. ಅಷ್ಟೇ ಅಲ್ಲದೆ, ಮುಂದಿನ ದಿನಗಳಲ್ಲಿ ಹಿಂದುಳಿದ ವರ್ಗಗಳ ಪರವಾಗಿ ಕಾಂಗ್ರೆಸ್ ಕೈಗೆತ್ತಿಕೊಳ್ಳಬೇಕಾದ ವಿಷಯಗಳ ಕುರಿತಾಗಿಯೂ ಈ ಸಮಿತಿ ಸಲಹೆ ನೀಡಲಿದೆ.

**ಈ ದಿನದ ದರ** ಪೆಟ್ರೋಲ್: 103.50 ₹/L | ಡೀಸೆಲ್ : 90.03 ₹/L | ಬಂಗಾರ: ₹9,884/Gram24ct ₹9,060/Gram22ct | ಬೆಳ್ಳಿ: ₹110.00/Gram

# ಮಹಾನಗರ ಪಾಲಿಕೆ ನೌಕರರ ಸಂಘದಿಂದ ಪ್ರತಿಭಟನೆ

## ಬಿಬಿಎಂಪಿ ನೌಕರರ ಕುಂದುಕೂರತೆಗಳನ್ನು ನಿಭಾಯಿಸಬೇಕು,ಸಚಿವರು, ಮುಖ್ಯ ಆಯುಕ್ತರು ಇದರ ಕುರಿತು ಮಾಹಿತಿ

• ಉದಯವಾಹಿನಿ, ಬೆಂಗಳೂರು

ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭವೃದ್ದಿ ಸಂಘ ಕರ್ನಾಟಕ ರಾಜ್ಯ, ಮಹಾನಗರ ಪಾಲಿಕೆ ನೌಕರರ ಸಂಘಗಳ ಪರಿಷತ್ತು ವತಿಯಿಂದ ವಿವಿಧ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಕಾರ್ಯಕ್ರಮ.

ಪ್ರತಿಭಟನಾ ಸ್ಥಳಕ್ಕೆ ಮುಖ್ಯ ಆಯುಕ್ತರಾದ ಮಹೇಶ್ವರರಾವ್ ರವರು ವಿಶೇಷ ಆಯುಕ್ತರಾದ ಸುರಳ್ಕರ್ ವಿಕಾಸ್ ಕಿಶೋರ್ ರವರು, ಪೌರಾಡಳಿತ ಇಲಾಖೆ ನಿರ್ದೇಶರಾದ ಪ್ರಭುಲಿಂಗ ಕವಳಿಕಟ್ಟಿರವರು ಆಗಮಿಸಿ ಮನವಿ ಪತ್ರವನ್ನು ರಾಜ್ಯಾಧ್ಯಕ್ಷರಾದ ಎ.ಅಮೃತ್ ರಾಜ್ ರವರಿಂದ ಸ್ವೀಕರಿಸಿದರು. ಇದೇ ಸಂದರ್ಭದಲ್ಲಿ ಮುಖ್ಯ ಆಯುಕ್ತರಾದ ಮಹೇಶ್ವರರಾವ್ ರವರು ಮಾತನಾಡಿ ಅಧಿಕಾರಿ, ನೌಕರರ ಮೇಲೆ ಸಹನಾಭೂತಿ ಇರಬೇಕು. ಅವರ ಕಷ್ಟಗಳು ಕುರಿತು ನನಗೆ ಅರಿವಿದೆ. ಮುಂದಿನ ದಿನಗಳಲ್ಲಿ ಹೋರಾಟ ಮಾಡುವ ಅವಶ್ಯಕತೆ ಇಲ್ಲ.

ಕುಳಿತು ಚರ್ಚೆ ಮಾಡಿ ಬಗೆಹರಿಸೋಣ, ಸಸ್ಪೆಂಡ್ ಅದ ನೌಕರರ ಕುರಿತು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇನೆ. ಸಂಘದವರು ಇಟ್ಟ ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಎಂದು ಹೇಳಿದರು. ಸುರಳ್ಕರ್ ವಿಕಾಸ್ ಕಿಶೋರ್ ರವರು ಮಾತನಾಡಿ ವಿವಿಧ ಬೇಡಿಕೆಗಳ ಕುರಿತು ಪ್ರತಿಭಟನೆ ಮಾಡುತ್ತಿದ್ದಾರೆ ಬಿಬಿಎಂಪಿ ನೌಕರರ ಕುಂದುಕೂರತೆಗಳನ್ನು



ಉದಯವಾಹಿನಿ ಚಿತ್ರ

ನಿಭಾಯಿಸಬೇಕು,ಸಚಿವರು, ಮುಖ್ಯ ಆಯುಕ್ತರು ಇದರ ಕುರಿತು ಮಾಹಿತಿ ನೀಡಲಾಗುತ್ತದೆ.

ನೌಕರರಿಗೆ ಸಹಾಯ ಮಾಡಬೇಕು ಎಂಬುದು ನಮ್ಮ ನಿಲುವು, ನೌಕರರಿಗೆ ಹುರದುಂಬಿಸಿ ಕೆಲಸ ಕಾರ್ಯ ಮಾಡಿಸುತ್ತೇವೆ. ರಾಜ್ಯಾಧ್ಯಕ್ಷರಾದ ಎ.ಅಮೃತ್ ರಾಜ್ ರವರು ಮಾತನಾಡಿ ಪಾಲಿಕೆ ನಮ್ಮ ಮಾತೃ ಸಂಸ್ಥೆ ನಮ್ಮ ಹೋರಾಟ ಅಧಿಕಾರಿಗಳ ವಿರುದ್ದ ಅಲ್ಲ. ಬಿಬಿಎಂಪಿ ನಮ್ಮ ಸಂಘವು 12 ಬೇಡಿಕೆಗಳಿಗೆ ಮುಖ್ಯ ಆಯುಕ್ತರು ಉತ್ತಮ ಸ್ಪಂದನೆ ನೀಡಿದ್ದಾರೆ ಮತ್ತು ಸಸ್ಪೆಂಡ್ ಅದ ನೌಕರರನ್ನು ಈಗಾಗಲೇ ವಾಪಸ್ಸು ಪಡೆದಿದ್ದಾರೆ.

ಹತ್ತು ಮಹಾನಗರ ಪಾಲಿಕೆ ಬೇಡಿಕೆಗಳ ಕುರಿತು ಸಚಿವರು,

> ಪ್ರಾಮಾಣಿಕ ಪ್ರಯತ್ನದಿಂದ ನ್ಯಾಯ ಕೊಡಿಸುತ್ತೇನೆ ಎಂದು ಹೇಳಿದರು. ಪೌರಾಡಳಿತ ನಿರ್ದೇಶಕರಾದ ಪ್ರಭುಲಿಂಗ ಕವಳಿಕಟ್ಟಿರವರು ಪೌರಾಡಳಿತ ಇಲಾಖೆ ಸಂಭಂದಪಡುವ 13ಮಹಾನಗರ ಪಾಲಿಕೆಯಲ್ಲಿ ಸಮಸ್ಯೆಗಳ,ಕಷ್ಟಗಳ ಕುರಿತು ಅರಿವಿದೆ, ಸರಿಪಡಿಸಲು ಸರ್ಕಾರ ಜೊತೆಯಲ್ಲಿ ಅಲೋಚನೆ ಮಾಡಿ, ಕ್ರಮ ಕೈಗೊಳಲಾಗುವುದು. 7ನೇ ವೇತನ ಆಯೋಗ, ವೃಂದ ನೇಮಕಾತಿ ಮಾರ್ಪಡು ಮಾಡಿ ಮುಂಬಡ್ತಿ ನೀಡಲು ತಿದ್ದುಪಡಿ ಮಾಡಲಾಗುವುದು. ನಿಮ್ಮ ಬೇಡಿಕೆಗಳಲ್ಲಿ 5 ಈಡೇರಿಕೆಯಾಗಿದೆ, ಹಣಕಾಸು ಇಲಾಖೆ ಅನುಮೋದನೆ ಕೋರಲಾಗಿದೆ. ತಮ್ಮ ಬೇಡಿಕೆಗಳು ಕುರಿತು ಸರ್ಕಾರ ಚರ್ಚೆ ಸಮಾಲೋಚನೆ ಮಾಡುತ್ತಿದೆ ಎಂದು ಹೇಳಿದರು.

ಕಾರ್ಯದರ್ಶಿಗಳು ಪ್ರತಿಭಟನಾ ಸ್ಥಳಕ್ಕೆ ಬಂದಿಲ್ಲ, ಬೇಡಿಕೆಗಳು ಕುರಿತು ಮಾತನಾಡಿಲ್ಲ ಇದರಿಂದ ಪಾಲಿಕೆ ನೌಕರರು ಅಸಮಾಧಾನರಾಗಿದ್ದಾರೆ.

**ಫ್ರೀಡಂ ಪಾರ್ಕ್‌ನಲ್ಲಿ ಬೃಹತ್ ಪ್ರತಿಭಟನೆ ಕಾರ್ಯಕ್ರಮ**

ಹತ್ತು ಮಹಾನಗರ ಪಾಲಿಕೆ ಸಮಸ್ಯೆಗಳು ಕುರಿತು ನಾಳೆಯಿಂದ ಹೋರಾಟ ಮುಂದುವರಯಲಿದೆ. ಮಹಾನಗರ ಪಾಲಿಕೆ ಕಛೇರಿ ಮುಂಭಾಗದಲ್ಲಿ ಹೋರಾಟ ಮಾಡಲಿದ್ದೇವೆ.


ಗೌರವಾಧ್ಯಕ್ಷರಾದ ಎಸ್.ಹೆಚ್.ಗುರು ಮೂರ್ತಿ, ಸಚಿವಾಲಯ ನೌಕರರ ಸಂಘದ ಅಧ್ಯಕ್ಷರಾದ ರಮೇಶ್ ಸಂಗಾ, ರಾಜ್ಯ ಉಪಾಧ್ಯಕ್ಷರುಗಳಾದ ಜಿ.ವೆಂಕಟ್ ರಾಮ್, ವೇಣುಗೋಪಾಲ್ ಬಿ.ಎನ್. ಮತ್ತು ಪ್ರಧಾನ ಕಾರ್ಯದರ್ಶಿ ಟಿ.ಸಿ.ಬಸವರಾಜಯ್ಯ, ಖಜಾಂಚಿ ರುದ್ರೇಶ್ ಬಿ ಹಾಗೂ ರಾಜ್ಯ ಕಾರ್ಯದರ್ಶಿ ಪ್ರಹ್ಲಾದ್ ಕುಲಕರ್ಣಿ, ರಾಜ್ಯ ನಿರ್ದೇಶಕರುಗಳಾದ ಸಾಯಿಶಂಕರ್, ಜಗದೀಶ್ ಎಸ್, ಎ.ಜಿ.ಬಾಬು, ಶ್ರೀನಿವಾಸ್ ಕಟ್ಟಿ, ಬಾಬು ಪಿ, ನರಸಿಂಹ ಕೆ, ಶಾಂತಪ್ಪ ಮುಖೇಶಪ್ಪ ಪತ್ತಾರ, ರವೀಂದ್ರ ಶಿರಶ್ಯಾದ ಮತ್ತು 10 ಮಹಾನಗರ ಪಾಲಿಕೆ ಅಧ್ಯಕ್ಷರು, ಪದಾಧಿಕಾರಿಗಳು, ಸದಸ್ಯರುಗಳು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು

ಬಿಬಿಎಂಪಿ ಕಂದಾಯ, ಆರೋಗ್ಯ, ಇಂಜನಿಯರ್ ಮತ್ತು ಪೌರ ಕಾರ್ಮಿಕರ ಸಂಘಟನೆಗಳು, ರುದ್ರಭೂಮಿ ನೌಕರರು, ಐ.ಟಿ.ಮತ್ತು ಹೊರಗುತ್ತಿಗೆ ನೌಕರರು, ಆಡಳಿತ ಕಛೇರಿ ಅಧಿಕಾರಿ ಸಿಬ್ಬಂದಿಗಳು, ಹುಬಳ್ಳಿ-ಧಾರವಾಡ, ತುಮಕೂರು, ಮಂಗಳೂರು, ಶಿವಮೊಗ್ಗ, ದಾವಣಗೆರೆ, ಮೈಸೂರು, ವಿಜಯಪುರ ಹಾಗೂ ಕಲಬುರಗಿ, ಬೆಳಗಾಂ, ಬಳ್ಳಾರಿ ಮಹಾನಗರ ಪಾಲಿಕೆ ಅಧಿಕಾರಿ, ನೌಕರರು ಸಿಬ್ಬಂದಿಗಳು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

# ದಾಸವಾಣಿ ಕಾರ್ಯಕ್ರಮ

• ಉದಯವಾಹಿನಿ, ಬೆಂಗಳೂರು

ಜಯನಗರದ 5ನೇ ಬಡಾವಣೆಯ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ



ಆದೇಶದಂತೆ ಶ್ರೀಮಠದ ಹಿರಿಯ ವ್ಯವಸ್ಥಾಪಕರಾದ ಶ್ರೀ ಆರ್ ಕೆ ವಾದೀಂದ್ರಾಚಾರ್ಯರ ನೇತೃತ್ವದಲ್ಲಿ ಜುಲೈ 10, ಗುರುವಾರ ಸಂಜೆ 5-15ಕ್ಕೆ ದಾಸವಾಣಿ ಕಾರ್ಯಕ್ರಮ. ಗಾಯನ ಕು|| ಮನಸ್ವಿ ಕಶ್ಯಪ್ ಮತ್ತು ಕು|| ವರ್ಣ ಶ್ರೀ ಮುರೂರ್. ಕೀ-ಬೋರ್ಡ್ : ವಿದ್ವಾನ್ ಶ್ರೀ ಜಯರಾಮಾಚಾರ್‌ತಬಲಾ: ಶ್ರೀ ಸತ್ಯಪ್ರಮೋದ ಇವರಿಂದ ಏರ್ಪಡಿಸಲಾಗಿದೆ ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದ್ದಾರೆ. ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೇ ಬಡಾವಣೆ, ಬೆಂಗಳೂರು 41

# ಆನ್ ಲೈನ್ ಬೆಟ್ಟಿಂಗ್ ನಿಷೇಧಕ್ಕೆ ಸರ್ಕಾರ ಚಿಂತನೆ: ಅಧಿವೇಶನದಲ್ಲಿ ಮಸೂದೆ ಮಂಡನೆ


• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರವು ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿ ಆನ್ ಲೈನ್ ಬೆಟ್ಟಿಂಗ್ ಮತ್ತು ಜೂಜಾಟವನ್ನು ನಿಷೇಧಿಸಲು ಕರ್ನಾಟಕ ಪೊಲೀಸ್ ಕಾಯ್ದೆ, 1963ಗೆ ತಿದ್ದುಪಡಿ ತರಲು ಮುಂದಾಗಿದೆ. ಮಸೂದೆಯು ಕಾಯ್ದೆಯಾಗಿ ಮಾರ್ಪಟ್ಟರೆ, ಅದೃಷ್ಟ, ರ್ಯಾಂಡಮ್ ಅಥವಾ ಅನಿಶ್ಚಿತತೆ ಫಲಿತಾಂಶವನ್ನು ನಿರ್ಧರಿಸುವ ಯಾವುದೇ ಗೇಮ್, ಸ್ಪರ್ಧೆ ಅಥವಾ ಚಟುವಟಿಕೆಗಳು ಆನ್‌ಲೈನ್ ಜೂಜಾಟ, ಬೆಟ್ಟಿಂಗ್ ಮತ್ತು ಪಂಥದಂತಹ ಆಟಗಳಿಗೆ ಕಡಿವಾಣ ಹಾಕುತ್ತದೆ. ಕರಡು ಮಸೂದೆಯ ಪ್ರಕಾರ, ಇಂಟರ್ನೆಟ್, ಮೊಬೈಲ್ ಅಪ್ಲಿಕೇಶನ್‌ಗಳು ಅಥವಾ ಇತರ ಡಿಜಿಟಲ್ ಪ್ಲಾಟ್‌ಫಾರ್ಮ್‌ಗಳ ಮೂಲಕ ನಡೆಸಲಾಗುವ ಪಂದ್ಯ ಅಥವಾ ಚಟುವಟಿಕೆಯ ಫಲಿತಾಂಶದ ಮೇಲೆ ಹಣ, ಟೋಕನ್‌ಗಳು, ವರ್ಚುವಲ್ ಕರೆನ್ಸಿ ಅಥವಾ ಎಲೆಕ್ಟ್ರಾನಿಕ್ ನಿಧಿಗಳ ಪಣತೊಡುವುದು ಅಥವಾ ಪಣಕ್ಕಿಡುವ ಯಾವುದೇ ರೂಪದಲ್ಲಿ ಆನ್‌ಲೈನ್ ಬೆಟ್ಟಿಂಗ್‌ನ್ನು ಇದು ನಿಷೇಧಿಸುತ್ತದೆ. ಕೌಶಲ್ಯದ ಆಟಕ್ಕೆ ಈ ಮಸೂದೆಯಡಿ ವಿನಾಯ್ತಿ ನೀಡಲಾಗುತ್ತದೆ. ಯಾವುದೇ ಆಟ, ಸ್ಪರ್ಧೆ ಅಥವಾ ಚಟುವಟಿಕೆಯಲ್ಲಿ ಫಲಿತಾಂಶವು ಭಾಗವಹಿಸುವವರ ಕೌಶಲ್ಯ, ಜ್ಞಾನ, ತರಬೇತಿ ಅಥವಾ ಪರಿಣತಿಯಿಂದ ನಿರ್ಧರಿಸಲ್ಪಡುವುದಿದ್ದರೆ ಅದಕ್ಕೆ ಅವಕಾಶವಿದೆ. ರಾಜ್ಯ ಸರ್ಕಾರ ಅಥವಾ ಗೊತ್ತುಪಡಿಸಿದ ಪ್ರಾಧಿಕಾರವು ನಿರ್ಧರಿಸಿದಂತೆ ಕೌಶಲ್ಯದ ಆಟಗಳು, ನಿಯಂತ್ರಣ ಮತ್ತು ಪರವಾನಗಿಗೆ ಒಳಪಟ್ಟು ನಿಷೇಧದಿಂದ ವಿನಾಯಿತಿ ಪಡೆಯುತ್ತವೆ ಎಂದು ಮಸೂದೆ ಸ್ಪಷ್ಟಪಡಿಸಿದೆ.

# 200 ಅಕ್ರಮ ಬಾಂಗ್ಲಾದೇಶಿಗಳ ಗಡಿಪಾರು: ಪರಂ

• ಉದಯವಾಹಿನಿ, ಬೆಂಗಳೂರು

ಕಳೆದ ಕೆಲವು ತಿಂಗಳುಗಳಲ್ಲಿ 200 ಕ್ಕೂ ಹೆಚ್ಚು ಅಕ್ರಮ ಬಾಂಗ್ಲಾದೇಶಿ ವಲಸಿಗರನ್ನು ರಾಜ್ಯದಿಂದ ಗಡೀಪಾರು ಮಾಡಲಾಗಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ ಹೇಳಿದ್ದಾರೆ.



ಮಾಧ್ಯಮಗಳೊಂದಿಗೆ ಮಾತನಾಡಿದ ಅವರು ನಿರ್ಮಾಣ ಕಾರ್ಮಿಕರಾಗಿ ಕೆಲಸ ಮಾಡುತ್ತಿರುವ ಇಂತಹ ಅನೇಕ ವಲಸಿಗರ ವಿರುದ್ಧ ದೂರುಗಳು ಬಂದಿವೆ ಎಂದರು. ರಾಜ್ಯ ಸರ್ಕಾರವು ಅಕ್ರಮ ವಲಸಿಗರನ್ನು ತಕ್ಷಣ ಗಡೀಪಾರು ಮಾಡಲು ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ.

ಇದು ನಿರಂತರ ಪ್ರಕ್ರಿಯೆ ಎಂದು ತಿಳಿಸಿದ್ದಾರೆ. ಪ್ರಾದೇಶಿಕ ನೋಂದಣಿ ಕಚೇರಿಯ ಅಧಿಕಾರಿಗಳು ಅಂತಹ ಅಕ್ರಮ ವಲಸಿಗರನ್ನು ಗುರುತಿಸಿ ಪೊಲೀಸರಿಗೆ ತಿಳಿಸುತ್ತಾರೆ ಎಂದು ಅವರು ಹೇಳಿದರು. ನಾವು ನಿರ್ಮಾಣ ಕಾರ್ಮಿಕರ ಮೇಲೆ ನಿಗಾ ಇಡುತ್ತಿದ್ದೇವೆ ಅವರು ಅಕ್ರಮ ವಲಸಿಗರೆಂದು ಕಂಡುಬಂದರೆ, ಅವರನ್ನು ಗಡೀಪಾರು ಮಾಡಲಾಗುತ್ತದೆ ಎಂದರು. ಸರ್ಕಾರ ಅಕ್ರಮ ವಲಸಿಗರ ಬಗ್ಗೆ ಮೃದು ಧೋರಣೆ ತಳೆಯುವುದಿಲ್ಲ. ಕಾಂಗ್ರೆಸ್ ಅಂತಹ ಅಕ್ರಮ ವಲಸಿಗರನ್ನು ಮತಬ್ಯಾಂಕ್ ಆಗಿ ಬಳಸುತ್ತದೆ ಎಂಬ ಆರೋಪದ ಕುರಿತು ಪ್ರತಿಕ್ರಿಯಿಸಿದ, ಡಾ. ಪರಮೇಶ್ವರ್, ಚುನಾವಣೆಯಲ್ಲಿ ಗೆಲ್ಲಲು ಅಕ್ರಮ ವಲಸಿಗರ ಮತಗಳ ಅಗತ್ಯವಿರುವ ಪರಿಸ್ಥಿತಿಯಲ್ಲಿ ಪಕ್ಷ ಎಂದಿಗೂ ಇರಲಿಲ್ಲ ಎಂದು ಹೇಳಿದರು

# ವರದಕ್ಷಿಣೆ ಕಿರುಕುಳ: ಐಎಸ್‌ಡಿ ಡಿವೈಎಸ್‌ಪಿ ವಿರುದ್ಧ ಎಫ್‌ಐಆರ್

• ಉದಯವಾಹಿನಿ, ಬೆಂಗಳೂರು

ವರದಕ್ಷಿಣೆ ಕಿರುಕುಳ ನೀಡಿದ್ದ ಆರೋಪದಡಿ ಆಂತರಿಕ ಭದ್ರತಾ ವಿಭಾಗದ ಡಿವೈಎಸ್‌ಪಿಯೊಬ್ಬರ ವಿರುದ್ಧ ಈಶಾನ್ಯ ಮಹಿಳಾ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಡಿವೈಎಸ್‌ಪಿ ಆರ್.ಶಂಕರಪ್ಪ ಮತ್ತೊಬ್ಬ ಮಹಿಳೆಯ ವಿರುದ್ಧ ದೂರು ನೀಡಲಾಗಿದ್ದು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. 'ಶಂಕರಪ್ಪ ಅವರಿಗೆ ದೂರುದಾರಳ ತಂದೆ, ಮದುವೆಯ ಸಂದರ್ಭದಲ್ಲಿ ಚಿನ್ನಾಭರಣ, ಬೈಕ್ ಹಾಗೂ ಗೃಹೋಪಯೋಗಿ ವಸ್ತುಗಳನ್ನು ಕೊಟ್ಟಿದ್ದರು. ಶಂಕರಪ್ಪ ಅವರು ಶಿಕ್ಷಕ ವೃತ್ತಿ ಬಿಟ್ಟು ಪೊಲೀಸ್ ಕೆಲಸಕ್ಕೆ ಸೇರಿದ್ದರು. ಪೊಲೀಸ್ ಇಲಾಖೆಗೆ ಸೇರಿದ ಮೇಲೆ ತನ್ನ ಸ್ಟೇಟಸ್ ಜಾಸ್ತಿಯಾಗಿದ್ದು, ಅದಕ್ಕೆ ತಕ್ಕಂತೆ ವರದಕ್ಷಿಣೆ ತೆಗೆದುಕೊಂಡು ಬರುವಂತೆ ಹೇಳುತ್ತಿದ್ದರು. ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ. ಶೌಚಾಲಯದಲ್ಲಿ ಜಾರಿ ಬೀಳುವಂತೆ ಒದ್ದಿದ್ದಾರೆ. ಮಾನಸಿಕ ಹಾಗೂ ದೈಹಿಕ ಕಿರುಕುಳ ನೀಡಿದ್ದಾರೆ. ಎರಡು ವರ್ಷಗಳಿಂದ ಬೇರೆ ಮಹಿಳೆಯ ಜತೆಗೆ ಸಲುಗೆಯಿಂದ ಇದ್ದಾರೆ. ಆಕೆಯ ಮಾತು ಕೇಳಿಕೊಂಡು ನಿಂದನೆ ಮಾಡುತ್ತಿದ್ದಾರೆ' ಎಂಬ ದೂರು ಆಧರಿಸಿ ಎಫ್ ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

# ರೂ.250 ಕೋಟಿ ಬಿಲ್ ಬಾಕಿ: ಆಹಾರ ಧಾನ್ಯ ಸಾಗಣೆ ಸ್ಥಗಿತ

• ಉದಯವಾಹಿನಿ, ಬೆಂಗಳೂರು

ಅನ್ನಭಾಗ್ಯ ರಾಷ್ಟ್ರೀಯ ಆಹಾರ ಭದ್ರತೆ ಕಾಯ್ದೆ (ಎನ್‌ಎಫ್‌ಎಸ್‌ಎ) ಯೋಜನೆಗಳ ಆಹಾರ ಧಾನ್ಯ ಸಾಗಣೆ ವೆಚ್ಚದ ಬಿಲ್ ಐದು ತಿಂಗಳಿನಿಂದ ಪಾವತಿ ಮಾಡದೇ ಇರುವುದನ್ನು ಖಂಡಿಸಿ, ರಾಜ್ಯ ಪಡಿತರ ಆಹಾರ ಧಾನ್ಯಗಳ ಸಗಟು, ಚಿಲ್ಲರೆ ಸಾಗಾಣಿಕೆ ಗುತ್ತಿಗೆದಾರರ ಸಂಘವು ಆಹಾರಧಾನ್ಯ ಪೂರೈಕೆಯನ್ನು ಸೋಮವಾರದಿಂದ ಸ್ಥಗಿತಗೊಳಿಸಿದೆ.

ಫೆಬ್ರುವರಿಯಿಂದ ಜೂನ್‌ವರೆಗೆ ಅನ್ನಭಾಗ್ಯ ಯೋಜನೆ' ಏಪ್ರಿಲ್, ಮೇ ಮತ್ತು ಜೂನ್ ತಿಂಗಳ ಎನ್‌ಎಫ್‌ಎಸ್‌ಎ ಯೋಜನೆಯಡಿಯಲ್ಲಿ ಆಹಾರ ಧಾನ್ಯ ಸಾಗಣೆಗೆ ಮಾಡಿರುವ ವೆಚ್ಚವನ್ನು ಸರ್ಕಾರ ಪಾವತಿ ಮಾಡಿಲ್ಲ. ಹೀಗಾದರೆ ಗುತ್ತಿಗೆ ಪಡೆದಿರುವ ಲಾರಿ ಮಾಲೀಕರು ಬದುಕುವುದು ಹೇಗೆ' ಎಂದು ಸಂಘದ ಅಧ್ಯಕ್ಷ ಜಿ.ಆರ್. ಷಣ್ಮುಗಪ್ಪ ಪ್ರಶ್ನಿಸಿದ್ದಾರೆ.

ರೂ. 4,500 ಲಾರಿಗಳು ಪ್ರತಿ ತಿಂಗಳಿಗೆ 4.5 ಲಕ್ಷ ಟನ್‌ನಂತೆ ಐದು ತಿಂಗಳು ಸುಮಾರು 25 ಲಕ್ಷ ಟನ್ ಆಹಾರ ಧಾನ್ಯ ಸಾಗಣೆ ಮಾಡಿವೆ. ಬಾಕಿ ಮೊತ್ತ ಪಾವತಿಸುವಂತೆ ನಾವು ಕಳೆದ ತಿಂಗಳು ಕೋರಿದಾಗ ನಮ್ಮನ್ನು ಮಾತುಕತೆಗೆ ಕರೆದಿದ್ದರು. ಜೂನ್ 25ರ ಒಳಗೆ ರೂ.250 ಕೋಟಿಯಲ್ಲಿ ರೂ.100 ಕೋಟಿ ಪಾವತಿಸುವುದಾಗಿ ಸರ್ಕಾರ ಭರವಸೆ


ಉದಯವಾಹಿನಿ ಚಿತ್ರ

> 9 ತಿಂಗಳ ಹಿಂದೆ ಸಾಗಾಣಿಕೆ ಟೆಂಡರ್‌ಗಳಲ್ಲಿ ಭಾಗವಹಿಸುವಾಗ ನೀಡಿದ್ದ ಇಎಂಡಿ ಮೊತ್ತವನ್ನು ಬ್ಯಾಂಕ್ ಗ್ಯಾರಂಟಿ ನೀಡಿದ ಮೇಲೂ ಗುತ್ತಿಗೆದಾರರಿಗೆ ಮರುಪಾವತಿ ಮಾಡಿಲ್ಲ. ಟೆಂಡರ್ ಆಗದವರಿಗೂ ಇಎಂಡಿ ಹಣ ಹಿಂತಿರುಗಿಸಿಲ್ಲ. ಇದುವೇ ಸುಮಾರು ರೂ. 25 ಕೋಟಿ ಮರು ಪಾವತಿ ಬಾಕಿ ಇದೆ ಎಂದು ಹೇಳಿದ್ದಾರೆ. 250 ಕೋಟಿ ಬಿಡುಗಡೆ ಆಗುವವರೆಗೂ ನಾವು ಆಹಾರ ಧಾನ್ಯ ಪೂರೈಸುವುದಿಲ್ಲ. ಮುಷ್ಕರವು ಅನಿರ್ದಿಷ್ಟಾವಧಿ ಮುಂದುವರಿಯಲಿದೆ' ಎಂದು ತಿಳಿಸಿದ್ದಾರೆ.

ನೀಡಿತ್ತು. ಆದರೆ, ಒಂದು ರೂಪಾಯಿಯನ್ನು ಕೂಡ ಬಿಡುಗಡೆ ಮಾಡಿಲ್ಲ' ಎಂದು ತಿಳಿಸಿದ್ದಾರೆ.

# ರೂ.4.5 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

• ಉದಯವಾಹಿನಿ, ಬೆಂಗಳೂರು

ಸಾರ್ವಜನಿಕರಿಗೆ ಮಾದಕ ವಸ್ತುಗಳನ್ನು ಮಾರಾಟ ಮಾಡಲು ಪ್ರಯತ್ನಿಸಿದ ಆರೋಪದ ಮೇರೆಗೆ ಇಬ್ಬರು ವಿದೇಶಿ ಪ್ರಜೆಗಳನ್ನು ಬಂಧಿಸಿರುವ ರಾಜಾನುಕುಂಟೆ ಠಾಣೆ ಪೊಲೀಸರು ಆರೋಪಿಗಳಿಂದ ರೂ. 4.5 ಕೋಟಿ ಮೌಲ್ಯದ ಡ್ರಗ್ಸ್ ವಶಪಡಿಸಿಕೊಂಡಿದ್ದಾರೆ.

ಖಚಿತ ಮಾಹಿತಿ ಮೇರೆಗೆ ಯಲಹಂಕ ತಾಲ್ಲೂಕಿನ ಅದ್ದಿಗಾನಹಳ್ಳಿ ಗ್ರಾಮದಲ್ಲಿ ವಿದೇಶಿ ಪ್ರಜೆಗಳು ವಾಸವಿದ್ದ ಬಾಡಿಗೆ ಮನೆ ಮೇಲೆ ಪೊಲೀಸರು ದಾಳಿ ನಡೆಸಿದ ವೇಳೆ, ಮಾದಕ ವಸ್ತುಗಳು ಪತ್ತೆಯಾಗಿವೆ. ನೈಜೀರಿಯಾದ ಅಲ್ಲೊನೆ ಪೀಟರ್ ಒಬಿಯಾಮ್, ಸಂಡೇ ವಿಂಡಮ್ ಅವರನ್ನು ಬಂಧಿಸಿ, ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಈ ಕುರಿತು ಗ್ರಾಮಾಂತರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಕೆ.ಬಾಬಾ ಮಾತನಾಡಿ, ಇಬ್ಬರು ನೈಜೀರಿಯಾ ಪ್ರಜೆಗಳನ ಬಂಧಿಸಲಾಗಿದೆ. ಆರೋಪಿಗಳು ವೈದ್ಯಕೀಯ ವಿದ್ಯಾಭ್ಯಾಸಕ್ಕಾಗಿ ದೆಹಲಿಗೆ ಬಂದಿದ್ದರು. ಅಲ್ಲಿಂದ ಬೆಂಗಳೂರಿಗೆ ಬಂದು, ಅದ್ದಿಗಾನಹಳ್ಳಿಯಲ್ಲಿ ಬಾಡಿಗೆ ಮನೆ ಪಡೆದು ವಾಸವಾಗಿದ್ದರು ಎಂದರು.

# ಥೈಲ್ಯಾಂಡ್‌ಗೆ ತೆರಳಲು ದರ್ಶನ್‌ಗೆ ಕೋರ್ಟ್ ಅವಕಾಶ

• ಉದಯವಾಹಿನಿ, ಬೆಂಗಳೂರು



ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಆರೋಪಿ ದರ್ಶನ್ ವಿದೇಶ ಪ್ರವಾಸಕ್ಕೆ ತೆರಳಲು ಕೋರ್ಟ್ ಈಗ ಅನುಮತಿ ನೀಡಿದೆ. ಡೆವಿಲ್ ಚಿತ್ರದ ಚಿತ್ರೀಕರಣಕ್ಕಾಗಿ ದರ್ಶನ್ ಈ ಅನುಮತಿಯನ್ನು ಪಡೆದುಕೊಂಡಿದ್ದಾರೆ.

ಈ ಹಿಂದೆ ಇಸ್ರೇಲ್‌ನಲ್ಲಿ ಚಿತ್ರೀಕರಣಕ್ಕೆ ತೀರ್ಮಾನಿಸಲಾಗಿತ್ತು. ಆದರೆ, ಇಸ್ರೇಲ್ ನಲ್ಲಿ ಯುದ್ಧದ ವಾತಾವರಣ ಹಿನ್ನೆಲೆ ಪ್ರಯಾಣ ಕೈಬಿಟ್ಟ ಚಿತ್ರತಂಡ ಥೈಲ್ಯಾಂಡ್‌ನಲ್ಲಿ ಮಾತ್ರ ಚಿತ್ರೀಕರಣ ಮಾಡಲು ನಿರ್ಧರಿಸಿದೆ. ಡೆವಿಲ್ ಶೂಟಿಂಗ್‌ನಲ್ಲಿ ದರ್ಶನ್ ಈ ಹಿಂದೆ ಕೋರ್ಟ್‌ನಲ್ಲಿ ಜು.1ರಿಂದ ಜು.25ರ ವರೆಗೆ ಅವಕಾಶ ಪಡೆಯಲಾಗಿತ್ತು.

ಆದರೆ, ಇಸ್ರೇಲ್‌ನಲ್ಲಿ ಯುದ್ಧ ನಡೆಯುತ್ತಿದ್ದು, ಆ ದೇಶದಲ್ಲಿ ಚಿತ್ರೀಕರಣ ಕೈಬಿಡಲಾಗಿದೆ. ಇದೀಗ ಜು.11 ರಿಂದ ಜು.30 ರವರೆಗೆ ಅವಕಾಶ ನೀಡುವಂತೆ ಕೋರ್ಟ್‌ಗೆ ಮನವಿ ಮಾಡಿತ್ತು.

ದರ್ಶನ್ ಪರ ವಕೀಲ ಎಸ್.ಸುನಿಲ್ ಕುಮಾರ್ ವಾದ ಮಂಡಿಸಿದರು. ವಿದೇಶ ಪ್ರಯಾಣದ ದಿನಾಂಕ ಮರುನಿಗದಿಗೆ ಕೋರಿ ದರ್ಶನ್ ಅವರು 57ನೇ ಸೆಷನ್ಸ್ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಡೆವಿಲ್ ಸಿನಿಮಾ ಶೂಟಿಂಗ್‌ಗೆ ವಿದೇಶಕ್ಕೆ ತೆರಳಲು ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿಯಾಗಿರುವ ದರ್ಶನ್‌ಗೆ ಜುಲೈ 1 ರಿಂದ 25ರ ವರೆಗೆ ಕೋರ್ಟ್ ಅನುಮತಿ ನೀಡಿತ್ತು. ಆದರೆ ಇಸ್ರೇಲ್ ಇರಾನ್ ಮಧ್ಯೆ ಯುದ್ಧದ ವಾತಾವರಣದಿಂದ ದುಬೈ ಪ್ರಯಾಣವನ್ನು ಚಿತ್ರ ತಂಡ ಕೈಬಿಟ್ಟಿದೆ. ಆದರೆ, ಈಗ ಶೂಟಿಂಗ್ ಅನ್ನು ಥಾಯ್ಲೆಂಡ್‌ನಲ್ಲಿ ಮಾತ್ರ ಮಾಡಲು ಚಿತ್ರತಂಡ ಪ್ಲ್ಯಾನ್ ಮಾಡಿದೆ

# ಆಗಸ್ಟ್ 25 ರಂದು ದೆಹಲಿಯಲ್ಲಿ ರೈತರ ರ್‍ಯಾಲಿ

• ಉದಯವಾಹಿನಿ, ಬೆಂಗಳೂರು

ಪ್ರಸ್ತಾವಿತ ಭಾರತ-ಅಮೆರಿಕ ವ್ಯಾಪಾರ ಒಪ್ಪಂದವನ್ನು ವಿರೋಧಿಸಿ, ರೈತರ ಪ್ರಮುಖ ಬೇಡಿಕೆಗಳಿಗೆ ಒತ್ತಾಯಿಸಲು ಆಗಸ್ಟ್ 25 ರಂದು ದೆಹಲಿಯಲ್ಲಿ ರೈತರ ರ್‍ಯಾಲಿ ನಡೆಸಲಾಗುವುದು ಎಂದು ಸಂಯುಕ್ತ ಕಿಸಾನ್ ಮೋರ್ಚಾ ರಾಜಕೀಯೇತರ ಸಂಘಟನೆ ಘೋಷಿಸಿದೆ. ರಾಷ್ಟ್ರೀಯ ಕಾರ್ಯಕಾರಿ ಮಂಡಳಿ ಸಭೆ ಮತ್ತು ರಾಜ್ಯ ಮಟ್ಟದ ರೈತರ ಸಮ್ಮೇಳನದಲ್ಲಿ ಈ ನಿರ್ಧಾರ ತೆಗೆದು ಕೊಳ್ಳಲಾಗಿದೆ ಎಂದು ಹೇಳಿದೆ. ರಾಜ್ಯ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್, ದೇಶದ ರೈತರಿಗೆ ಖಾತರಿಪಡಿಸಿದ ಕನಿಷ್ಠ ಬೆಂಬಲ ಬೆಲೆ (MSP)ಯನ್ನು ಸರ್ಕಾರ ನಿಗದಿಪಡಿಸಿ ನೀಡುವುದು ನಮ್ಮ ಪ್ರಮುಖ ಬೇಡಿಕೆಗಳಲ್ಲಿ ಒಂದಾಗಿದೆ. ಪ್ರಸ್ತುತ, MSPಯನ್ನು ಹೆಸರಿಗೆ ಮಾತ್ರ ಘೋಷಿಸಲಾಗಿದೆ, ಹೆಚ್ಚಿನ ರೈತರು ಅದನ್ನು ನಿಜವಾಗಿಯೂ ಪಡೆಯುತ್ತಿಲ್ಲ. ಇದು ಗಂಭೀರ ಅನ್ಯಾಯವಾಗಿದೆ ಎಂದರು. ಸಂಯುಕ್ತ ಕಿಸಾನ್ ಮೋರ್ಚಾ ಬೆಂಗಳೂರಿನಲ್ಲಿ ಆಯೋಜಿಸಿದ್ದ ರಾಜ್ಯಮಟ್ಟದ ಸಮಾವೇಶದಲ್ಲಿ ರೈತ ಮುಖಂಡರು. ಇಂತಹ ನೀತಿಗಳು ರೈತರಿಗೆ ಮಾತ್ರವಲ್ಲದೆ ಜನರ ಆರೋಗ್ಯ ಮತ್ತು ಆಹಾರ ಭದ್ರತೆಗೂ ಅಪಾಯವನ್ನುಂಟುಮಾಡುತ್ತವೆ. ಕೋಳಿ ಮತ್ತು ಡೈರಿ ಉತ್ಪನ್ನಗಳ ಆಮದು ದೇಶೀಯ ಉತ್ಪಾದಕರ ಮೇಲೆ ತೀವ್ರ ಪರಿಣಾಮ ಬೀರುತ್ತದೆ ವಿಶೇಷವಾಗಿ ವಿದೇಶಗಳಲ್ಲಿ ಮಾಂಸಾಹಾರಿ ಡೈರಿ ಪದ್ಧತಿಗಳಿಂದಾಗಿ, ಸಾಂಸ್ಕೃತಿಕ ಮತ್ತು ಧಾರ್ಮಿಕ ಸಂವೇದನೆಗಳನ್ನು ಉಲ್ಲಂಘಿಸುತ್ತದೆ ಎಂದು ಅವರು ಹೇಳಿದರು.



ಉದಯವಾಹಿನಿ ಚಿತ್ರ

**ಭಾರತ-ಅಮೆರಿಕ ವ್ಯಾಪಾರ ಒಪ್ಪಂದ**

> ಕನಿಷ್ಠ ಬೆಂಬಲ ಬೆಲೆ ಶಾಸನ ಜಾರಿಗೆ ಒತ್ತಾಯಿಸಿ 130 ದಿನಗಳ ಉಪವಾಸ ಸತ್ಯಾಗ್ರಹ ಕೈಗೊಂಡಿದ್ದ ಜಗ್ಜಿತ್ ಸಿಂಗ್ ದಲ್ಲೆವಾಲ್, ಪ್ರಸ್ತಾವಿತ ಭಾರತ-ಅಮೆರಿಕ ವ್ಯಾಪಾರ ಒಪ್ಪಂದದಿಂದ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಇದು ಕೇವಲ ಒಪ್ಪಂದವಲ್ಲ, ಬದಲಾಗಿ ಹೇರಿಕೆಯಾಗಿದೆ. ಸರ್ಕಾರವು ತಳೀಯವಾಗಿ ಮಾರ್ಪಡಿಸಿದ ಮೆಕ್ಕೆಜೋಳ ಮತ್ತು ಸೋಯಾಬೀನ್ ನಂತಹ ಕೃಷಿ ಸರಕುಗಳನ್ನು ಆಮದು ಮಾಡಿಕೊಳ್ಳಲು ಯೋಜಿಸಿದೆ, ಇದು ಸ್ಥಳೀಯ ಖರೀದಿ ವ್ಯವಸ್ಥೆಗಳನ್ನು ದುರ್ಬಲಗೊಳಿಸುತ್ತದೆ.


# ವಜ್ರ ಮಹೋತ್ಸವದ ಸವಿನೆನಪು

• ಉದಯವಾಹಿನಿ, ಬೆಂಗಳೂರು

ವಜ್ರ ಮಹೋತ್ಸವದ ಆಚರಣೆಯ ಭಾಗವಾಗಿ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ತನ್ನ ವ್ಯಾಪ್ತಿಯಲ್ಲಿ 60 ಸಾವಿರ ಗಿಡಗಳನ್ನು ನೆಡುವ ಗುರಿಯೊಂದಿಗೆ ಹಸಿರು ನಡೆ - ನೀರಿನ ಭವಿಷ್ಯ ಎಂಬ ಶೀರ್ಷಿಕೆಯಡಿ ಬೃಹತ್ ಪ್ರಮಾಣದಲ್ಲಿ ಗಿಡ ನೆಡುವ ಅಭಿಯಾನವನ್ನು ಆರಂಭಿಸಿದೆ ಎಂದು ಬಿಡಬ್ಲ್ಯುಎಸ್‌ಎಸ್ ಬಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ. ಜಿಕೆವಿಕೆ ಕ್ಯಾಂಪಸ್‌ನಲ್ಲಿ ಅಭಿಯಾನವನ್ನು ಉದ್ಘಾಟಿಸಿದ ಅವರು, ಸಾಂಕೇತಿಕವಾಗಿ 60 ಬಗೆಯ ಸಸಿಗಳನ್ನು ನೆಟ್ಟರು.

ನೀರಿನ ಸಂರಕ್ಷಣೆ ಮತ್ತು ಪರಿಸರ ಸಮತೋಲನ ಎರಡಕ್ಕೂ ಹಸಿರು ಪರಿಸರ ಅತ್ಯಗತ್ಯ. ನಮ್ಮ ನಗರವನ್ನು ಹಸಿರು, ಹೆಚ್ಚು ಸುಂದರಗೊಳಿಸಲು ನಾಗರಿಕರು ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಗಿಡಗಳನ್ನು ನೆಡುವ ಮೂಲಕ ಕೊಡುಗೆ ನೀಡಬೇಕು. BWSSB ಬೆಂಗಳೂರಿನಾದ್ಯಂತ ಹಲವು ಭೂಪ್ರದೇಶಗಳನ್ನು ಹೊಂದಿದ್ದು, ಅವುಗಳನ್ನು ಹಸಿರು ವಲಯಗಳಾಗಿ ಪರಿವರ್ತಿಸುವುದು ನಮ್ಮ ಗುರಿಯಾಗಿದೆ ಎಂದರು.

ವಿಶ್ವ ಪರಿಸರ ದಿನದಿಂದ ಪ್ರೇರಿತವಾದ ಈ ಅಭಿಯಾನವು ಮುಂಬರುವ ವರ್ಷದಲ್ಲಿ ಹಸಿರು ಮಾರ್ಗ - ನೀರಿನ ಭವಿಷ್ಯ ಎಂಬ ಮಾರ್ಗದರ್ಶಿ ವಿಷಯದ ಅಡಿಯಲ್ಲಿ 60 ಸಾವಿರ ಸಸಿಗಳನ್ನು ನೆಡುವ ಗುರಿಯನ್ನು ಹೊಂದಿದೆ ಎಂದರು. ಜನರು ಹೆಚ್ಚಿನ ಸಂಖ್ಯೆಯಲ್ಲಿ ಈ ಅಭಿಯಾನದಲ್ಲಿ ಭಾಗಿಯಾಗಲು ಅಪಾರ್ಟ್ಮೆಂಟ್ ಸಂಕೀರ್ಣಗಳು, ಕೈಗಾರಿಕೆಗಳು, ಟೆಕ್ ಪಾರ್ಕ್‌ಗಳು ಶಿಕ್ಷಣ ಸಂಸ್ಥೆಗಳು ಸೇರಿದಂತೆ ಹೆಚ್ಚಿನ ಪ್ರಮಾಣದಲ್ಲಿ ನೀರಿನ ಬಳಕೆದಾರರು ಅಭಿಯಾನದಲ್ಲಿ ಸಕ್ರಿಯವಾಗಿ ಸೇರಲು ಮನವಿ ಮಾಡಲಾಗಿದೆ. ತಮ್ಮ ಆವರಣದಲ್ಲಿ ಸಸಿಗಳನ್ನು ನೆಡುವುದು ಮಾತ್ರವಲ್ಲದೆ ಅವುಗಳ ನಿರ್ವಹಣೆಯ ಜವಾಬ್ದಾರಿಯನ್ನು ಸಹ ತೆಗೆದುಕೊಳ್ಳುವಂತೆ ಕೇಳಿಕೊಳ್ಳಲಾಗುತ್ತಿದೆ. ಹೆಚ್ಚುವರಿಯಾಗಿ ಎಲ್ಲಾ BWSSB ವಿಭಾಗಗಳು, ಕಚೇರಿಗಳು ತಮ್ಮ ತಮ್ಮ ಪ್ರದೇಶಗಳು ಸೇವಾ ವಲಯಗಳಲ್ಲಿ ಗಿಡಗಳನ್ನು ನೆಡಲು ಮುಂಚೂಣಿಯಲ್ಲಿರಲು ಸೂಚಿಸಲಾಗಿದೆ.


ಉದಯವಾಹಿನಿ ಚಿತ್ರ

# ನೀರು ಕಲುಷಿತಗೊಂಡು ದುಷ್ಪರಿಣಾಮವಾದರೆ ಇಂಜಿನಿಯರ್, ಪಿಡಿಒಗಳು ಹೊಣೆ

• ಉದಯವಾಹಿನಿ, ಬೆಂಗಳೂರು

ರಾಜ್ಯದಲ್ಲಿ ನೀರು ಕಲುಷಿತಗೊಂಡು ಯಾವುದೇ ದುಷ್ಪರಿಣಾಮಗಳಾದಲ್ಲಿ ಸಂಬಂಧಿಸಿದ ಎಂಜಿನಿಯರ್‌ಗಳು, ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳನ್ನು (ಪಿಡಿಒ) ನೇರವಾಗಿ ಹೊಣೆಯಾಗಿಸಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಖಡಕ್ ಎಚ್ಚರಿಕೆ ನೀಡಿದ್ದಾರೆ. ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ತಿಪ್ಪನಟಗಿ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ಮೂವರು



ಮೃತಪಟ್ಟಿರುವ, ಆರು ಜನರ ಸ್ಥಿತಿ ಗಂಭೀರವಾಗಿರುವ ಘಟನೆ ಹಿನ್ನೆಲೆಯಲ್ಲಿ ಪ್ರಿಯಾಂಕ್ ಖರ್ಗೆ ಎಚ್ಚರಿಕೆ ನೀಡಿದ್ದಾರೆ. ಬೆಂಗಳೂರಿನಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ಐದು ಗಂಟೆಗಳಿಗೂ ಹೆಚ್ಚು ಕಾಲ ವಿಡಿಯೋ ಸಭೆ ನಡೆಸಿದ ಸಚಿವರು, ಕಲುಷಿತ ನೀರು ಸೇವನೆಯಿಂದಾದ ದುಷ್ಪರಿಣಾಮಗಳ ಬಗ್ಗೆ ಚರ್ಚೆ ನಡೆಸಿದ ಅವರು, ಇಂತಹ ಘಟನೆಗಳಿಗೆ ಸ್ಥಳೀಯ ಎಂಜಿನಿಯರ್‌ಗಳು ಮತ್ತು ಪಿಡಿಒಗಳೇ ಜವಾಬ್ದಾರರು ಎಂದು ಸ್ಪಷ್ಟಪಡಿಸಿದರು. ಜುಲೈ 15 ರಿಂದ ಜುಲೈ 31 ರವರೆಗೆ, ಜಿಲ್ಲಾ ಪಂಚಾಯತ್ ಸಿಇಒಗಳು ಜಿಲ್ಲೆಯಲ್ಲಿ ಪ್ರವಾಸ ಮಾಡಿ ಗುಣಮಟ್ಟದ ಪರಿಶೀಲನೆಗಳನ್ನು ನಡೆಸುವಂತೆ ಸೂಚಿಸಲಾಗಿದೆ. ಸ್ಥಗಿತಗೊಂಡಿರುವ ಯೋಜನೆಗಳ ಕೆಲಸ ಪುನರಾರಂಭವಾಗುವಂತೆ ನೋಡಿಕೊಳ್ಳುವಂತೆಯೂ ಅವರು ಅವರಿಗೆ ತಿಳಿಸಿದ್ದಾರೆ. ತೆಗೆದುಕೊಳ್ಳಲಾದ ಎಲ್ಲಾ ಕ್ರಮಗಳನ್ನು ವಿವರಿಸುವ ಸಮಗ್ರ ವರದಿಯನ್ನು ಆಗಸ್ಟ್ ಮೊದಲ ವಾರದಲ್ಲಿ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

# ರೈತರ ಹೋರಾಟ: ಭೂ ವಿವಾದಕ್ಕೆ ಹಸಿರು ಪರಿಹಾರ

## ಕಂದಾಯ ಇಲಾಖೆಯ ಅಧಿಕಾರಿಗಳ ಸಲಹೆಯನ್ನು ಗಂಭೀರವಾಗಿ ಪರಿಗಣಿಸಿದ ಕರ್ನಾಟಕ ರಾಜ್ಯ ಸರ್ಕಾರ

• ಉದಯವಾಹಿನಿ, ಬೆಂಗಳೂರು

ದೇವನಹಳ್ಳಿ ಹೈಟೆಕ್ ಡಿಫೆನ್ಸ್ ಆ್ಯಂಡ್ ಏರೋಸ್ಪೇಸ್ ಪಾರ್ಕ್‌ಗೆ ಮಾಡಿದ ನೋಟಿಫೈ ಭೂಮಿಯನ್ನು ಶಾಶ್ವತ ಹಸಿರು ವಲಯವಾಗಿ ಘೋಷಣೆ ಮಾಡಿ, 15 ರಿಂದ 20 ವರ್ಷಗಳವರೆಗೆ ಪರಭಾರೆಗೆ ನಿರ್ಬಂಧ ವಿಧಿಸುವ ಚಿಂತನೆಯಲ್ಲಿ ಸರಕಾರ ತೊಡಗಿದೆ. ಕಂದಾಯ ಇಲಾಖೆ ಹಾಗೂ ಕಾನೂನು ತಜ್ಞರಿಂದ ಬಂದಿರುವ ಈ ಸಲಹೆಯನ್ನು ಸರಕಾರ ಗಂಭೀರವಾಗಿ ಪರಿಗಣಿಸಿದ್ದು, ಮುಂದಿನ ರೈತ ಹೋರಾಟಗಾರರ ಸಭೆಯಲ್ಲಿ ಸಿಎಂ ಸಿದ್ದರಾಮಯ್ಯ ಅವರು ಈ ತೀರ್ಮಾನ ಪ್ರಕಟಿಸುವ ಸಾಧ್ಯತೆಯಿದೆ.

ರೈತರ ತೀವ್ರ ವಿರೋಧದ ಮಧ್ಯೆ ಯೋಜನೆ ಮುಂದುವರಿಸುವುದು ಕಷ್ಟ. ಈ ಕಾರಣಕ್ಕೆ ಅಧಿಸೂಚನೆಯಾಗಿರುವ ಭೂಮಿ ಕೈಬಿಟ್ಟರೆ ಕಾನೂನಾತ್ಮಕ ಸಮಸ್ಯೆಗಳು ಎದುರಾಗುತ್ತವೆ. ಇತರ ಭೂಸ್ವಾಧೀನ ಪ್ರಕರಣಗಳಿಗೂ ಇದು ಮಾದರಿಯಾಗಲಿದೆ ಎಂಬ ಇಕ್ಕಟ್ಟಿನ ಹಿನ್ನೆಲೆಯಲ್ಲಿ ಪರಿಣಿತರು ಸರಕಾರಕ್ಕೆ ಈ ಸಲಹೆ ನೀಡಿದ್ದಾರೆ. ರೈತ ಹೋರಾಟಗಾರರ ಸಭೆಗೆ ಮುನ್ನ ಜುಲೈ 3ರಂದು ಸಿಎಂ ಅಧ್ಯಕ್ಷತೆಯ ಸಭೆಯಲ್ಲಿ ನಡೆದ ಸಭೆಯಲ್ಲಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಈ ಸಲಹೆ ನೀಡಿದ್ದರು. ನೋಟಿಫೈ ಭೂಮಿಯನ್ನು ಕೈಬಿಡುವುದಾದರೆ ಅದು ಶಾಶ್ವತವಾಗಿ ಕೃಷಿ ಉದ್ದೇಶಕ್ಕೆ ಉಳಿಯಬೇಕು. ಹಸಿರು ವಲಯವಾಗಿ ಘೋಷಿಸುವುದರಿಂದ ಸಮಸ್ಯೆಗಳೂ ಉದ್ಭವಿಸುವುದಿಲ್ಲಎಂದು ಪರಿಣಿತರು ಸಿಎಂಗೆ ಸಲಹೆ ನೀಡಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

**ಸುರಕ್ಷಿತ ಮಾರ್ಗ:** ಹಿಂದೆ ಈ ಹೋರಾಟ ಶುರುವಾದ ಹೊಸದರಲ್ಲಿ ವಿಧಾನಸಭೆ ಪ್ರತಿಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯ ಅವರು ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದರು. ಆಗ, ನಾವು ಅಧಿಕಾರಕ್ಕೆ


ಉದಯವಾಹಿನಿ ಚಿತ್ರ

ಬಂದರೆ ಭೂಸ್ವಾಧೀನದ ನಿರ್ಧಾರವನ್ನು ಪುನರ್ ಪರಿಶೀಲಿಸುತ್ತೇವೆ, ಎಂದು ಭರವಸೆ ನೀಡಿದ್ದರು. ಹೀಗಾಗಿ ಸರಕಾರ ರೈತ ಪರ, ಇಕ್ಕಟ್ಟಿನಿಂದ ಪಾರಾಗಲು ಜಾಗವನ್ನು ಹಸಿರು ವಲಯವಾಗಿ ಘೋಷಿಸುವುದೇ ಸುರಕ್ಷಿತ ಮಾರ್ಗ ಎಂಬ ಅಭಿಪ್ರಾಯಕ್ಕೆ ಬರಲಾಗಿದೆ.

**ಪ್ರಭಾವಿಗಳಿಗೆ ಶಾಕ್:** ದೇವನಹಳ್ಳಿ ಬಳಿ ಭೂಸ್ವಾಧೀನದಿಂದ ಜಮೀನು ಕಳೆದು ಕೊಳ್ಳುತ್ತಿರುವವರಲ್ಲಿ ಸಣ್ಣ ಹಿಡುವಳಿದಾರರೇ ಹೆಚ್ಚು. ಬಹಳಷ್ಟು ಪ್ರಭಾವಿ ವ್ಯಕ್ತಿಗಳು ಈ ಜಾಗದಲ್ಲಿ ಖರೀದಿ ಒಪ್ಪಂದ ಮಾಡಿಕೊಂಡಿರುವುದು ಸರಕಾರದ ಗಮನಕ್ಕೆ ಬಂದಿದೆ. ಸಿಎಂ ಅಧ್ಯಕ್ಷತೆಯಲ್ಲಿ ಜುಲೈ 3ರಂದು ನಡೆದ ಸಭೆಯಲ್ಲಿ ಈ ವಿಚಾರ ಪ್ರಸ್ತಾಪವಾಗಿದೆ. ಭೂಸ್ವಾಧೀನ ಕೈಬಿಟ್ಟು ಪ್ರಭಾವಿ ವ್ಯಕ್ತಿಗಳಿಗೆ ಲಾಭವಾಗುವಂತೆ ಮಾಡಿಕೊಡುವ ಬದಲು ಈ ಭೂಮಿಯನ್ನು ಕೃಷಿ ಭೂಮಿಯಾಗೇ ಉಳಿಸಲು ಹಸಿರು ವಲಯವಾಗಿ ಘೋಷಣೆ ಮಾಡಿ ಮಾರಾಟಕ್ಕೆ ನಿರ್ಬಂಧ ವಿಧಿಸುವುದು ಸೂಕ್ತವಾಗುತ್ತದೆ ಎಂದು ಕಂದಾಯ ಸಚಿವರು ಸಿಎಂಗೆ ನೀಡಿರುವ ಸಲಹೆಯನ್ನು ಕಾನೂನು ಪರಿಣಿತರೂ ಅನುಮೋದಿಸಿದ್ದಾರೆ. ಈ ಮೂಲಕ ನಾನಾ ಕಡೆಗಳಲ್ಲಿ ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ತೊಡಗಿರುವ ಪ್ರಭಾವಿಗಳ ಭೂದಂಧೆಗೆ ಕಡಿವಾಣ ಹಾಕಬಹುದು ಎಂಬ ಲೆಕ್ಕಾಚಾರ ನಡೆದಿದೆ.

**ದೇವೇಗೌಡರು ದನಿಗೂಡಿಸಬೇಕು:** ದೇವನಹಳ್ಳಿಯ ಚನ್ನರಾಯಪಟ್ಟಣ ಸುತ್ತಮುತ್ತಲಿನ ರೈತರ ಭೂಮಿಯನ್ನು ಸರ್ಕಾರ ವಶಪಡಿಸಿಕೊಳ್ಳಲು ಮುಂದಾಗಿರುವುದು ರೈತ ಸಮುದಾಯದ ಆಕ್ರೋಶಕ್ಕೆ ಮತ್ತಷ್ಟು ತುಪ್ಪ ಸುರಿದಂತಾಗಿದೆ. ಕಳೆದ 1187 ದಿನಗಳಿಂದ ನಿರಂತರವಾಗಿ ನಡೆಯುತ್ತಿರುವ ಭೂಸ್ವಾಧೀನ ವಿರೋಧಿ ಹೋರಾಟಕ್ಕೆ ಇಂದಿಗೂ ಮುಕ್ತಿ ಸಿಗದ ಕಾರಣ, ಸರ್ಕಾರದ ಈ ಹೊಸ ಆದೇಶದ ವಿರುದ್ಧ ರೈತ ನಾಯಕರು ಮತ್ತೆ ಬೀದಿಗಿಳಿದು ತೀವ್ರ ಪ್ರತಿಭಟನೆಗೆ ಸಜ್ಜಾಗಿದ್ದಾರೆ. ಸಂಯುಕ್ತ ಹೋರಾಟ ಸಮಿತಿಯ ರಾಜ್ಯಾಧ್ಯಕ್ಷರಾದ ಬಡಗಲಾಪುರ ನಾಗೇಂದ್ರ ಅವರು ಈ ಸಂದರ್ಭದಲ್ಲಿ ಮಾತನಾಡಿ, ಸರ್ಕಾರದ ಕ್ರಮವನ್ನು ತೀವ್ರವಾಗಿ ಖಂಡಿಸಿದರಲ್ಲದೆ, ಈ ವಿಷಯದಲ್ಲಿ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು ಮಧ್ಯ ಪ್ರವೇಶಿಸಿ, ರೈತರ ಪರವಾಗಿ ಮಾತನಾಡಬೇಕು ಎಂದು ಆಗ್ರಹಿಸಿದರು.

### ಸಿಎಂ ಜೊತೆಗೆ ಜು. 15ರಂದು ಮಾತುಕತೆ

ದೇವನಹಳ್ಳಿ ಸಮೀಪ ನಡೆಯುತ್ತಿರುವ ಭೂಸ್ವಾಧೀನ ವಿರೋಧಿ ರೈತ ಹೋರಾಟದ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರೈತ ಮುಖಂಡರೊಂದಿಗೆ ನಡೆಸಿದ ಮಹತ್ವದ ಸಭೆ ಅಪೂರ್ಣಗೊಂಡಿದೆ. ತಮ್ಮ ಭೂಮಿಯನ್ನು ಬಿಟ್ಟುಕೊಡಲು ರೈತರು ತೀವ್ರವಾಗಿ ನಿರಾಕರಿಸಿದ ಕಾರಣ, ಮಾತುಕತೆ ಯಾವುದೇ ನಿರ್ಣಾಯಕ ಹಂತಕ್ಕೆ ತಲುಪಲಿಲ್ಲ. ಕಾನೂನು ತೊಡಕುಗಳನ್ನು ನಿವಾರಿಸಲು ಸರ್ಕಾರಕ್ಕೆ ಹತ್ತು ದಿನಗಳ ಕಾಲಾವಕಾಶ ಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ರೈತ ಮುಖಂಡರಲ್ಲಿ ಮನವಿ ಮಾಡಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ, ಮುಂದಿನ ಹಂತದ ಸಭೆಯನ್ನು ಜುಲೈ 15 ರಂದು ನಿಗದಿಪಡಿಸಲಾಗಿದೆ.

**ಯೋಜನೆಯ ಹಿನ್ನೆಲೆ:** ಊರು: ದೇವನಹಳ್ಳಿ ತಾಲ್ಲೂಕಿನ ಚನ್ನರಾಯಪಟ್ಟಣ
**ಉದ್ದೇಶ:** ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ ಸ್ಥಾಪನೆ
**ಸ್ವಾಧೀನ ಪ್ರಕ್ರಿಯೆ:** ಕೆಐಎಡಿಬಿ ಮೂಲಕ 1,777 ಎಕರೆ ಜಮೀನು ಸ್ವಾಧೀನ ಪ್ರಕ್ರಿಯೆ
**ಪ್ರಾಥಮಿಕ ಅಧಿಸೂಚನೆ:** ಬಿಜೆಪಿ ಸರಕಾರದಿಂದ 2021ರ ಆಗಸ್ಟ್ 27
**ಅಂತಿಮ ಅಧಿಸೂಚನೆ:** ಈಗಿನ ಕಾಂಗ್ರೆಸ್ ಸರಕಾರ ಕೆಲ ತಿಂಗಳ ಹಿಂದೆ ಪ್ರಕಟ
**13 ಬಾಧಿತ ಗ್ರಾಮ:** ಚನ್ನರಾಯಪಟ್ಟಣ, ಮಟ್ಟಬಾರ್ಲು, ಶ್ರೋತ್ರೀಯ ತೆಲ್ಲೋಹಳ್ಳಿ, ಪಾಳ್ಯ, ಹರಳೂರು, ಪೋಲನಹಳ್ಳಿ, ಗೋಕರ ಬಚ್ಚೇನಹಳ್ಳಿ, ನಲ್ಲೂರು, ಮಲ್ಲೇಪುರ, ನಲ್ಲಪ್ಪನಹಳ್ಳಿ, ಚೀಮಾಚನಹಳ್ಳಿ, ಮುದ್ದೇನಹಳ್ಳಿ , ಹ್ಯಾಡಾ

ಬಮುಲ್ ಪಶು ವಿಮೆಯಲ್ಲೂ ಅಕ್ರಮ ; ಟೆಂಡರ್ ಪ್ರಕ್ರಿಯೆಗೂ ಮುನ್ನವೇ ಕಾರ್ಯಾದೇಶ

# ಕೆಟಿಪಿಪಿ ಗಾಳಿಗೆ ತೂರಿ ಬಮೂಲ್‌ನಲ್ಲಿ ಅಕ್ರಮ

• **ಉದಯವಾಹಿನಿ, ರಾಮನಗರ**

ರಾಜ್ಯದಲ್ಲಿ ಅತಿ ಹೆಚ್ಚು ಹಾಲು ಉತ್ಪಾದಿಸುವ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದಲ್ಲಿ (ಬಮುಲ್) ಈಗ ಹಗರಣಗಳದ್ದೇ ಸದ್ದು. ರಾಸುಗಳ ವಿಮೆ ಯೋಜನೆಯಲ್ಲಿ ಕಿಕ್‌ಬ್ಯಾಕ್ ಆಸೆಗೆ ಅಧಿಕಾರಿಗಳು ಸಂಸ್ಥೆ ಹಾಗೂ ಹೈನುಗಾರರಿಗೆ ದೊಡ್ಡ ನಷ್ಟಕ್ಕೆ ಕಾರಣವಾಗಿದ್ದಾರೆ ಎಂಬ ಆರೋಪವೂ ಕೇಳಿ ಬಂದಿದೆ. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯಿದೆ (ಕೆಟಿಪಿಪಿ) ಹಾಗೂ ಒಕ್ಕೂಟದ ನಿಯಮಾವಳಿಯನ್ನು ಗಾಳಿಗೆ ತೂರಿ ರಾಸುಗಳ ವಿಮೆ ಯೋಜನೆಯಲ್ಲಿ ಅಕ್ರಮ ನಡೆಸಿದ್ದು, ಶೇ. 15 ರಷ್ಟು ಕಿಕ್‌ಬ್ಯಾಕ್ ಪಡೆದಿರುವ ಆರೋಪದ ಮೇಲೆ ಬಮುಲ್ ವ್ಯವಸ್ಥಾಪಕ ನಿರ್ದೇಶಕ ಡಾ. ಎಸ್.ಟಿ. ಸುರೇಶ್ ವಿರುದ್ಧ ದೂರು ದಾಖಲಾಗಿದೆ.

**ವಿಮೆ ಮೊತ್ತ ಹೆಚ್ಚಳ:** ಕೆಟಿಟಿಪಿ ಹಾಗೂ ಸಹಕಾರ ಸಂಘಗಳ ನಿಯಮಾವಳಿ ಪ್ರಕಾರ ರಾಸುಗಳ ವಿಮೆಗೆ ಒಕ್ಕೂಟವು ನೇರವಾಗಿ ವಿಮಾ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬೇಕು. ಆದರೆ, 2022 ರಿಂದ ವಿಮಾ ಕಂಪನಿಗಳ ಬದಲಿಗೆ ಹೈದರಾಬಾದ್ ಮೂಲದ ಮಧ್ಯವರ್ತಿಗಳ ಮೂಲಕ ಒಪ್ಪಂದ ಮಾಡಿಕೊಳ್ಳಲಾಗಿದೆ. ಇದರಿಂದ



ಉದಯವಾಹಿನಿ ಚಿತ್ರ

**ಒಕ್ಕೂಟದ ವ್ಯವಸ್ಥಾಪಕ ನಿರ್ದೇಶಕರು ಆಡಳಿತ ಮಂಡಳಿ ಅನುಮತಿ ಪಡೆಯದೆ ಬ್ರೋಕರೇಜ್ ಏಜೆನ್ಸಿಗಳ ಮೂಲಕ ರಾಸುಗಳ ವಿಮೆ ಯೋಜನೆ ಜಾರಿಗೊಳಿಸಿ ಅಕ್ರಮ ಎಸಗಿದ್ದಾರೆ. ಮಧ್ಯವರ್ತಿ ಏಜೆನ್ಸಿಗಳಿಂದ ಕಿಕ್‌ಬ್ಯಾಕ್ ಪಡೆದು ನಿಯಮಾನುಸಾರ ಟೆಂಡರ್ ಕರೆಯದೆ ಹಗರಣ ನಡೆಸಿದ್ದು, ಈ ಬಗ್ಗೆ ಉನ್ನತ ಮಟ್ಟದ ತನಿಖೆಯಾಗಬೇಕು.**
**–ಜಿ.ಆರ್.ಭಾಸ್ಕರ್, ಮಾಜಿ ನಿರ್ದೇಶಕ, ಬಮುಲ್**

ವಿಮಾ ಕಂಪನಿಗಳು ಮಧ್ಯವರ್ತಿ ಏಜೆನ್ಸಿಗಳ ಕಮಿಷನ್ ಸೇರಿದಂತೆ ವಿಮಾ ಕಂತಿನಲ್ಲಿ ಶೇ. 15 ರಷ್ಟು ದರ ಏರಿಕೆ ಮಾಡಿವೆ. ಹೀಗಾಗಿ, 50:50 ರ ಅನುಪಾತದಲ್ಲಿ ಕಂತು ಪಾವತಿಸುವ ಒಕ್ಕೂಟ ಹಾಗೂ ರಾಸುಗಳ ಮಾಲೀಕರಿಗೆ ವಿಮಾ ಮೊತ್ತ ಶೇ. 15 ರಷ್ಟು ಹೆಚ್ಚಳವಾಗಿದೆ.

**ಚುನಾಯಿತ ಮಂಡಳಿ ಅನುಮತಿಯಿಲ್ಲ:** ವ್ಯವಸ್ಥಾಪಕ ನಿರ್ದೇಶಕ ಸುರೇಶ್, ಅಧಿಕಾರಿಗಳು ಚುನಾಯಿತ ಮಂಡಳಿಯ ಗಮನಕ್ಕೆ ತರದೆ ಮತ್ತು ಅನುಮತಿ ಪಡೆಯದೆ ಬ್ರೋಕರ್ ಏಜೆನ್ಸಿಗಳ ಮೂಲಕ ವಿಮಾ ಕಂಪನಿಗಳೊಂದಿಗೆ ಒಪ್ಪಂದ ಮಾಡಿಕೊಂಡಿದ್ದಾರೆ.

**ಮಧ್ಯವರ್ತಿ ಸಂಸ್ಥೆ ನೇಮಕ**

ಕೆಟಿಪಿಪಿ ನಿಯಮಾನುಸಾರ ಟೆಂಡರ್ ಕರೆದು ನಂತರ ಯೋಜನೆಗೆ ವಿಮಾ ಕಂಪನಿ ಆಯ್ಕೆ ಮಾಡಬೇಕಿತ್ತು. ಆದರೆ, ಟೆಂಡರ್‌ಗೂ ಮೊದಲೇ ವಿಮೆ ಯೋಜನೆ ಜಾರಿ ಸಂಬಂಧ ಕಾರ್ಯಾದೇಶ ಪತ್ರ ನೀಡಲಾಗಿದೆ. ಅಂದರೆ, ಟೆಂಡರ್ ಪ್ರಕ್ರಿಯೆಗೂ ಮುನ್ನವೇ ವ್ಯವಸ್ಥಾಪಕ ನಿರ್ದೇಶಕರು ಮಧ್ಯವರ್ತಿ ಏಜೆನ್ಸಿಯನ್ನು ನಿರ್ಧರಿಸಿ ಲೋಪ ಎಸಗಿದ್ದಾರೆ.

**ವಿಮೆ ಯಾವ ರೀತಿ:** ರಾಸುಗಳಿಗೆ 25 ಸಾವಿರ ರೂ.ನಿಂದ 80 ಸಾವಿರ ರೂ.ವರೆಗೆ ವಿಮೆ ಮಾಡಿಸಬಹುದು. ಪಶು ವೈದ್ಯರು ರಾಸುಗಳ ಮೌಲ್ಯ ನಿರ್ಣಯಿಸಿ ವಿಮಾ ಮೊತ್ತ ನಿಗದಿಪಡಿಸುತ್ತಾರೆ. ಇದರ ಆಧಾರದಲ್ಲಿ ವಿಮಾ ಕಂಪನಿಗಳು ವಿಮೆ ನೀಡಲಿವೆ.

**ಒಂದೇ ಕಂಪನಿ ಬೇರೆಬೇರೆ ಹೆಸರು?**

**ಒಕ್ಕೂಟವು 2022 ಕ್ಕೂ ಮೊದಲು ನೇರವಾಗಿ ವಿಮಾ ಕಂಪನಿಗಳೊಂದಿಗೆ ರಾಸುಗಳ ವಿಮಾ ಯೋಜನೆಯ ಒಪ್ಪಂದ ಮಾಡಿಕೊಳ್ಳುತ್ತಿತ್ತು. ನಂತರ ಹಳೆ ಪದ್ಧತಿ ಕೈಬಿಟ್ಟು 2022 ರಲ್ಲಿ ಹೈದರಾಬಾದ್ ಮೂಲದ ಬ್ರೋಕರ್ ಏಜೆನ್ಸಿಗಳ ಮೂಲಕ ವಿಮೆ ಒಪ್ಪಂದ ಮಾಡಿಕೊಳ್ಳಲಾಗಿದೆ. 2022-23 ನೇ ಸಾಲಿನಲ್ಲಿ ಫೇಮ್ ಇನ್ಸೂರೆನ್ಸ್ ಬ್ರೋಕಿಂಗ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಹಾಗೂ 2023-24ನೇ ಸಾಲಿನಲ್ಲಿ ಫೋರೆಸ್ ಇನ್ಸೂರೆನ್ಸ್ ಬ್ರೋಕಿಂಗ್ ಸರ್ವಿಸಸ್ ಪ್ರೈವೇಟ್ ಲಿಮಿಟೆಡ್ ಮೂಲಕ ರಾಸುಗಳ ವಿಮಾ ಯೋಜನೆ ಕಾರ್ಯಗತಗೊಳಿಸಲಾಗಿದೆ. ಒಂದೇ ಕಂಪನಿ ಜೊತೆ ಬೇರೆಬೇರೆ ಹೆಸರುಗಳಲ್ಲಿ ವ್ಯವಹಾರ ನಡೆಸಲಾಗಿದೆ ಎಂಬ ಆರೋಪವೂ ಇದೆ.**

## ಅನ್ನಭಾಗ್ಯ ಲಾರಿಗಳ ಸಾಗಾಣಿಕೆ ವೆಚ್ಚ ಪಾವತಿಸಲು ಆಗ್ತಿಲ್ಲ

• **ಉದಯವಾಹಿನಿ, ಮೈಸೂರು**



**ರಾಜ್ಯ ಸರ್ಕಾರ ದಿವಾಳಿ ಆಗಿದೆ ರೀ**

ಅನ್ನಭಾಗ್ಯ ಯೋಜನೆಯ ಅಕ್ಕಿ ಪೂರೈಕೆ ಮಾಡುತ್ತಿರುವ ಲಾರಿಗಳ ಸಾಗಾಣಿಕೆ ವೆಚ್ಚ ಪಾವತಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಅನ್ನಭಾಗ್ಯ ಅಕ್ಕಿ ಪೂರೈಸುವ ಲಾರಿಗಳ ಸಾಗಾಣಿಕೆ ವೆಚ್ಚ 246 ಕೋಟಿ ಪಾವತಿಸಿಲ್ಲ. ಪರಿಣಾಮ ಲಾರಿ ಮಾಲೀಕರು ಚಾಲಕರು ಮುಷ್ಕರ ಆರಂಭಿಸಿದ್ದಾರೆ. ಇದರಿಂದ ಅನ್ನ ಭಾಗ್ಯ ಅಕ್ಕಿ ಪೂರೈಸಲು ಸಾಧ್ಯವಾಗಿಲ್ಲ ಎಂದು ಶಾಸಕ ಶ್ರೀವತ್ಸ ವಾಗ್ದಾಳಿ ನಡೆಸಿದ್ದಾರೆ. ಅನ್ನ ಭಾಗ್ಯ ಅಕ್ಕಿ ಸಾಗಾಟ ಮಾಡುವ ಲಾರಿ ಚಾಲಕರ ಕುಟುಂಬಗಳಿಗೆ ಅನ್ನಭಾಗ್ಯ ಸಿಗದಂತಾಗಿದೆ. ರಾಜ್ಯ ಸರ್ಕಾರ ದಿವಾಳಿಯಾಗಿ ರುವುದನ್ನು ಇದು ತೋರಿಸುತ್ತಿದೆ. ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನೆನೆಗುದಿಗೆ ಬಿದ್ದಿವೆ.

ರಾಜ್ಯ ಸರ್ಕಾರ ಕೂಡಲೇ ಅನ್ನಭಾಗ್ಯ ಅಕ್ಕಿ ಸಾಗಿಸುತ್ತಿರುವ ಲಾರಿಗಳ ಸಾಗಾಣಿಕೆ ವೆಚ್ಚ ಪಾವತಿಸಬೇಕು ಎಂದು ಬಿಜೆಪಿ ಶಾಸಕ ಶ್ರೀವತ್ಸ ಮೈಸೂರಿನಲ್ಲಿ ಹೇಳಿದ್ದಾರೆ.

ಬಸವರಾಜ ರಾಯರೆಡ್ಡಿ ಅಕ್ಕಿ ಬೇಕಾ, ರಸ್ತೆ ಬೇಕಾ ಎಂದು ಜನರನ್ನು ಕೇಳುತ್ತಾರೆ. ಎಲ್ಲವೂ ಬೇಕು ಅಂತಾನೆ ಜನರು ನಿಮ್ಮನ್ನು ಗೆಲ್ಲಿಸಿದ್ದಾರೆ. ಇಲ್ಲದಿದ್ದರೆ ನಿಮಗೆ 136 ಸೀಟು ಬರ್ತಾ ಇರಲಿಲ್ಲ. ಎಲ್ಲಾ ಶಾಸಕರು ಕೂಡ ಸರ್ಕಾರದ ವಿರುದ್ಧ ಸಿಡಿಯುತಿದ್ದಾರೆ. ರಾಜು ಕಾಗೆ, ಬಿ ಆರ್ ಪಾಟೀಲ್ ಕೂಡ ತಮ್ಮದೇ ಪಕ್ಷದ ಸರ್ಕಾರದ ವಿರುದ್ಧ ಮುಗಿಬಿದ್ದಿದ್ದಾರೆ. ಶಾಸಕರಿಗೆ ಈಗ ಅರ್ಥ ಆಗ್ತಿದೆ. ಅಭಿವೃದ್ಧಿ ಬೇಕು ಅಂತ ಶಾಸಕರಿಗೀಗ ಅರ್ಥವಾಗಿದೆ. ಮುಂದಿನ ದಿನಗಳಲ್ಲಿ ಇದು ಮತ್ತಷ್ಟು ಜಾಸ್ತಿ ಆಗಲಿದೆ. ನವೆಂಬರ್ ನಲ್ಲಿ ಕ್ರಾಂತಿ ಆಗತ್ತದೆ ಎಂದು ಎಲ್ಲರೂ ಹೇಳುತ್ತಿದ್ದಾರೆ. ಶಾಸಕರ ಹೇಳಿಕೆ ನೋಡ್ತಿದ್ರೆ ಇನ್ನೂ ಬೇಗನೆ ಕ್ರಾಂತಿ ಆದರೂ ಆಗಬಹುದು ಎಂದರು. ರಾಜ್ಯ ಸರ್ಕಾರ ಸೆಸ್ಕ್ ನಲ್ಲೂ ಹಣ ಬಾಕಿ ಉಳಿಸಿಕೊಂಡಿದೆ. ಕೆ ಎಸ್ ಆರ್ ಟಿ ಸಿ ಇಲಾಖೆಯ ಹಣವನ್ನೂ ಬಾಕಿ ಉಳಿಸಿಕೊಂಡಿದೆ.

**ಯಾವುದೇ ಅನುದಾನ್ನ ನೀಡಿಲ್ಲ**


**ಶಾಸಕರ ಅನುದಾನ ಹಂಚಿಕೆಯಲ್ಲೂ ತಾರತಮ್ಯ ಮಾಡಲಾಗಿದೆ. ಮೈಸೂರಿನಲ್ಲಿ ಚಾಮರಾಜನಗರ, ನರಸಿಂಹರಾಜ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ನೀಡಿದ್ದಾರೆ. ಕೃಷ್ಣರಾಜ ಕ್ಷೇತ್ರಕ್ಕೆ ಯಾವುದೇ ಅನುದಾನವನ್ನು ನೀಡಿಲ್ಲ. ಕಾಂಗ್ರೆಸ್ ಶಾಸಕರ ಕ್ಷೇತ್ರಗಳಿಗೆ ಹೆಚ್ಚಿನ ಅನುದಾನ ನೀಡಲಾಗಿದೆ. ಬಿಜೆಪಿ ಶಾಸಕ ಇರುವ ಕೃಷ್ಣರಾಜ ಕ್ಷೇತ್ರಕ್ಕೆ ಯಾವುದೇ ಅನುದಾನ ನೀಡಿಲ್ಲ ಎಂದು ಅಂಕಿಅಂಶಗಳ ಸಮೇತ ರಾಜ್ಯ ಸರ್ಕಾರದ ವಿರುದ್ಧ ಕಿಡಿಕಾರಿದರು.**

ಇದೀಗ ಅನ್ನಭಾಗ್ಯ ಅಕ್ಕಿ ಸಾಗಿಸುವ ಲಾರಿಗಳ ಹಣವನ್ನು ಕೂಡ ಬಾಕಿ ಉಳಿಸಿಕೊಂಡಿದೆ ಎಂದು ವಾಗ್ದಾಳಿ ನಡೆಸಿದರು.

## ಆರೋಗ್ಯಕ್ಕಾಗಿ ಧ್ಯಾನ ಶಿಬಿರ

• **ಉದಯವಾಹಿನಿ, ಯಳಂದೂರು**

ಪಟ್ಟಣದ ಅಗ್ರಹಾರ ಬೀದಿಯಲ್ಲಿರುವ ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ, ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಜ್ಞಾನದೀಪ ಭವನದಲ್ಲಿ ಜುಲೈ 10 ಗುರುವಾರದಿಂದ ಆರೋಗ್ಯಕ್ಕಾಗಿ ಧ್ಯಾನ ಶಿಬಿರವನ್ನು ಮೈಸೂರು ಜ್ಞಾನ ಸರೋವರ ರಿಟ್ರೀಟ್ ಸೆಂಟರ್‌ನ ರಾಜಯೋಗ ಶಿಕ್ಷಣ ತಜ್ಞ ರಾಜಯೋಗಿ ಬ್ರಹ್ಮಾಕುಮಾರ ಪ್ರಾಣೇಶ್‌ರವರವರು ಉಚಿತವಾಗಿ ಪಟ್ಟಣದ ಜನತೆಗೆ ಶಿಬಿರವನ್ನು ನಡೆಸಿಕೊಡಲಿದ್ದಾರೆ ಎಂದು ಸಂಸ್ಥೆಯ ಸಂಚಾಲಕಿ ರಾಜ ಯೋಗಿನಿ ಬ್ರಹ್ಮಾಕುಮಾರಿ ಮಹಾಲಕ್ಷ್ಮೀಜೀ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.ಮಾನವನ ಮನಸ್ಸು ಚಂಚಲವಾಗಿದೆ ಇದರಿಂದ ಸುಖ ಶಾಂತಿ, ಸಂತೋಷಗಳು ಅವನಿಂದ ದೂರವಾಗುತ್ತಿವೆ. ಆರೋಗ್ಯವು ಏರುಪೇರು ಆಗುತ್ತಿದೆ. ನಿದ್ರೆಯಲ್ಲೂ ತೊಂದರೆಯಾಗುತ್ತಿದೆ. ಜೀವನ ಗೊಂದಲಗಳಿಂದ ಮನೋಬಲವು ಕುಸಿಯುತ್ತಿದೆ. ಇವುಗಳಿಂದ ಮುಕ್ತರಾಗಲು, ಆರೋಗ್ಯಕ್ಕಾಗಿ ಧ್ಯಾನ ಶಿಬಿರದ ಪೂರ್ಣ ಲಾಭವನ್ನು ಪಟ್ಟಣದ ಜನತೆ ಮಾಡಿ ಕೊಳ್ಳಬೇಕೆಂದು ಮನವಿ ಮಾಡಿದ್ದಾರೆ.



ಹಾಗಾಗಿ ನಗರದ ಜನತೆಯ ಹಿತ ದೃಷ್ಟಿಯಿಂದ ಪ್ರತಿನಿತ್ಯ 10.30 ರಿಂದ 12 ಗಂಟೆವರೆಗೆ ಪುರುಷರಿಗೆ, ಸಂಜೆ 4 ರಿಂದ 5:30 ಗಂಟೆಯವರಿಗೆ ಮಹಿಳೆಯರಿಗಾಗಿ ಶಿಬಿರವನ್ನು ಉಚಿತವಾಗಿ ಏರ್ಪಡಿಸಲಾಗಿದೆ. ಆಸಕ್ತ ಸಾರ್ವಜನಿಕರು ಹೆಚ್ಚಿನ ವಿವರಗಳಿಗಾಗಿ 9535668944, 9880283753ನ್ನು ಸಂಪರ್ಕಿಸುವಂತೆ ಕೋರಲಾಗಿದೆ.

## ಮುರಿದ ಕ್ರಸ್ಟ್‌ಗೇಟ್ ಸರಿಪಡಿಸಲು ರೈತರ ಆಗ್ರಹ

• **ಉದಯವಾಹಿನಿ, ಮಳವಳ್ಳಿ**

ತಾಲ್ಲೂಕಿನ ಗೌಡಗೆರೆ ಬಳಿಯ ಕೊಡಿಹಳ್ಳದ ಕ್ರಸ್ಟ್ ಗೇಟ್ ಮುರಿದು ಹಲವು ವರ್ಷ ಕಳೆದರೂ ಅದನ್ನು ಸರಿಪಡಿಸಲು ಕಾವೇರಿ ನೀರಾವರಿ ನಿಗಮದ ಕೆ.ಎಂ. ದೊಡ್ಡಿ ಭಾಗದ ಅಧಿಕಾರಿಗಳು ಮುಂದಾಗಿಲ್ಲ ಎಂದು ರೈತರು ಆರೋಪಿಸಿದರು. ಮದ್ದೂರು ತಾಲ್ಲೂಕಿನ ಕೆ.ಎಂ.ದೊಡ್ಡಿ ಭಾಗದ ವ್ಯಾಪ್ತಿಯ ಕ್ರಸ್ಟ್ ಗೇಟ್ ಮುರಿದಿರುವ ಕಾರಣ ಕಳೆದ ಒಂದು ವರ್ಷದಿಂದ ಗೌಡಗೆರೆ ಮತ್ತು ಮೇಗಳಾಪುರ ನಾಲೆಯ ವ್ಯಾಪ್ತಿಯ ರೈತರ ಜಮೀನುಗಳಿಗೆ ಸಮರ್ಪಕವಾಗಿ ನೀರು ಹರಿದಿಲ್ಲ. ಇದ್ದರಿಂದ ಬೆಳೆಗಳು ಒಣಗುತ್ತಿದೆ. ಹಲವು ಬಾರಿ ಕಾವೇರಿ ನೀರಾವರಿ ನಿಗಮದ ಅಧಿಕಾರಿಗಳ ಗಮನಕ್ಕೂ ತಂದರೂ ಯಾವುದೇ ಪ್ರಯೋಜನವಾಗಿಲ್ಲ. ಅಲ್ಲದೇ ಕ್ರಸ್ಟ್ ಗೇಟ್ ಬಳಿ ಗಿಡಗಂಟಿಗಳು ಅಗಾಧ ಪ್ರಮಾಣದಲ್ಲಿ ಬೆಳೆದಿದ್ದು, ನೀರು ಸರಾಗವಾಗಿ ಹರಿಯದಂತೆ ಆಗಿದೆ. ಇಂಥ ಸಮಸ್ಯೆಗಳ ಬಗ್ಗೆ ಅಧಿಕಾರಿಗಳು ಮೌನ ವಹಿಸಿರುವುದು ಸರಿಯಲ್ಲ ರೈತರು ಆರೋಪಿಸಿದರು. ರೈತ ಸೋಮೇಶ್ ಮಾತನಾಡಿ, ಗೌಡಗೆರೆ ಬಳಿಯ ಕೊಡಿಹಳ್ಳದ ಕ್ರಸ್ ಗೇಟ್ ಮೂಲಕ ವಿವಿಧ ಭಾಗಗಳ ಸುಮಾರು 350ರಿಂದ 400 ಎಕರೆ ಪ್ರದೇಶಕ್ಕೆ ನೀರು ಹರಿಯುತ್ತದೆ. ಕ್ರಸ್ಟ್ ಗೇಟ್ ಮುರಿದಿದ್ದರೂ ಅಧಿಕಾರಿಗಳು ಸರಿಪಡಿಸಿಲ್ಲ. ಸುಮಾರು 15ರಿಂದ 20 ಸಾವಿರ ಖರ್ಚಾಗುವ ಕೆಲಸಕ್ಕೆ ಅಧಿಕಾರಿಗಳು ಮೀನಮೇಷ ಎಣಿಸುತ್ತಿದ್ದಾರೆ. ಕೂಡಲೇ ಹೊಸ ಕ್ರಸ್ಟ್ ಗೇಟ್ ಅಳವಡಿಸಬೇಕು ಎಂದು ಆಗ್ರಹಿಸಿದರು.

**ಕ್ರಸ್ಟ್ ಗೇಟ್ ಮುರಿದಿರುವ ಬಗ್ಗೆ ಅಧಿಕಾರಿಗಳಿಂದ ಮಾಹಿತಿ ಪಡೆದು ತುರ್ತು ಕಾಮಗಾರಿಗಳ ಪಟ್ಟಿಗೆ ಸೇರಿಸಿ ತ್ವರಿತಗತಿಯಲ್ಲಿ ಸಮಸ್ಯೆ ಬಗೆಹರಿಸಲಾಗುವುದು**
**– ಪ್ರಶಾಂತ್, ಕಾವೇರಿ ನೀರಾವರಿ ನಿಗಮದ ಕೆ.ಎಂ.ಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್**

## ಮಜುರೆ ಅಂಚೆಕೊಪ್ಪಲಿನಲ್ಲಿ ಸೆರೆಸಿಕ್ಕ ಚಿರತೆ

• **ಉದಯವಾಹಿನಿ, ತಿಪಟೂರು**

ಸುಮಾರು ಒಂದು ತಿಂಗಳಿನಿಂದ ಏಳೆಂಟು ಗ್ರಾಮಸ್ಥರಿಗೆ ತೊಂದರೆ ನೀಡುತ್ತಿದ್ದ ಮೂರು-ನಾಲ್ಕು ಚಿರತೆಗಳಲ್ಲಿ ಸೋಮವಾರ ಗ್ರಾಮಸ್ಥರ ಕಾರ್ಯಾಚರಣೆಯಲ್ಲಿ ಸುಮಾರು 4 ವರ್ಷದ ಚಿರತೆ ಬೋನಿಗೆ ಬಿದ್ದಿದೆ. ತಾಲ್ಲೂಕಿನ ಕಸಬಾ ಹೋಬಳಿಯ ಕರೀಕೆರೆ ಮಜುರೆ ಅಂಚೆಕೊಪ್ಪಲು ಗ್ರಾಮದಲ್ಲಿ ಚಿರತೆ ಸೆರೆಸಿಕ್ಕಿದೆ. ಸಿದ್ದಾಪುರ, ಬೈರಾಪುರ, ಕರೀಕೆರೆ, ಅಂಚೆಕೊಪ್ಪಲು, ಶಂಕರಿಕೊಪ್ಪಲು, ಮತ್ತಿಹಳ್ಳಿ ಗ್ರಾಮಗಳಲ್ಲಿ ಗ್ರಾಮಸ್ಥರು ಚಿರತೆ ಭಯದಿಂದ ಇರುವಂತಾಗಿತ್ತು.

ಅರಣ್ಯ ಇಲಾಖೆ, ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗೆ ಸಾಕಷ್ಟು ದೂರು ಸಲ್ಲಿಸಿ ನಂತರ ಮುಖ್ಯಮಂತ್ರಿ ಕಾರ್ಯಾಲಯಕ್ಕೆ ದೂರ ಸಲ್ಲಿಸಲಾಗಿತ್ತು. ತಾಲ್ಲೂಕಿನ ಅರಣ್ಯ ಇಲಾಖೆ ಅಧಿಕಾರಿಗಳು ಕರೀಕೆರೆ, ಬೈರಾಪುರ ಗ್ರಾಮದ ತೋಟದ ಸಾಲಿನಲ್ಲಿ ಬೋನು ಇರಿಸಿದ್ದರು. ಆದರೆ ಅಂಚೆಕೊಪ್ಪಲು ಗ್ರಾಮದ ತೋಟದ ಸಾಲಿನಲ್ಲಿದ್ದ


ಉದಯವಾಹಿನಿ ಚಿತ್ರ

ಬೋನ್‌ಗೆ ಚಿರತೆ ಸೆರೆ ಸಿಗದ ಕಾರಣ ಗ್ರಾಮಸ್ಥರು ಗ್ರಾಮದ ಒಳಗೆ ಮಂಜುನಾಥ್ ಅವರ ಮನೆ ಪಕ್ಕದಲ್ಲಿಟ್ಟು ಬೋನ್‌ಗೆ ಕುರಿ, ಕೋಳಿಯನ್ನಿಟ್ಟು, ಕಳೆದ ಮೂರು ದಿನಗಳಿಂದ ರಾತ್ರಿ ಪೂರ್ತಿ ಪಹರೆ ಮಾಡಿದ್ದರು. ಬೆಳಗ್ಗೆ ಸಮಯದಲ್ಲಿ ಸೆರೆ ಸಿಕ್ಕಿದೆ.

**ಚಿರತೆ ನೋಡಲು ಮುಗಿಬಿದ್ದ ಜನ:** ಚಿರತೆ ಸೆರೆ ಸಿಕ್ಕಿದೆ ಎಂಬ ಸುದ್ದಿ ತಿಳಿದ ತಕ್ಷಣ ನೂರಾರು ಜನರು ಬಂದು ಚಿರತೆ ನೋಡಿ, ವಿಡಿಯೋ ಮಾಡಿ ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟರು.

## ಈಶ್ವರೀಯ ವಿಶ್ವವಿದ್ಯಾಲಯದಲ್ಲಿ ಪತ್ರಿಕಾ ದಿನಾಚರಣೆ

ಪತ್ರತಿಕೆ ವಿತರಕರು ಹಾಗೂ ಪತ್ರಕರ್ತರಿಗೆ ಸನ್ಮಾನ ಕಾರ್ಯಕ್ರಮ

• **ಉದಯವಾಹಿನಿ, ಚಾಮರಾಜನಗರ**

ಅಂತರಾಷ್ಟ್ರೀಯ ಆಧ್ಯಾತ್ಮಿಕ ಸಂಸ್ಥೆ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವ ವಿಶ್ವವಿದ್ಯಾಲಯ ಹಾಗೂ ಶಿಂಶ ಪ್ರಭ ಕನ್ನಡ ದಿನಪತ್ರಿಕೆ ಸಂಯುಕ್ತ ಆಶ್ರಯದಲ್ಲಿ ಪತ್ರಿಕಾ ದಿನಾಚರಣೆ, ವಿತರಕರು, ಪತ್ರಕರ್ತರಿಗೆ ಸನ್ಮಾನ ಕಾರ್ಯಕ್ರಮವನ್ನು ನಗರದ ಪ್ರಕಾಶ ಭವನದಲ್ಲಿ ಏರ್ಪಡಿಸಲಾಗಿತ್ತು. ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ , ಕರ್ನಾಟಕ ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಪಾದಕರ ಸಂಘದ ಅಧ್ಯಕ್ಷರಾದ ಎಸಿ ತಿಪ್ಪೇಸ್ವಾಮಿ, ಪ್ರತಿಯೊಬ್ಬರೂ ಪತ್ರಿಕೆಯನ್ನು ಕೊಂಡು ಓದುವ ಅಭ್ಯಾಸ ಮಾಡಿಕೊಳ್ಳುವುದು ಬಹಳ ಒಳಿತು. ಪತ್ರಿಕೆಯ ಜೀವಾಳ ಓದುಗರೇ ಆಗಿದ್ದಾರೆ. ಹಾಗೂ ಸರ್ಕಾರದ ಜಾಹೀರಾತುಗಳಿಂದ ದಿನ ದಿನಪತ್ರಿಕೆಗಳು ನಡೆಯುತ್ತಾ ಇದೆ. ಈಗಿನ ಪರಿಸ್ಥಿತಿಯಲ್ಲಿ ಪತ್ರಿಕಗಳನ್ನ ನಡೆಸುವುದು ಸಾಹಸವೇ ಸರಿ. ಕಾರ್ಯಕ್ರಮದ ಆಯೋಜಕರು ವಿತರಕರು ಹಾಗೂ ಪತ್ರಕರ್ತರನ್ನು ಸನ್ಮಾನಿಸುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಪ್ರಶಂಸಿಸಿದರು.

**ಪತ್ರಿಕೆಯ ಜೀವಾಳ ಓದುಗರು**

ಸಂಪಾದಕರಾದ ಗುರುಬಸವಯ್ಯ ಮಾತನಾಡಿ ಪತ್ರಕರ್ತರು ಹಾಗೂ ವಿತರಕರ ಸಮನ್ವಯತೆಯಿಂದ ಪತ್ರಿಕೆಗಳು ಪ್ರಗತಿ ಹೊಂದಲು ಸಾಧ್ಯ ಎಂದರು. ಸಂಸ್ಥೆಯ ಸಂಚಾಲಕಿ, ಮನೋಬಲ ತರಬೇತುದಾರೆ, ಸ್ವಾಮಿ ವಿವೇಕಾನಂದ ಸದ್ಭಾವನ ರಾಜ್ಯ ಪ್ರಶಸ್ತಿ ಪುರಸ್ಕೃತೆ, ರಾಜಯೋಗಿನಿ ಬ್ರಹ್ಮಾಕುಮಾರಿ ದಾನೇಶ್ವರೀಜಿ ಮಾತನಾಡಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮಾಧ್ಯಮವು ನಾಲ್ಕನೇ ಅಂಗವಾಗಿದೆ. ಮಾಧ್ಯಮ ಇಂದು ಸಮಾಜವನ್ನಷ್ಟೇ ಅಲ್ಲ ಇಡೀ ವಿಶ್ವವನ್ನೇ ತನ್ನ ಕಪಿನಷ್ಟಿಯಲ್ಲಿ ಇಟ್ಟುಕೊಂಡಿದೆ. ಮಾಧ್ಯಮ ಸಮಾಜದ ಹಿತಕ್ಕಾಗಿರುವುದೇ ಹೊರತು ಮಾರಕಕ್ಕೆ ಅಲ್ಲ ಎಂದರು. ಸಮಾಜದ ಹಿತ ಯಾವುದರಲ್ಲಿದೆ ಅದು ಕೇವಲ ಸಕರಾತ್ಮಕ ಬದಲಾವಣೆಯಲ್ಲಿದೆ. ಅದನ್ನು ಪತ್ರಿಕೆಗಳು ಮಾತ್ರ ಮಾಡಲು ಸಾಧ್ಯ. ಪತ್ರಿಕೆಗಳು ಸಮಾಜದ ಮುಖವನ್ನು ತೋರಿಸುವಂತ ಕನ್ನಡಿಯ ಕೆಲಸವನ್ನು ಮಾಡಬೇಕು.

ಒಂದಾನೊಂದು ಕಾಲಘಟ್ಟದಲ್ಲಿ ಜನರು ಸುಳ್ಳು ಹೇಳುತ್ತಿದ್ದರು ಪತ್ರಿಕೆಗಳು ಸತ್ಯ ಹೇಳುತ್ತಿದ್ದವು. ಆದರೆ ಈಗ ಆ ರೀತಿ ನಡೆಯುತ್ತಿದೆಯೇ ಎಂದು ಪ್ರಶ್ನಿಸಿದರು. ಪತ್ರಕರ್ತರಾದ ವಿಜಯಕುಮಾರ್, ಸಾಗರ ರಾಜ್, ರಂಗಸ್ವಾಮಿ, ಪುಟ್ಟಸ್ವಾಮಿ, ಪ್ರಸನ್ನ ನಂಜುಂಡಯ್ಯ, ಬಸವರಾಜು, ಸ್ವಾಮಿ ಹೆಗಡೆ ಉಡುಪ, ಪುಟ್ಟಸ್ವಾಮಿ, ಮಂಜುನಾಥ್, ಪುರುಷೋತ್ತಮ, ಚಂದ್ರಶೇಖರ, ಕುಮಾರ್, ಜಿ ಬಂಗಾರ, ಹಾಗೂ ವಿತರಕರಾದ ಓಂ ಶಾಂತಿ ನ್ಯೂಸ್ ಸರ್ವಿಸ್ನ ಬಿಕೆ ಆರಾಧ್ಯ, ಹಾಗೂ ಈಗ ಶರೀಫ್ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ವಾರ್ತಾಧಿಕಾರಿ, ರಮೇಶ್ ರವರು, ಕೌಡ್ಲೆ ಚನ್ನಪ್ಪರವರು, ಶಿಕ್ಷಕರಾದ ರಂಗನಾಥ್ ರವರು, ಪೊಲೀಸ್ ಇಲಾಖೆಯ ಗುರುಸಿದ್ಧ ರವರು, ಶಿಕ್ಷಣ ಇಲಾಖೆಯ ಸುಂದ್ರಣ್ಣರವರು, ಆರೋಗ್ಯ ಇಲಾಖೆಯ ಪುಷ್ಪ ಗೀತಾ ವಿದ್ಯಾ, ಶಿವಕುಮಾರ್, ಆಶಾ, ಶಶಿ, ಸುಲೋಚನಾ ಹಾಜರಿದ್ದರು



ಉದಯವಾಹಿನಿ ಚಿತ್ರ

**ನಮ್ಮ ಸಿದ್ಧಾಂತವನ್ನು ಎಂದೂ ಬಿಡಬಾರದು. ಸಿದ್ಧಾಂತಗಳನ್ನು ಬಿಟ್ಟರೆ ಕೆಳಗೆ ಬೀಳುತ್ತೇವೆ. ಪತ್ರಿಕೆಗಳು ಖಡ್ಗದ ಕೆಲಸ ಮಾಡಬೇಕಾಗಿದೆ. ಸಮಾಜವನ್ನು ಬದಲಾವಣೆಯಲ್ಲಿ ತರಲು ಸ್ವಯಂ ಪರಿವರ್ತನೆ ಆಗಬೇಕಾಗಿದೆ. ಅದಕ್ಕೆ ಮಾರ್ಗದರ್ಶನವನ್ನು ಈಶ್ವರೀಯ ವಿಶ್ವವಿದ್ಯಾಲಯವು ರಾಜಯೋಗ ಶಿಕ್ಷಣದ ಮೂಲಕ ಉಚಿತವಾಗಿ ಜಗತ್ತಿನಾದ್ಯಂತ ಕಲಿಸುತ್ತಿದೆ ಎಂದರು.**

## ನಕಲಿ ಚಿನ್ನದ ಉಂಗುರ ಗಿರವಿ; ಆರೋಪಿ ಬಂಧನ

• **ಉದಯವಾಹಿನಿ, ಹುಣಸೂರು**

ತಾಲ್ಲೂಕಿನ ಗಾವಡಗೆರೆ ಗ್ರಾಮದ ಗಿರವಿ ಅಂಗಡಿಯಲ್ಲಿ ನಕಲಿ ಚಿನ್ನದ ಉಂಗುರ ಗಿರವಿ ಇಟ್ಟು 5 ಲಕ್ಷ ಸಾಲ ಪಡೆದ ಆರೋಪಿಯನ್ನು ಹುಣಸೂರು ಗ್ರಾಮಾಂತರ ಪೊಲೀಸರು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ನೀಡಿದ್ದಾರೆ.



ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನ ಚಿಕ್ಕನಾಯಕನಹಳ್ಳಿ ಗ್ರಾಮದ ನಿವಾಸಿ ಮಂಜುನಾಥ ಬಂಧಿತ ಆರೋಪಿ. ಈತ ಗ್ರಾಮದ ಕಾವೇರಿ ಜ್ಯುವೆಲರಿ ಅಂಗಡಿಯಲ್ಲಿ ವಿವಿಧ ಹೆಸರಿನಲ್ಲಿ 11 ಚಿನ್ನದ ಉಂಗುರಗಳನ್ನು ಗಿರವಿ ಇಟ್ಟು 5 ಲಕ್ಷ ಸಾಲ ಪಡೆದಿದ್ದ, ಉಂಗುರಗಳನ್ನು ಪರಿಶೀಲಿಸಿ ನಕಲಿ ಚಿನ್ನ ಎಂದು ಖಾತ್ರಿಗೊಂಡ ಬಳಿಕ ಗಿರವಿ ಅಂಗಡಿ ಮಾಲಿಕ ಜೇಸಿಂಗ್ ದೂರು ದಾಖಲಿಸಿದ್ದರು. ಜುಲೈ 6ರಂದು ಆರೋಪಿಯು ಸ್ನೇಹಿತರೊಂದಿಗೆ ಉಂಗುರ ಗಿರವಿ ಇಡಲು ಅಂಗಡಿಗೆ ಬಂದ ಸಮಯದಲ್ಲಿ ವಶಕ್ಕೆ ಪಡೆಯಲಾಗಿದೆ. ಕೃತ್ಯದಲ್ಲಿ ಈತನ ಇಬ್ಬರು ಸ್ನೇಹಿತರೂ ಭಾಗಿಯಾಗಿದ್ದು, ಅವರು ಕಾರಿನಲ್ಲಿ ನಾಪತ್ತೆಯಾಗಿದ್ದಾರೆ.

# ಸೋಲಾರ್ ಘಟಕ ಇಡೀ ದೇಶದ ಡೇರಿಗಳಿಗೆ ಮಾದರಿ

ಯಾಮಾರಿಸಲು ಒಕ್ಕೂಟವೇನು ರಿಯಲ್ ಎಸ್ಟೇಟೇ?: ನಾರಾಯಣಸ್ವಾಮಿಗೆ ನಂಜೇಗೌಡ ತಿರುಗೇಟು

• **ಉದಯವಾಹಿನಿ, ಕೋಲಾರ**

ಹಾಲು ಒಕ್ಕೂಟವೇನು ರಿಯಲ್ ಎಸ್ಟೇಟ್ ಸಂಸ್ಥೆಯೇ? ಜಮೀನು ಮಾರಾಟ ಮಾಡಿ ಮಧ್ಯದಲ್ಲಿ ಸರ್ಕಾರಿ ಜಮೀನುಗಳನ್ನು ಯಾಮಾರಿಸಿ ಲೇಔಟ್‌ಗೆ ಸೇರಿಸಿಕೊಂಡು ದುಡ್ಡು ಮಾಡುವ ವಹಿವಾಟೇ ಎಂದು ಕೋಮುಲ್ ನೂತನ ಅಧ್ಯಕ್ಷ, ಶಾಸಕ ಕೆ.ವೈ.ನಂಜೇಗೌಡ, ಸ್ವಪಕ್ಷೀಯ ಕಾಂಗ್ರೆಸ್ ಶಾಸಕ ಎಸ್. ಎನ್.ನಾರಾಯಣಸ್ವಾಮಿ ಅವರಿಗೆ ತಿರುಗೇಟು ನೀಡಿದರು.



**ಹಾಲು ಉತ್ಪಾದಕರಿಗೆ ಹೆಚ್ಚಿನ ದರ ಕೊಡಲು ಏನು ಮಾಡಬೇಕೆಂಬ ಚರ್ಚೆ ನಡೆದಿದೆ. ಮನಸ್ಸಿಗೆ ಬಂದಂತೆ ತೀರ್ಮಾನ ಮಾಡಲು ಆಗದು. ಮುಂದೆ ನೋಡುತ್ತೇವೆ**
**–ಕೆ.ವೈ.ನಂಜೇಗೌಡ, ಶಾಸಕ**



**ಕೋಚಿಮುಲ್‌ನಲ್ಲಿ ಲೂಟಿ ಹೊಡೆದ ಹಣವನ್ನೇ ಒಕ್ಕೂಟದ ಚುನಾವಣೆಯಲ್ಲಿ ಕೋಟಿಗಟ್ಟಲೆ ಸುರಿದು ಗೆದ್ದಿದ್ದಾರೆ. ನನ್ನ ಸೋಲಿಸಲು ಜಾತಿ ಸಂಚು ನಡೆಯಿತು. ಆದರೆ ಒಕ್ಕಲಿಗರು ನನ್ನ ಕೈಬಿಡಲಿಲ್ಲ.**
**–ಎಸ್.ಎನ್.ನಾರಾಯಣಸ್ವಾಮಿ, ಶಾಸಕ**

ಒಕ್ಕೂಟದ ಮುಖ್ಯ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಎಸ್.ಎನ್.ನಾರಾಯಣಸ್ವಾಮಿ ಪದೇದೇ ನನ್ನ ವಿರುದ್ಧ ಮಾತನಾಡುತ್ತಾರೆ. ಎದ್ದರೆ, ಕುಳಿತರೆ ಅವರ ಕಣ್ಣಿಗೆ ನಂಜೇಗೌಡನೇ ಕಾಣಿಸುತ್ತಾನೆ. ಕೋಚಿಮುಲ್‌ನಲ್ಲಿ ನೂರಾರು ಕೋಟಿ ಹಗರಣ ನಡೆದಿದೆ ಎನ್ನುತ್ತಿದ್ದಾರೆ. ಈಗ ಅವರೇ ನಿರ್ದೇಶಕರಾಗಿ ಬಂದಿದ್ದಾರೆ. ನಮ್ಮ ಯೋಜನೆ ಇರುವುದೇ 300 ಕೋಟಿ. ಅವರು ನೂರಾರು ಕೋಟಿ ಅವ್ಯವಹಾರ ಎನ್ನುತ್ತಿದ್ದಾರೆ. ಒಕ್ಕೂಟದ ಹಣದಲ್ಲಿ ಅಭಿವೃದ್ಧಿ ಕೆಲಸ ಮಾಡುತ್ತಿದ್ದೇವೆ. ಸೋಲಾರ್ ಘಟಕ ಇಡೀ ದೇಶದ ಡೇರಿಗಳಿಗೆ ಮಾದರಿಯಾಗಿದೆ ಎಂದರು. ಮೂರು ಬಾರಿ ಶಾಸಕರಾಗಿರುವ ಅವರು ಹಿರಿಯರು ಎಂದು ನಾನು ಹೇಳಿದ್ದೇನೆ. ಅವರನ್ನು ಹೀಯಾಳಿಸಲು ಹೇಳಿಲ್ಲ. ನಾರಾಯಣಸ್ವಾಮಿ ಕುರಿತು ಇನ್ನು ಮಾತನಾಡಬಾರದೆಂದು ನಾನು ನಿರ್ಧರಿಸಿದ್ದೇನೆ. ಇವತ್ತಿಗೆ ಕೊನೆ. ಅವರು ಬೇಕಾದರೆ ಮಾತನಾಡಿಕೊಂಡಿರಲಿ. ಅವರು ಎಷ್ಟು ಮಾತನಾಡಿದರೂ ಅಷ್ಟು ನನಗೆ ವರ. ಅವರು ನಮ್ಮ ಪಕ್ಷದವರೇ; ಬೇರೆ ಪಕ್ಷದವರಾಗಿದ್ದರೆ ನೋಡಿಕೊಳ್ಳುತ್ತಿದ್ದೆ. ಜೀವನಪೂರ್ತಿ ಗೆರೆ ಹಾಕಿಕೊಂಡೇ ಬಂದಿದ್ದೇನೆ ಎಂದು ಹೇಳಿದರು. ಕೋಮುಲ್ ಅಧಿಕಾರಿಗಳು, ಸೆಕ್ಷನ್ ಅಧಿಕಾರಿಗಳು, ತಾಲ್ಲೂಕುವಾರು ಡಿಎಂ, ಸೂಪರ್‌ವೈಸರ್ ಸಭೆ ನಡೆಸಿ ಹಲವಾರು ವಿಚಾರ ಚರ್ಚಿಸಿದ್ದೇನೆ. ಮುಂದೆ ಆಡಳಿತ ಮಂಡಳಿ ಸಭೆ ಕರೆಯಬೇಕು. ಹೊಸ ಹೊಸ ಕಾರ್ಯಕ್ರಮ ಮಾಡಬೇಕಿದೆ. ನಮ್ಮ ಗುರಿ ವರ್ಷದೊಳಗೆ 10 ಲಕ್ಷ ಲೀಟರ್ ಹಾಲು ಉತ್ಪಾದಿಸಬೇಕು. ಅದಕ್ಕಾಗಿ ಹಾಲು ಉತ್ಪಾದಕರನ್ನು ಹೆಚ್ಚಿಸಬೇಕು. ಈ ನಿಟ್ಟಿನಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳನ್ನು ಹೆಚ್ಚಿಸಬೇಕು.

**ಅವರನ್ನು ಹೀಯಾಳಿಸಲು ಹೇಳಿಲ್ಲ**

ಜಿಲ್ಲೆಯಲ್ಲಿ 1,600ಕ್ಕೂ ಅಧಿಕ ಹಳ್ಳಿಗಳಿದ್ದು, 900ಕ್ಕೂ ಅಧಿಕ ಸಂಘಗಳಿವೆ. ಕೆಲ ಹಳ್ಳಿಗಳಲ್ಲಿ ಇನ್ನೂ ಸಂಘಗಳಿಲ್ಲ. ಎಲ್ಲೆಲ್ಲಿ ಹಾಲು ಉತ್ಪಾದನೆ ಆಗುತ್ತದೆಯೋ ಅಲ್ಲಿ ಸಂಘ ರಚಿಸಲಾಗುವುದು ಎಂದರು. ಪ್ರತಿ ಸಂಘದಲ್ಲೂ ಕಾಮನ್ ಸಾಫ್ಟ್‌ವೇರ್ ಅಳವಡಿಸಬೇಕು. ಫ್ಯಾಟ್ ಮೇಲೆ ಹಾಲು ಉತ್ಪಾದಕರಿಗೆ ದರ ಕೊಡಬೇಕು. ಕಾಮನ್ ಸಾಫ್ಟ್‌ವೇರ್ ಅಳವಡಿಕೆಯಿಂದ ಗುಣಮಟ್ಟದ ಹಾಲು ನೀಡುವವರಿಗೆ ಹೆಚ್ಚು ಹಣ ಸಿಗುತ್ತದೆ.

ಈ ಸಾಫ್ಟ್‌ವೇರ್ ಅಳವಡಿಕೆ ಸಂಬಂಧ ಎನ್‌ಡಿಡಿಬಿ ಜೊತೆ ಸಹಕಾರ ಸಚಿವ ಕೆ.ಎನ್.ರಾಜಣ್ಣ ಚರ್ಚೆ ನಡೆಸಿದ್ದಾರೆ. ಎಲ್ಲಾ ಸಂಘಗಳಿಗೆ ಈ ಸಾಫ್ಟ್ ವೇರ್ ಅಳವಡಿಸಲಾಗುವುದು ಎಂದು ಹೇಳಿದರು.

**ಬೈರತಿ ವಿರುದ್ಧ ಸಿಎಂಗೆ ಎಸ್‌ಎನ್ ದೂರು:** ನಾರಾಯಣಸ್ವಾಮಿ

**ನಾರಾಯಣಸ್ವಾಮಿ ಬಿಪಿಎಲ್ ಅಲ್ಲ; ಎಪಿಎಲ್**

**ಎಸ್.ಎನ್. ನಾರಾಯಣಸ್ವಾಮಿ ದಲಿತರು ಎನ್ನುವುದು ಗೊತ್ತು ಮೀಸಲು ವಿಧಾನಸಭೆ ಕ್ಷೇತ್ರದ ಶಾಸಕ ಎನ್ನುವುದು ಗೊತ್ತು. ಅವರು ಬಿಪಿಎಲ್ ಅಲ್ಲ; ಎಪಿಎಲ್. ಆದರೆ ಪದೇಪದೇ ಬಿಪಿಎಲ್ ಎನ್ನುತ್ತಾರೆ. ಎಷ್ಟು ಕೋಟಿ ತೆರಿಗೆ ಪಾವತಿಸುತ್ತಾರೆ? ಎಷ್ಟೋ ದಲಿತರು ಬಡವರು ಅಲೆಯುತ್ತಿದ್ದಾರೆ. ಏಕೆ ಇವರು ಈ ರೀತಿ ಮಾತನಾಡುತ್ತಾರೆ ಎಂದು ಕೆ.ವೈ.ನಂಜೇಗೌಡ ಪ್ರಶ್ನಿಸಿದರು.**

ಪದೇಪದೇ ತಾನು ದಲಿತ ಎನ್ನುತ್ತಿದ್ದು ಮೂರು ಬಾರಿ ಶಾಸಕರಾಗಿ ರುವ ಅವರಿಗೆ ಎಲ್ಲಾ ಸಮುದಾಯದವರು ವೋಟು ಹಾಕಿದ್ದಾರೆ. ಈಗ ನೋಡಿದರೆ ಒಕ್ಕಲಿಗರು ದೇವರು ಎಂದಿದ್ದಾರೆ. ಒಕ್ಕಲಿಗರು ಬದುಕಬಾರದೇ ಎಂದು ಕೆ.ವೈ.ನಂಜೇಗೌಡ ಪ್ರಶ್ನಿಸಿದರು. ನಾನು ಒಕ್ಕಲಿಗ ನಿಜ. ಆದರೆ ಮಾಲೂರು ಕ್ಷೇತ್ರದಲ್ಲಿ ದಲಿತರು ಕುರುಬರು ಮುಸ್ಲಿಮರು ಸೇರಿ ಎಲ್ಲಾ ಜಾತಿಯವರು ನನ್ನನ್ನು 1986ರಿಂದ ಉಳಿಸಿಕೊಂಡು ಬಂದಿದ್ದಾರೆ. ಕ್ಷೇತ್ರದಲ್ಲಿ 50 ಸಾವಿರ ಒಕ್ಕಲಿಗರು ಇದ್ದಾರೆ. ಆದರೆ ನಾನು ಒಕ್ಕಲಿಗರ ಲೀಡರ್ ಎಂದು ಎಲ್ಲೂ ಹೇಳಿಕೊಂಡಿಲ್ಲ ಎಂದರು.

## ಮಿನಿ ನ್ಯೂಸ್

### ಹೊತ್ತಿ ಉರಿದ ಎಲೆಕ್ಟ್ರಿಕ್ ಸ್ಕೂಟರ್

• **ಉದಯವಾಹಿನಿ, ರಾಮನಗರ**

ನಗರದ ಹೊರವಲಯದ ತಾಲ್ಲೂಕಿನ ಕುಂಬಾಪುರ ಗೇಟ್ ಬಳಿಯ ಬೆಂಗಳೂರು-ಮೈಸೂರು ಹಳೆ ಹೆದ್ದಾರಿಯಲ್ಲಿ ರಾತ್ರಿ ಸಂಜಯ್ ಎಂಬುವವರ ಓಲಾ ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡು ಹೊತ್ತಿ ಉರಿದಿದೆ. ಜಿಲ್ಲಾಸ್ಪತ್ರೆಯಲ್ಲಿ ಕೆಲಸ ಮಾಡುವ ಚನ್ನಪಟ್ಟಣ ತಾಲ್ಲೂಕಿನ ಕುಕ್ಕೂರಿನ ಸಂಜಯ್ ಅವರು, ಊರಿನಿಂದ ರಾತ್ರಿ 7 ಗಂಟೆ ಸುಮಾರಿಗೆ ರಾಮನಗರಕ್ಕೆ ಸ್ಕೂಟರ್‌ನಲ್ಲಿ ಬರುತ್ತಿದ್ದರು. ಕುಂಬಾಪುರ ಗೇಟ್ ಬಳಿ ಸ್ಕೂಟರ್ ಇದ್ದಕ್ಕಿದ್ದಂತೆ ಆಫ್ ಆಯಿತು.

ಸಂಜಯ್ ಅವರು ಸ್ಟಾರ್ಟ್ ಮಾಡಲು ಯತ್ನಿಸುತ್ತಿದ್ದಾಗ ಹೊಗೆ ಬರಲಾರಂಭಿಸಿತು. ಅದಾದ ಕೆಲವೇ ಕ್ಷಣಗಳಲ್ಲಿ ಬೆಂಕಿ ಹೊತ್ತಿಕೊಂಡು ಇಡೀ ಸ್ಕೂಟರ್ ಸುಟ್ಟು ಹೋಯಿತು. ಸಂಜಯ್ ಹಾಗೂ ರಸ್ತೆ ಬಳಿ ಇದ್ದ ಸ್ಥಳೀಯರು ಬೆಂಕಿ ನಂದಿಸಲು ಯತ್ನಿಸಿದರೂ ಸಾಧ್ಯವಾಗಲಿಲ್ಲ. ಘಟನೆ ಕುರಿತು ಸಂಜಯ್ ಅವರು ನೀಡಿದ ದೂರಿನ ಮೇರೆಗೆ ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಜುಲೈ 11ಕ್ಕೆ ಚಿಂತಾಮಣಿಯಲ್ಲಿ ಜೆಡಿಎಸ್ ಸಮಾವೇಶ

• **ಉದಯವಾಹಿನಿ, ಚಿಂತಾಮಣಿ**

ರಾಜ್ಯದಲ್ಲಿ ಜೆಡಿಎಸ್ ಸಂಘಟನೆ ಮಾಡಲು ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ರಾಜ್ಯದಾದ್ಯಂತ ಸಂಚರಿಸುತ್ತಿದ್ದು ಚಿಂತಾಮಣಿಗೆ ಜುಲೈ 11ರಂದು ಆಗಮಿಸಲಿದ್ದಾರೆ ಎಂದು ಮಾಜಿ ಶಾಸಕ ಎಂ.ಕೃಷ್ಣಾರೆಡ್ಡಿ ತಿಳಿಸಿದರು. ನಗರದ ಜೆಡಿಎಸ್ ಕಾರ್ಯಾಲಯ ಜೆ.ಕೆ.ಭವನದಲ್ಲಿ ನಡೆದ ಪಕ್ಷದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

ಜೆಡಿಎಸ್ ಪರಿಣಾಮಕಾರಿಯಾಗಿ ಸಂಘಟನೆ ಮಾಡಿ ಮತ್ತೆ ರಾಜ್ಯದಲ್ಲಿ ಅಧಿಕಾರಕ್ಕೆ ತರಲು ಅವರು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಂಚರಿಸಿ ಮುಖಂಡರು ಹಾಗೂ ಕಾರ್ಯಕರ್ತರನ್ನು ಹುರಿದುಂಬಿಸುತ್ತಿದ್ದಾರೆ. ನಗರದ ಹೊರವಲಯದ ಮದನಪಲ್ಲಿ ರಸ್ತೆಯಲ್ಲಿರುವ ಜೆ.ಕೆ.ಭವನದಲ್ಲಿ ನಿಖಿಲ್ ಕುಮಾರಸ್ವಾಮಿ ನೇತೃತ್ವದಲ್ಲಿ ಕಾರ್ಯಕರ್ತರ ಸಮಾವೇಶ ನಡೆಯಲಿದೆ ಎಂದು ತಿಳಿಸಿದರು.

### ಅರಳೀಕಾಯಿ ತಿಂದು ಮಕ್ಕಳು ಅಸ್ವಸ್ಥ

• **ಉದಯವಾಹಿನಿ, ಬಂಗಾರಪೇಟೆ**

ತಾಲ್ಲೂಕಿನ ಪುತ್ರಸೊಣೇನಹಳ್ಳಿಯಲ್ಲಿ ಅರಳಿಕಾಯಿಯನ್ನು ಬಾದಾಮಿ ಎಂದು ಭಾವಿಸಿ ತಿಂದ ಏಳು ಸರ್ಕಾರಿ ಪ್ರಾಥಮಿಕ ಶಾಲೆ ಮಕ್ಕಳು ವಾಂತಿ, ಭೇದಿ ಮಾಡಿಕೊಂಡು ಅಸ್ವಸ್ಥರಾಗಿದ್ದಾರೆ. ಅಸ್ವಸ್ಥರಾದ ಮಕ್ಕಳನ್ನು ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಲಾಗಿದೆ. ಮಧ್ಯಾಹ್ನ ಊಟ ಮಾಡಿದ ನಂತರ ಎಲ್ಲಾ ಮಕ್ಕಳು ಶಾಲೆ ಆವರಣದಲ್ಲಿ ಆಟವಾಡುತ್ತಿದ್ದರು. ಏಳು ಮಕ್ಕಳು ಶಾಲೆ ಕಾಂಪೌಂಡ್ ಪಕ್ಕದಲ್ಲಿನ ತೋಟದಲ್ಲಿ ಕಡಿದುಹಾಕಲಾಗಿದ್ದ ಗಿಡದಲ್ಲಿದ್ದ ಅರಳೀಕಾಯಿಯನ್ನು ಬಾದಾಮಿ ಎಂದು ಭಾವಿಸಿ ತಿಂದಿದ್ದಾರೆ.

ವಾಂತಿ, ಭೇದಿ ಪ್ರಾರಂಭವಾಗಿದ್ದು, ಅವರನ್ನು ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಮಕ್ಕಳು ಆರೋಗ್ಯವಾಗಿದ್ದಾರೆ ಎಂದು ವೈದ್ಯರು ತಿಳಿಸಿದ್ದಾರೆ. ಶಾಲಾ ಶಿಕ್ಷಕಿಯೂ ಈ ಹಣನ್ನು ತಿಂದಿದ್ದಾರೆ. ಅವರಿಗೆ ಯಾವುದೇ ತೊಂದರೆಯಾಗಿಲ್ಲ ಎಂದು ತಿಳಿದುಬಂದಿದೆ. ಈ ಘಟನೆಯ ಮಾಹಿತಿ ತಿಳಿದು ಆಸ್ಪತ್ರೆಗೆ ಭೇಟಿ ನೀಡಿದ ಬಿಇಒ ಜಿ. ಗುರುಮೂರ್ತಿ, ಶಿಕ್ಷಕರ ಸಂಘದ ಅಧ್ಯಕ್ಷ ಆಂಜನೇಯ ಗೌಡ, ಸರ್ಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಸುಜಾತ, ಮಕ್ಕಳ ಆರೋಗ್ಯ ವಿಚಾರಿಸಿದರು.

### ಮೂಖಹಳ್ಳಿ: ದುರ್ವಾಸನೆಯಲ್ಲಿ ಪಾಠ ಕೇಳುವ ದುಸ್ಥಿತಿ

• **ಉದಯವಾಹಿನಿ, ಗುಂಡ್ಲುಪೇಟೆ**

ತಾಲ್ಲೂಕಿನ ಮೂಖಹಳ್ಳಿ ಸರ್ಕಾರಿ ಕಿರಿಯ ಶಾಲೆ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಚರಂಡಿಯಲ್ಲಿ ಹೂಳು ತುಂಬಿದ ಪರಿಣಾಮ ಕೊಳಚೆ ನೀರು ರಸ್ತೆ ಮೇಲೆ ಹರಿಯುತ್ತಿದೆ. ಇದರಿಂದ ಶಾಲಾ ಮಕ್ಕಳು ದುರ್ವಾಸನೆಯಲ್ಲಿ ಪಾಠ ಕೇಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಮೂಖಹಳ್ಳಿ ಗ್ರಾಮ ಪಂಚಾಯಿತಿ ಕೇಂದ್ರವಾಗಿದ್ದು, ಗ್ರಾಮದಲ್ಲಿ ಉತ್ಪತ್ತಿಯಾಗುವ ಕೊಳಚೆ ನೀರು ಚರಂಡಿಗಳ ಮೂಲಕ ಹರಿದು ಶಾಲಾ ಕಾಂಪೌಂಡ್ ಬದಿಯಲ್ಲಿರುವ ನಿಲ್ಲುತ್ತಿದೆ. ಇದರಿಂದ ಚರಂಡಿಯಲ್ಲಿ ಕಳೆದ ತಿಂಗಳುಗಳಿಂದಲೂ ಕಸಕಡ್ಡಿ, ಪ್ಲಾಸ್ಟಿಕ್ ತ್ಯಾಜ್ಯಗಳು ಶೇಖರಣೆಯಾಗುತ್ತಿದೆ. ಈ ಕಾರಣದಿಂದ ನೀರು ಸರಾಗವಾಗಿ ಮುಂದೆ ಹರಿದು ಹೋಗಲು ಸಾಧ್ಯವಾಗದೆ ನಿಂತಿದ್ದು, ಸುತ್ತಲ ಪ್ರದೇಶವೆಲ್ಲ ಗಬ್ಬೆದ್ದು ನಾರುತ್ತಿದೆ. ಜೊತೆಗೆ ರಸ್ತೆ ಮೇಲೆ ಕೊಳಚೆ ನೀರು ಹರಿಯುವಂತಾಗಿದೆ. ಈ ಬಗ್ಗೆ ಗ್ರಾ.ಪಂ ಅಭಿವೃದ್ಧಿ ಅಧಿಕಾರಿ, ಸದಸ್ಯರು ನಿರ್ಲಕ್ಷ್ಯ ವಹಿಸಿದ್ದಾರೆ. ಎಂದು ಸ್ಥಳೀಯರು ದೂರಿದ್ದಾರೆ.

**ಶಾಲಾ ಕಾಂಪೌಂಡ್‌ಗೆ ಹೊಂದಿಕೊಂಡಿರುವ ಚರಂಡಿಯಲ್ಲಿ ತುಂಬಿರುವ ಹೂಳನ್ನು ಕೂಡಲೇ ತೆಗೆಸಲಾಗುವುದು. ಗ್ರಾ.ಪಂ ಅನುದಾನ ಬಳಸಿ ರಸ್ತೆ ಮತ್ತು ಸುಸಜ್ಜಿತ ಚರಂಡಿ ನಿರ್ಮಾಣಕ್ಕೂ ಕ್ರಮ ವಹಿಸಲಾಗುವುದು**
**–ಪ್ರಸಾದ್ ಮೂಖಹಳ್ಳಿ, ಗ್ರಾ.ಪಂ ಪಿಡಿಒ**

ಶಾಲಾ ಕಾಂಪೌಂಡ್ ಬದಿಯ ಚರಂಡಿಯಲ್ಲಿ ಕೊಳಚೆ ನೀರು ನಿಲ್ಲುತ್ತಿರುವ ಕಾರಣ ಡೆಂಗಿ, ಚಿಕನ್ ಗುನ್ಯಾ ಇತರೆ ಸಾಂಕ್ರಾಮಿಕ ರೋಗಗಳು ಹರಡುವ ಭೀತಿಯಲ್ಲಿ ಗ್ರಾಮಸ್ಥರು, ಶಾಲಾ ಮಕ್ಕಳಿದ್ದಾರೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಎಚ್ಚೆತ್ತುಕೊಂಡು ಚರಂಡಿಯಲ್ಲಿ ತುಂಬಿರುವ ಹೂಳು ತೆರವುಗೊಳಿಸಬೇಕು ಎಂದು ಆಗ್ರಹಿಸಿದ್ದಾರೆ.

### ಕಾಡಾನೆ ದಾಳಿಗೆ ವ್ಯಕ್ತಿ ಸಾವು, ಮತ್ತೊಬ್ಬರಿಗೆ ಗಾಯ

• **ಉದಯವಾಹಿನಿ, ಗೋಣಿಕೊಪ್ಪಲು**

ಇಲ್ಲಿಗೆ ಸಮೀಪದ ರುದ್ರಬೀಡು ಗ್ರಾಮದಲ್ಲಿ ಮಂಗಳವಾರ ಕಾಡಾನೆ ದಾಳಿಗೆ ಸಿಲುಕಿ ವ್ಯಕ್ತಿಯೊಬ್ಬರು ಮೃತಪಟ್ಟಿದ್ದು, ಅಜೇಶ್ (40) ಎಂಬುವವರು ಗಾಯಗೊಂಡಿದ್ದಾರೆ. ಮೃತಪಟ್ಟ ವ್ಯಕ್ತಿಯ ಗುರುತು ಪತ್ತೆಯಾಗಿಲ್ಲ. ಮೊದಲಿಗೆ ಸೈಕಲ್‌ನಲ್ಲಿ ತೆರಳುತ್ತಿದ್ದ ಅಜೇಶ್ ಮೇಲೆ ಆನೆ ಎರಗಿದೆ. ಗಾಯಗೊಂಡ ಅವರು ದೂರ ಓಡಿ ತಪ್ಪಿಸಿಕೊಂಡರು. ನಂತರ, ಸಮೀಪದಲ್ಲೇ ಗಡ್ಡಧಾರಿ ವ್ಯಕ್ತಿಯೊಬ್ಬರು ನಡೆಯುತ್ತ ಹೋಗುತ್ತಿದ್ದರು. ಇವರನ್ನು ನೆಲಕ್ಕೆ ಬೀಳಿಸಿದ ಕಾಡಾನೆ ದಾಳಿನಡೆಸಿತು. ಇದರಿಂದ ಅವರು ಸ್ಥಳದಲ್ಲೇ ಮೃತಪಟ್ಟರು.

ಅಂದಾಜು 45 ವರ್ಷದವರಾಗಿರುವ ಅವರು ಸ್ಥಳೀಯರಿಗೆ ಇವರು ಪರಿಚಿತಲ್ಲ. ಕಳೆದ 2-3 ದಿನಗಳಿಂದ ಇಲ್ಲಿ ಇವರು ಕಾಣಿಸಿಕೊಂಡಿದ್ದು, ಬಸ್‌ನಿಲ್ದಾಣದಲ್ಲಿ ಮಲಗುತ್ತಿದ್ದರು ಎಂದು ಸ್ಥಳೀಯರು ಹೇಳಿದ್ದಾರೆ. ಇವರ ಗುರುತು ಪತ್ತೆ ಹಚ್ಚುವ ಪ್ರಯತ್ನ ನಡೆದಿದೆ. ತಪ್ಪಿಸಿಕೊಂಡ ಅಜೇಶ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ವಲಯ ಅರಣ್ಯಾಧಿಕಾರಿ ಗಂಗಾಧರಪ್ಪ ತಿಳಿಸಿದರು.

ಅಂತರಾಳದಿಂದ..
EDITORIAL

# ಗೌರವಕ್ಕೆ ಚ್ಯುತಿ ತಾರದಿರಲಿ ನಡವಳಿಕೆ: ಅಧಿಕಾರಿಗಳ ಆತ್ಮಸ್ಥೈರ್ಯ ಕುಂದಿಸದಿರಿ

ಪ್ರಜಾಪ್ರಭುತ್ವವು ಸದೃಢವಾಗಿ ಹೆಜ್ಜೆ ಇಡುವಂತಾಗಲು ಚುನಾಯಿತ ಪ್ರತಿನಿಧಿಗಳು ಹಾಗೂ ಅಧಿಕಾರಿ ವರ್ಗದವರು ನೆಲದ ಕಾನೂನನ್ನು ಎತ್ತಿ ಹಿಡಿಯುವ ಜೊತೆಗೆ, ಸಾರ್ವಜನಿಕ ಸೇವೆಯಲ್ಲಿ ಒಟ್ಟಾಗಿ, ಪರಸ್ಪರ ಗೌರವದಿಂದ ಕೆಲಸ ಮಾಡಬೇಕು. ಯಾರೇ ಆಗಲಿ ಅಹಮಿಕೆ ತೋರಿ ಪರಸ್ಪರರ ನಡುವಿನ ಸಂಬಂಧಗಳು ಹದಗೆಟ್ಟರೆ, ಅದರಿಂದಾಗುವ ಹಾನಿಯು ಆ ವ್ಯಕ್ತಿಗಳಿಗೆ ಸೀಮಿತವಾಗಿ ಉಳಿಯದೆ, ಇಡೀ ವ್ಯವಸ್ಥೆಗೆ ವಿಸ್ತರಿಸುತ್ತದೆ. ಜಿಲ್ಲಾ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ (ಎಎಸ್‌ಪಿ) ಎನ್.ವಿ. ಭರಮನಿ ಅವರ ಪ್ರಕರಣ ಈ ಮಾತಿಗೊಂದು ಜ್ವಲಂತ ಉದಾಹರಣೆ. ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಆದ ಅವಮಾನದಿಂದ ಮನನೊಂದಿರುವ ಭರಮನಿ ಅವರು ಸ್ವಯಂನಿವೃತ್ತಿ ಹೊಂದಲು ಅನುಮತಿ ನೀಡುವಂತೆ ಸರ್ಕಾರವನ್ನು ಕೋರಿದ್ದಾರೆ. ತಾವು ಮಾತನಾಡುವ ಹೊತ್ತಿನಲ್ಲಿ ಬಿಜೆಪಿಯ ಕಾರ್ಯಕರ್ತೆಯರು ಕಪ್ಪು ಬಾವುಟ ಪ್ರದರ್ಶಿಸಿದ್ದನ್ನು ಕಂಡು ಅಸಮಾಧಾನಗೊಂಡಿದ್ದ ಮುಖ್ಯಮಂತ್ರಿ ಅವರು, ಎಎಸ್‌ಪಿ ಅವರತ್ತ ಕೈ ಎತ್ತಿ ತೋರಿಸಿದ್ದರು. ಈ ಒರಟು ನಡವಳಿಕೆಯಿಂದ ಎಎಸ್‌ಪಿ ಅವರು ಮುಜುಗರ ಅನುಭವಿಸಿದ್ದರು. ಸಿದ್ದರಾಮಯ್ಯ ಅವರು ಹೀಗೆ ವರ್ತಿಸಿರುವುದು ಅದೇ ಮೊದಲ ಬಾರಿಯೇನಲ್ಲ. ಈ ಹಿಂದೆ ಸಭೆಯೊಂದರಲ್ಲಿ ಸಾರ್ವಜನಿಕರ ಎದುರೇ ಜಿಲ್ಲಾಧಿಕಾರಿ ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು. ಈ ರೀತಿಯ ಸಿಡುಕಿನ ನಡವಳಿಕೆಗಳು ರಾಜಕೀಯದ ಭೂಮಿಕೆಯಲ್ಲಿ ತಾತ್ಕಾಲಿಕವಾಗಿ ರಂಗು ತುಂಬಬಹುದು. ಆದರೆ, ಕೊನೆಗೆ ದೊಡ್ಡ ಹಾನಿಯನ್ನೇ ಉಂಟು ಮಾಡುತ್ತವೆ. ಅವಮಾನದ ಘಟನೆಗಳಿಂದ ಅಧಿಕಾರಿಗಳ ಆತ್ಮಸ್ಥೈರ್ಯ ಕುಂದುತ್ತದೆ, ತಮ್ಮ ಕೆಳಹಂತದ ಸಿಬ್ಬಂದಿಯ ಮುಂದೆ ಅವರು ದುರ್ಬಲರಂತೆ ಗೋಚರಿಸ ತೊಡಗುತ್ತಾರೆ. ಅಲ್ಲದೆ, ಆದೇಶ ಪರಿಪಾಲನಾ ಶ್ರೇಣಿಯ ಸರಪಳಿಯನ್ನೂ ಇಂತಹ ಘಟನೆಗಳು ತುಂಡರಿಸಿ ಹಾಕುತ್ತವೆ. ಭರಮನಿ ಅವರು ಸರ್ಕಾರಕ್ಕೆ ಬರೆದ ಪತ್ರದಲ್ಲಿ, ಮಾಡದೇ ಇರುವ ತಪ್ಪಿಗೆ ಸಾರ್ವಜನಿಕವಾಗಿ ನಿಂದನೆಗೆ ಒಳಗಾಗಿ ಅವಮಾನಗೊಂಡ ನನಗೆ ಅನ್ಯ ಮಾರ್ಗವಿಲ್ಲದೇ ಸ್ವಯಂನಿವೃತ್ತಿಗಾಗಿ ಮನವಿ ಸಲ್ಲಿಸುತ್ತಿದ್ದೇನೆ ಎಂಬ ಉಲ್ಲೇಖ ಇದೆ. ವೇದಿಕೆಯ ಭದ್ರತೆಯಷ್ಟೇ ನನ್ನ ಹೊಣೆಯಾಗಿತ್ತು. ಅದನ್ನು ಸಮರ್ಥವಾಗಿಯೇ ನಿಭಾಯಿಸಿದ್ದೇನೆ. ಕಾರಣವಿಲ್ಲದೆ ನನ್ನನ್ನು ಅವಮಾನಿಸಿದ ಘಟನೆ ಕಂಡು ನನ್ನ ಪತ್ನಿ ಹಾಗೂ ಮಕ್ಕಳು ಕಣ್ಣೀರು ಸುರಿಸಿದರು ಎಂದೂ ಅವರು ಬರೆದಿದ್ದಾರೆ. ಒಬ್ಬ ಹಿರಿಯ ಪೊಲೀಸ್ ಅಧಿಕಾರಿಯೂ ಇದುವರೆಗೆ ಅವರನ್ನು ಭೇಟಿ ಮಾಡಿ ಸಂತೈಸುವ ಕೆಲಸ ಮಾಡಿಲ್ಲ. ಪೊಲೀಸ್ ವ್ಯವಸ್ಥೆಯಲ್ಲಿ ನಾಯಕತ್ವದ ಕೊರತೆ ಇರುವುದರತ್ತ ಇದು ಬೊಟ್ಟು ಮಾಡುತ್ತದೆ. ಸ್ವಯಂನಿವೃತ್ತಿಗೆ ಸಲ್ಲಿಸಿದ ಮನವಿ ಪತ್ರ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿ, ಸಾರ್ವಜನಿಕರಿಂದ ಆಕ್ರೋಶ ವ್ಯಕ್ತವಾದ ಬಳಿಕ ಮುಖ್ಯಮಂತ್ರಿ ಹಾಗೂ ಗೃಹ ಸಚಿವ ಜಿ. ಪರಮೇಶ್ವರ ಇಬ್ಬರೂ ಭರಮನಿ ಅವರೊಂದಿಗೆ ಮಾತನಾಡಿ, ಸಮಾಧಾನಪಡಿಸುವ ಮತ್ತು ಸ್ವಯಂನಿವೃತ್ತಿ ನಿರ್ಧಾರದಿಂದ ಹಿಂದೆ ಸರಿಯುವಂತೆ ಮನವೊಲಿಸುವ ಪ್ರಯತ್ನ ಮಾಡಿದ್ದಾರೆ. ದುರದೃಷ್ಟವಶಾತ್, ಇಂತಹ ನಡವಳಿಕೆ ಯಾವುದೇ ಒಂದು ಪಕ್ಷದ ನಾಯಕರಿಗೆ ಸೀಮಿತವಾಗಿಲ್ಲ. ವಿರೋಧ ಪಕ್ಷದ ನಾಯಕ ಆರ್. ಅಶೋಕ ಅವರು ಕೂಡ ಇತ್ತೀಚೆಗೆ ಪೊಲೀಸ್ ಅಧಿಕಾರಿಯೊಬ್ಬರನ್ನು ನಿಂದಿಸುತ್ತಿರುವ ವಿಡಿಯೊ ಹರಿದಾಡಿತ್ತು. ದೊಡ್ಡ ಹುದ್ದೆಯಲ್ಲಿದ್ದವರೇ ಇಂತಹ ಕೆಟ್ಟ ನಡವಳಿಕೆ ಪ್ರದರ್ಶಿಸಿದರೆ ಮಿಕ್ಕವರಿಂದ ಏನನ್ನು ನಿರೀಕ್ಷಿಸಬಹುದು ಪ್ರತಿಯೊಬ್ಬ ಅಧಿಕಾರಿಯಿಂದ ಉತ್ತರದಾಯಿತ್ವ ಬಯಸುವ ಅಧಿಕಾರ ಸರ್ಕಾರಕ್ಕೆ ಇದ್ದೇ ಇದೆ. ಹಾಗೆ ಉತ್ತರದಾಯಿತ್ವವನ್ನು ಬಯಸುವಾಗ ಸಮಯ, ಸಂದರ್ಭ, ಸ್ಥಳ ಮತ್ತು ಕೇಳುವ ಧಾಟಿ ಮುಖ್ಯವಾಗುತ್ತದೆ. ಸಾರ್ವಜನಿಕವಾಗಿ ಅವಮಾನಿಸುವುದು ಒಳ್ಳೆಯ ನಾಯಕತ್ವದ ಲಕ್ಷಣವಲ್ಲ. ಮುತ್ಸದ್ದಿತನಕ್ಕೂ ಇಂತಹ ವರ್ತನೆ ಶೋಭೆ ತರುವುದಿಲ್ಲ. ಅಧಿಕಾರಿ ವರ್ಗ ಮತ್ತು ಪೊಲೀಸ್ ಪಡೆಯೇ ಸರ್ಕಾರದ ಬೆನ್ನೆಲುಬು ಎಂಬುದನ್ನು ಆಡಳಿತದ ಹೊಣೆ ಹೊತ್ತವರು ಸದಾ ನೆನಪಿಡಬೇಕು.




**ಆದರೆ, ರಾಜೀನಾಮೆ ಪತ್ರವನ್ನು ಭರಮನಿ ಅವರು ಇನ್ನೂ ಹಿಂಪಡೆದಿಲ್ಲ. 'ಶಿಸ್ತಿನ ಇಲಾಖೆಯಲ್ಲಿ ಇದ್ದೇನೆ. ನನ್ನ ಭಾವನೆಗಳನ್ನು ಮೇಲಧಿಕಾರಿಗಳಿಗೆ ತಿಳಿಸಿರುವೆ. ಮುಖ್ಯಮಂತ್ರಿ, ಗೃಹ ಸಚಿವರು ಮತ್ತು ಮೇಲಧಿಕಾರಿಗಳು ನನ್ನೊಂದಿಗೆ ಮಾತನಾಡಿದ್ದಾರೆ. ದೈನಂದಿನ ಕೆಲಸಕ್ಕೆ ಹಾಜರಾಗಿರುವೆ. ಮುಂದಿನದ್ದು ಸರ್ಕಾರ ನಿರ್ಧರಿಸಲಿದೆ' ಎಂದವರು ಹೇಳಿದ್ದಾರೆ.**

ಸರ್ಕಾರ ರೂಪಿಸುವಂತಹ ನೀತಿಗಳನ್ನು ಅನುಷ್ಠಾನಕ್ಕೆ ತರುವ ಹಾಗೂ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡುವ ಕಾರ್ಯದ ಹೊಣೆ ಹೊಂದಿರುವವರನ್ನು ರಾಜಕಾರಣಿಗಳು ಕೀಳಾಗಿ ಕಾಣುವುದನ್ನು ಮುಂದುವರಿಸಿದರೆ, ಇಡೀ ವ್ಯವಸ್ಥೆಯೇ ಸಂಕಷ್ಟಕ್ಕೆ ಸಿಲುಕುತ್ತದೆ. ಸಂಯಮದ ಕೊರತೆಯು ಸಾರ್ವಜನಿಕ ಸೇವೆಯ ಸಮಗ್ರತೆಯ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ನಾಗರಿಕ ಸೇವೆಯಲ್ಲಿ ಇರುವವರನ್ನು ಘನತೆಯಿಂದ ನಡೆಸಿಕೊಳ್ಳುವುದು ಅತ್ಯಗತ್ಯ. ಅದಕ್ಕಾಗಿ ಅನುಭವಿ ರಾಜಕಾರಣಿಗಳು ವಿವೇಕ ಮತ್ತು ಸ್ಥಾನಮಾನದ ಜವಾಬ್ದಾರಿ ಅರಿತು ವರ್ತಿಸುವ ನಡವಳಿಕೆಯನ್ನು ತೋರಬೇಕು. ಅಧಿಕಾರವನ್ನು ವೃತ್ತಿಪರತೆ, ನ್ಯಾಯತತ್ಪರತೆ ಗೌರವದ ಮೂಲಕ ಅನುಭವಿಸಬೇಕೇ ಹೊರತು ಅವಮಾನಿಸುವುದು ಇಲ್ಲವೆ ಬೆದರಿಸುವ ಮೂಲಕ ಅಲ್ಲ ಎಂಬುದನ್ನು ನಾಯಕರು ಅರ್ಥಮಾಡಿಕೊಳ್ಳಬೇಕು.

# ಸಂಸಾರ ಸಾಗರ



ವಿಶ್ವಾಸ್.ಡಿ.ಗೌಡ
• ಉದಯವಾಹಿನಿ, ವಿಶೇಷ

ಹೆತ್ತ ತಂದೆ ತಾಯಿ ಇರುವವರೆಗೆ ಮಾತ್ರ ಊರು ಒಡಹುಟ್ಟಿದವರು ಬಂಧು ಮಿತ್ರರು ಎಂಬ ಕೊಂಡಿ ಬೆಸೆದುಕೊಂಡಿರುತ್ತದೆ ಅವರೇ ಕಾಲವಾದ ನಂತರ ಎಲ್ಲರೂ ಒಂದಲ್ಲ ಒಂದು ಕಾರಣದಿಂದ ದೂರಾಗುತ್ತಲೇ ಹೋಗುತ್ತಾರೆ. ಇದು ಎಲ್ಲಾ ರೀತಿಯ ಕುಟುಂಬಗಳಿಗೂ ಅನ್ವಯಿಸುವುದಂತೂ ನಿಜ. ನಾವು ಎಷ್ಟೇ ಕಷ್ಟಪಟ್ಟು ಹಿಡಿದಿಟ್ಟುಕೊಂಡ ಬಾಂಧವ್ಯದ ಕೊಂಡಿಗಳು ಕಾಲಕ್ರಮೇಣ ಸಡಿಲವಾಗಿ ಎಲ್ಲೋ ಒಂದು ಕಡೆ ಜಾರುವ ಸಂದರ್ಭಗಳು ಬರಬಹುದು.

ಕೆಲವರು ತುಂಬಾ ಸೂಕ್ಷ್ಮ ಮನಸ್ಥಿತಿಯನ್ನು ಹೊಂದಿರುತ್ತಾರೆ, ಅಂತಹವರಿಗೆ ಇಂತಹ ಪರಿಸ್ಥಿತಿಯನ್ನು ತಕ್ಷಣವೇ ಸುಧಾರಿಸಿಕೊಳ್ಳಲು ಕಷ್ಟವಾಗಬಹುದು.

ಆದರೂ ಇದಂತೂ ಕಟುಸತ್ಯ, ಕಾಲಕ್ರಮೇಣ ಕುಟುಂಬ ಬೆಳೆದಂತೆ ಪ್ರತಿಯೊಬ್ಬರೂ ಅವರವರ ಸಂಸಾರಕ್ಕೆ ಪ್ರಾಮುಖ್ಯತೆ ಕೊಟ್ಟು ಹೆಂಡತಿ ಮಕ್ಕಳೆನ್ನುವ ಮಮಕಾರಕ್ಕೆ ಸಿಲುಕಿ ಅಸಹಾಯಕರಾಗಿ ಹಿಂದಿನಷ್ಟು ಕುಟುಂಬದೊಂದಿಗೆ ಬೆರೆಯಲು ಸಾಧ್ಯವಾಗುವುದಿಲ್ಲ.

ಅದರಲ್ಲೂ ಹಾಗೋ ಹೀಗೋ ತಂದೆತಾಯಿ ಬದುಕಿರುವವರೆಗೆ ಅವರ ಮನಸ್ಸಂತೋಷಕ್ಕಾಗಿ ಯಾದರೂ ಅಗಾಗ್ಗೆ ಉಳಿದ ಅಣ್ಣತಮ್ಮಂದಿರೊಂದಿಗೆ ಹಾಗೂ ಅಕ್ಕತಂಗಿಯರೊಂದಿಗೆ ಸಂಪರ್ಕ ಇಟ್ಟುಕೊಂಡಿರುತ್ತಾರೆ. ಒಮ್ಮೆ ಹಳೆಯ ಕೊಂಡಿ ಎನಿಸಿಕೊಂಡ ಹೆತ್ತವರು ತೀರಿಕೊಂಡ ಬಳಿಕ ಅನೇಕ ಕುಟುಂಬಗಳಲ್ಲಿ ಎಲ್ಲರೂ ಪರಕೀಯರಂತೆ ಆಗಿಬಿಡುವುದು ವಿಪರ್ಯಾಸ. ಇತ್ತೀಚಿನ ದಿನಗಳಲ್ಲಿ ಇಂತಹ ಹಲವಾರು ನಿದರ್ಶನಗಳು ನೋಡಲು ಸಿಗುತ್ತದೆ.


ಇಂತಹ ಒಂದು ಬೆಳವಣಿಗೆಗೆ ಮುಖ್ಯ ಕಾರಣ ನಮ್ಮ ಒಳಗಿರುವ ಸ್ವಾರ್ಥ, ಅಹಂ ಕಾರಣವಷ್ಟೇ ಅಲ್ಲದೆ ಬೇರೇನೂ ಅಲ್ಲ. ಒಂದೇ ಕುಟುಂಬದವರಾದರೂ ಕೂಡ ಪ್ರತ್ಯೇಕ ಸಂಸಾರಹೂಡಿದ ಮೇಲೆ ತಮ್ಮ ಪ್ರತಿಷ್ಠೆ ಮೆರೆಯಲು ಇತರರನ್ನು ತುಚ್ಛವಾಗಿ ಕಾಣುವುದು, ಎಲ್ಲಾ ವಿಷಯದಲ್ಲೂ ತಮಗೇ ಪ್ರಾಮುಖ್ಯತೆ ಸಿಗಬೇಕೆಂದು ಬಯಸುವುದು ಸರ್ವೇಸಾಮಾನ್ಯ ವಾಗಿಬಿಟ್ಟಿದೆ. ಇಂತಹ ಬೆಳವಣಿಗೆ ಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ನಾವು ನಮ್ಮವರೊಂದಿಗೇ ಅಪರಿಚಿತರಾಗುತ್ತಿರುವ ಸಂಶಯ ಮನಸ್ಸಿನಲ್ಲಿ ಮೂಡುವುದು ನಿಜವಲ್ಲವೇ ಸ್ನೇಹಿತರೆ. ಹೆತ್ತವರು ಬದುಕಿರುವವರೆಗೂ ಕುಟುಂಬದಲ್ಲಿ ಒಂದು ಭದ್ರತೆ ಇರುತ್ತದೆ, ಯಾವುದೇ ವಿಚಾರವಾದರೂ ಸಮಯೋಚಿತವಾಗಿ ಯೋಚಿಸಿ ಬುದ್ಧಿಹೇಳುವ ಜವಾಬ್ದಾರಿ ಹೊಂದಿರುತ್ತಾರೆ. ಪ್ರತಿಯೊಬ್ಬ ಮಕ್ಕಳನ್ನು ಆಗಾಗ ನೋಡಬೇಕೆಂಬ ಹಂಬಲದಿಂದ ಎಷ್ಟೇ ದೂರವಿದ್ದರೂ ತಮ್ಮಲ್ಲಿಗೆ ಕರೆಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಹಬ್ಬಹರಿದಿನಗಳೆಂದರೆ ಎಲ್ಲರೂ ಜೊತೆಯಾಗಿಯೇ ಆಚರಿಸಿಕೊಳ್ಳಬೇಕೆನ್ನುವ ಅಪೇಕ್ಷೆಯಂತೆ ಸಾಧ್ಯವಾದಷ್ಟು ಕುಟುಂಬದ ಐಕ್ಯತೆಯನ್ನು ಹಿಡಿದಿಟ್ಟುಕೊಂಡಿರುತ್ತಾರೆ. ಇದನ್ನು ಎಲ್ಲರೂ ತಮ್ಮ ಕಾಲಾನಂತರವೂ ನಡೆಸಿಕೊಂಡು ಹೋಗಬೇಕೆನ್ನುವ ಅಪೇಕ್ಷೆಯನ್ನು ಹೊಂದಿರುತ್ತಾರೆ. ಆದರೆ ಇಂದಿನ ಜೀವನ ಶೈಲಿ ಈ ತಲೆಮಾರಿನ ತೋರಿಕೆಯ ಪ್ರೀತಿ ವಿಶ್ವಾಸ ಇಂತಹ ಒಂದು ಬಾಂಧವ್ಯದ ಕೊಂಡಿಬೆಸೆಯುವಲ್ಲಿ ವಿಫಲವಾಗಿದೆ ಎನ್ನಬಹುದು. ಬಹಳಷ್ಟು ಕುಟುಂಬಗಳು ಹಂಚಿಹರಡಿ ಪ್ರತ್ಯೇಕ ಸಂಸಾರಗಳಾಗಿ ಅಷ್ಟಕ್ಕೇ ಸೀಮಿತಗೊಂಡಿವೆ ಅವರ ಆಚರಣೆ ಹಾಗೂ ಬಾಂಧವ್ಯ... ತವರಿನ ಸಂಪರ್ಕಕಳೆದುಕೊಂಡು ಮನಸ್ಸಿನಲ್ಲೇ ದುಃಖಿಸುತ್ತಿರುವ ಎಷ್ಟೋ ಜನರನ್ನು ನಾವು ನೋಡುತ್ತಿದ್ದೇವೆ...

ಇವತ್ತಿಗೂ ಜನಮಾನಸದಲ್ಲಿ ಉಳಿದಿರುವುದು ಮಾತ್ರ ತಂದೆತಾಯಿಗಳು ಬದುಕಿರುವವರೆಗೆ ಅನುಭವಿಸಿದ ಸಂಭ್ರಮದ ದಿನಗಳು ಹಾಗೂ ಆದರಾಥಿತ್ಯದ ಪ್ರೀತಿ ವಿಶ್ವಾಸದಿಂದ ಒಡಹುಟ್ಟಿದವರೊಂದಿಗೆ ನಕ್ಕುನಲಿದ ಕ್ಷಣಗಳು. ಎಲ್ಲಾ ಸದಸ್ಯರನ್ನೂ ಸಮಾನವಾಗಿ ಕಾಣುವ ಮನಸ್ಸು ಇರಬೇಕು..

ಪ್ರೀತಿ ವಿಶ್ವಾಸದಿಂದ ಎಲ್ಲರೊಂದಿಗೂ ಬೆರೆತು ಬಾಳಿನ ಸಂತೋಷವನ್ನು ಸವಿಯುವ ಮನಸ್ಸು ಮಾಡಿದರೆ ಜೀವನ ಸುಂದರವಾಗಿರುವುದು. ಕುಟುಂಬ ಸದಸ್ಯರಿಗೆ ಪ್ರೀತಿಯಿಂದ ಕಾಣಿ ಗೌರವದಿಂದ ನೋಡಿ ಎಲ್ಲವೂ ಹಣದಿಂದ ತೂಗಬೇಡಿ, ಹಳೆಯ ಮನಸ್ತಾಪದ ಬಗ್ಗೆ ಮೆಲಕು ಹಾಕಬೇಡಿ ನಾನು ಸರಿ ಅವರು ಕೆಟ್ಟವರು ಅನ್ನುವುದನ್ನು ಬಿಡಿ,ಉಳಿದ ಜೀವನವನ್ನು ಸಂತೋಷವಾಗಿರಿ, ಎಲ್ಲರನ್ನೂ ಖುಷಿ ಪಡಿಸುವ ಹಾಗೆ ಮಾತನಾಡಿ.

ನಮ್ಮ ಸಂಸಾರ, ಆನಂದ ಸಾಗರ

ಪ್ರೀತಿಯೆಂಬ ದೈವವೇ ನಮಗಾಧಾರ ಆ ದೈವ ತಂದ ವರದಿಂದ ಬಾಳೇ ಬಂಗಾರ.



# ಶ್ರೀ ರಾಘವೇಂದ್ರ ಸ್ವಾಮಿಗಳ ಸನ್ನಿಧಿಗೆ ಬಂಗಾರದ ರಥ




• ಉದಯವಾಹಿನಿ, ಬೆಂಗಳೂರು

ಜಯನಗರದ ಐದನೇ ಬಡಾವಣೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ರಾಯರ ಸನ್ನಿಧಿಗೆ ಭಕ್ತರ ಸಹಕಾರದಿಂದ ಬಂಗಾರದ ರಥವನ್ನು ಸಮರ್ಪಣೆ ಮಾಡಲು ಶ್ರೀ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀ ಪಾದಂಗಳವರು ಸಂಕಲ್ಪವನ್ನು ಮಾಡಿ ಶ್ರೀ ಮಠದ ಹಿರಿಯ ವ್ಯವಸ್ಥಾಪಕರಾದ ಆರ್ ಕೆ ವಾದೀಂದ್ರ ಆಚಾರ್ಯರಿಗೆ ಸಂಪೂರ್ಣ ಜವಾಬ್ದಾರಿಯನ್ನು ವಹಿಸಿ ಫಲ ಮಂತ್ರಾಕ್ಷತೆ ಕೊಟ್ಟು ಆಶೀರ್ವದಿಸಿದರು.

ಈ ಸುವರ್ಣ ರಥದ ನಿರ್ಮಾಣದ ಅಂದಾಜು 3 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಾಣವಾಗಲಿರುವ ಈ ಸುವರ್ಣರಥದ ಬೃಹತ್ ಕಾರ್ಯವು ನಿರ್ವಿಘ್ನವಾಗಿ ನೆರವೇರಲಿ ಎಂದು ಪರಮಪೂಜ್ಯ ಶ್ರೀ 1008 ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದರು ಸಂಕಲ್ಪಿಸಿದರು. ಈ ಶುಭ ಸಂದರ್ಭದಲ್ಲಿ ಶ್ರೀ ಪಾದರು ಆಶೀರ್ವಚನವನ್ನು ನೀಡುತ್ತಾ ರಾಯರಿಗೆ ಬಂಗಾರದ ಕವಚ, ಸುವರ್ಣ ರಥ ಮುಂತಾದವುಗಳು ಯಾವುದೂ ಬೇಕಾಗಿಲ್ಲ. ಗುರುಗಳು ತ್ಯಾಗ ವಿರಕ್ತರು ಆದರೂ ಭಕ್ತರು ತಮ್ಮ ಗುರುಗಳನ್ನು ಭಕ್ತಿಯಿಂದ ಅಲಂಕರಿಸಿ ರಥದಲ್ಲಿ ಕೂರಿಸಿ ಅನುಗ್ರಹ ಪಡೆದು ಕಣ್ಣು ತುಂಬಾ ಸಂತೋಷ ಪಡುವ ಇಂತಹ ಮಹತ್ಕಾರ್ಯಕ್ಕೆ ತನು ಮನ ಧನದಿಂದ ಸೇವೆ ಸಲ್ಲಿಸುವ ರಾಯರ ಭಕ್ತರ ಅಪೇಕ್ಷೆಯ ಮೇರೆಗೆ ಬಂಗಾರದ ರಥವನ್ನು ರಾಯರಿಗೆ ಸಮರ್ಪಿಸಲು ಸಂಕಲ್ಪವನ್ನು ಮಾಡಿದ್ದೇವೆ. ಇಂತಹ ಮಹತ್ಕಾರ್ಯಕ್ಕೆ ಸೇವೆ ಸಲ್ಲಿಸುವ ಭಕ್ತರಿಗೆ ಶ್ರೀ ಗುರು ರಾಘವೇಂದ್ರ ಸ್ವಾಮಿಗಳ ಅನುಗ್ರಹವು ಸದಾ ಕಾಲ ಇರಲಿ ಎಂದು ಆಶೀರ್ವದಿಸಿದರು ಎಂದು ಶ್ರೀ ನಂದಕಿಶೋರ್ ಆಚಾರ್ಯರು ತಿಳಿಸಿದರು. ಈ ಸಂದರ್ಭದಲ್ಲಿ ವಿಶೇಷ ದಾನಿಗಳು ಭಾಗವಹಿಸಿ ಶ್ರೀಗಳಿಂದ ಫಲ ಮಂತ್ರಾಕ್ಷತೆ ಪಡೆದು ಗುರುಗಳ ಅನುಗ್ರಹಕ್ಕೆ ಪಾತ್ರರಾದರು.

# ಆಲೂಗಡ್ಡೆ ರಸ ಹಚ್ಚಿದ್ರೆ ಸಾಕು ಮುಖಕ್ಕೆ ಕಲೆ ಮೊಡವೆಗಳೆಲ್ಲಾ ನಿವಾರಣೆಯಾಗುತ್ತೆ

ಆಲೂಗಡ್ಡೆ ರಸವನ್ನು ಮುಖಕ್ಕೆ ಹಚ್ಚೋದರಿಂದ ದೋಷರಹಿತ ಚರ್ಮವನ್ನು ಪಡೆಯಲು ಸಹಾಯವಾಗುತ್ತದೆ. ಇದು ಮುಖದಲ್ಲಿರುವ ಮೊಡವೆ, ಕಲೆಗಳನ್ನು ನಿವಾರಿಸುವಲ್ಲಿ ಸಹಕಾರಿಯಾಗಿದೆ.

ಆಲೂಗಡ್ಡೆಯನ್ನು ಸಾಂಬಾರುಗಳಿಗೆ ಪಲ್ಯಕ್ಕೆ ಬಳಸುತ್ತೇವೆ, ಇದು ತಿನ್ನಲು ರುಚಿಕರವಾಗಿರುವಂತಹ ಒಂದು ತರಕಾರಿಯಾಗಿದೆ. ಇದನ್ನು ಅಡುಗೆಗೆ ಹೊರತುಪಡಿಸಿ ನಿಮ್ಮ ಮುಖದ ಸೌಂದರ್ಯವನ್ನು ಹೆಚ್ಚಿಸಲು ಬಳಸಬಹುದು. ಆಲೂಗಡ್ಡೆಯ ರಸವನ್ನು ಮುಖಕ್ಕೆ ಹಚ್ಚೋದ್ರಿಂದ ಸಾಕಷ್ಟು ಪ್ರಯೋಜನಗಳಿವೆ. ಇದರಲ್ಲಿರುವ ಜೀವಸತ್ವಗಳು ಖನಿಜಗಳು ಉತ್ಕರ್ಷಣ ನಿರೋಧಕಗಳಿಂದ ತುಂಬಿರುವ ಇದು ಚರ್ಮಕ್ಕೆ ಬಹು ಪ್ರಯೋಜನಗಳನ್ನು ಹೊಂದಿದೆ. ದೋಷರಹಿತ ಚರ್ಮವನ್ನು ಪಡೆಯಲು ನಿಮಗೆ ಹೇಗೆ ಸಹಾಯ ಮಾಡುತ್ತದೆ ಎಂಬುದನ್ನು ನಾವಿಲ್ಲಿ ತಿಳಿಯೋಣ.


**ಚರ್ಮದ ಹೊಳಪಿಗೆ ವಿಟಮಿನ್ ಸಿ ಸಮೃದ್ಧವಾಗಿದೆ:** ಆಲೂಗಡ್ಡೆ ವಿಟಮಿನ್ ಸಿ ಯ ಸಮೃದ್ಧ ಮೂಲವಾಗಿದೆ. ಈ ವಿಟಮಿನ್ ಮೆಲನಿನ್ ಉತ್ಪಾದನೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ, ಇದು ಕಪ್ಪು ಕಲೆಗಳು, ಅಸಮ ಚರ್ಮದ ಟೋನ್‌ಗೆ ಕಾರಣವಾಗಿದೆ. ಆಲೂಗಡ್ಡೆ ರಸವನ್ನು ನಿಯಮಿತವಾಗಿ ಮುಖಕ್ಕೆ ಹಚ್ಚುವುದರಿಂದ ಕಾಲಾನಂತರದಲ್ಲಿ ಮುಖದಲ್ಲಿನ ಕಪ್ಪು ಕಲೆಗಳು ಕಡಿಮೆಯಾಗಲಾರಂಭಿಸುತ್ತದೆ ಮತ್ತು ನಿಮ್ಮ ಚರ್ಮಕ್ಕೆ ಹೆಚ್ಚು ಕಾಂತಿಯನ್ನು ನೀಡುತ್ತದೆ.

**ಚರ್ಮವನ್ನು ಹೈಡ್ರೇಟ್ ಮಾಡುತ್ತದೆ:** ಆಲೂಗಡ್ಡೆ ರಸವು ಹೈಡ್ರೇಟಿಂಗ್ ಗುಣವನ್ನು ಹೊಂದಿದೆ. ನೀವು ಸೂಕ್ಷ್ಮ ಅಥವಾ ಕಿರಿಕಿರಿಯುಂಟು ಮಾಡುವ ಚರ್ಮವನ್ನು ಹೊಂದಿದ್ದರೆ, ಆಲೂಗಡ್ಡೆ ರಸವನ್ನು ಹಚ್ಚುವುದರಿಂದ ಉರಿಯೂತವನ್ನು ಶಾಂತಗೊಳಿಸಲು ಮತ್ತು ಜಲಸಂಚಯನವನ್ನು ಒದಗಿಸಲು ಸಹಾಯ ಮಾಡುತ್ತದೆ. ಇದು ಶುಷ್ಕ ಅಥವಾ ಉರಿಯೂತದ ಚರ್ಮವನ್ನು ಹೊಂದಿರುವ ಜನರಿಗೆ ಇದು ಉತ್ತಮ ಆಯ್ಕೆಯಾಗಿದೆ.

**ಉತ್ಕರ್ಷಣ ನಿರೋಧಕಗಳು ಫ್ರೀ ರಾಡಿಕಲ್‌ಗಳ ವಿರುದ್ಧ ಹೋರಾಡುತ್ತದೆ:** ಫ್ಲವನಾಯ್ಡ್‌ಗಳಂತಹ ಆಲೂಗಡ್ಡೆ ರಸದಲ್ಲಿ ಕಂಡುಬರುವ ಉತ್ಕರ್ಷಣ ನಿರೋಧಕಗಳು ಆಕ್ಸಿಡೇಟಿವ್ ಒತ್ತಡವನ್ನು ಎದುರಿಸಲು ಸಹಾಯ ಮಾಡುತ್ತದೆ. ಮುಖದಲ್ಲಿ ಅಕಾಲಿಕ ವಯಸ್ಸಾದಂತೆ ಕಾಣುವ ಸಮಸ್ಯೆಗಳನ್ನು ನಿಧಾನಗೊಳಿಸುತ್ತದೆ. ಆಲೂಗಡ್ಡೆ ರಸವು ಫ್ರೀ ರಾಡಿಕಲ್‌ಗಳನ್ನು ತಟಸ್ಥಗೊಳಿಸುವ ಮೂಲಕ ಕಪ್ಪು ಕಲೆಗಳ ರಚನೆಯನ್ನು ತಡೆಯಲು ಸಹಾಯ ಮಾಡುತ್ತದೆ ಮತ್ತು ಅಸ್ತಿತ್ವದಲ್ಲಿರುವ ಕಲೆಗಳನ್ನು ಕ್ರಮೇಣ ಕಡಿಮೆ ಮಾಡುತ್ತದೆ.

**ಚರ್ಮದ ಪುನರುತ್ಪಾದನೆಯನ್ನು ಉತ್ತೇಜಿಸುತ್ತದೆ:** ಆಲೂಗಡ್ಡೆ ರಸವು ಚರ್ಮದ ಗುಣಪಡಿಸುವಿಕೆ ಮತ್ತು ಪುನರುತ್ಪಾದನೆಯನ್ನು ಉತ್ತೇಜಿಸುವ ವಿವಿಧ ಕಿಣ್ವಗಳನ್ನು ಹೊಂದಿರುತ್ತದೆ. ಇದು ಹೊಸ, ಆರೋಗ್ಯಕರ ಚರ್ಮದ ಕೋಶಗಳ ಬೆಳವಣಿಗೆಯನ್ನು ಉತ್ತೇಜಿಸುತ್ತದೆ. ಇದು ಮೊಡವೆಗಳ ಗುರುತುಗಳನ್ನು ಹೋಗಲಾಡಿಸುತ್ತದೆ.

**ಚರ್ಮದ ಸಮಸ್ಯೆಯನ್ನು ನಿವಾರಿಸುತ್ತದೆ:** ಆಲೂಗಡ್ಡೆ ರಸವು ಕಪ್ಪು ಕಲೆಗಳನ್ನು ಹಗುರಗೊಳಿಸಲು ಮತ್ತು ಚರ್ಮದ ಟೋನ್ ಅನ್ನು ಸುಧಾರಿಸಲು ಅತ್ಯಂತ ಪರಿಣಾಮಕಾರಿ ಮತ್ತು ನೈಸರ್ಗಿಕ ಮಾರ್ಗವಾಗಿದೆ. ನೀವು ಮೊಡವೆಗಳ ಕಲೆಗಳನ್ನು ಹೊಂದಿದ್ದರೆ ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುವುದರಿಂದ ಉಂಟಾಗುವ ಪಿಗ್ಮೆಂಟೇಶನ್ ಅಥವಾ ಇತರ ಸಮಸ್ಯೆಯಿಂದ ಬಳಲುತ್ತಿದ್ದರೆ, ಆಲೂಗಡ್ಡೆ ರಸವು ನಿಮ್ಮ ಚರ್ಮವನ್ನು ತಾಜಾ ಮತ್ತು ಹೆಚ್ಚು ಕಾಂತಿಯುತವಾಗಿ ಕಾಣಲು ಸಹಾಯ ಮಾಡುತ್ತದೆ.



# ನಾಟ್ಯ ಮಯೂರಿ ಸಂಸ್ಥೆಯ ಶಿಷ್ಯೆಯರಿಂದ ಮನೋಹರ ನೃತ್ಯ

• ಉದಯವಾಹಿನಿ, ಬೆಂಗಳೂರು

**ಭರತನಾಟ್ಯದ ಪ್ರಥಮ ಪ್ರವೇಶ**

ಜೂನ್ 27 ಬೆಂಗಳೂರು ಹಲಸೂರಿನ ನಾಟ್ಯ ಮಯೂರಿ ಶಾಸ್ತ್ರೀಯ ನೃತ್ಯ ಸಂಸ್ಥೆ, ಅದರ ನಿರ್ದೇಶಕಿ, ಗುರು ವಿದುಷಿ ಶ್ರೀ ಲಕ್ಷ್ಮಿ ಆರ್ ಅವರ ಮಾರ್ಗದರ್ಶನದಲ್ಲಿ ಪ್ರಥಮ ಪ್ರವೇಶ ಭರತನಾಟ್ಯ ಪ್ರದರ್ಶನವನ್ನು ಮಲ್ಲೇಶ್ವರಂನ ಸೇವಾ ಸದನ ಸಭಾಂಗಣದಲ್ಲಿ ವಿಜೃಂಭಣೆಯಿಂದ ಆಯೋಜಿಸಿತು.

ಈ ನೃತ್ಯೋತ್ಸವದಲ್ಲಿ ಕುಮಾರಿ ಸಾರಾ ರೆಟ್ರಿಕಾ ಎಸ್, ಕುಮಾರಿ ಬಿಂದುಶ್ರೀ ಎಸ್ ಮತ್ತು ಕುಮಾರಿ ಅಕ್ಷರ ಆರ್ ಈ ಮೂವರು ವಿದುಷಿ ಶ್ರೀ ಲಕ್ಷ್ಮಿಯವರ ಶಿಷ್ಯೆಯರು ತಮ್ಮ ಮೊದಲ ವೇದಿಕೆ ಪ್ರದರ್ಶನವನ್ನು ಅತ್ಯಂತ ಶಿಸ್ತಿನಿಂದ ಹಾಗೂ ಭಾವಪೂರ್ಣವಾಗಿ ಸಲ್ಲಿಸಿದರು. ನಾಟ್ಯ ಸಂಪನ್ನತೆಯನ್ನೂ, ಸಂಯಮಿತ ಅಭ್ಯಾಸದ ಫಲವನ್ನೂ ಅವರು ಎಲ್ಲಾ ಪ್ರಸ್ತುತಿಗಳಲ್ಲಿಯೂ ತೋರಿಸಿದರು. ನಟ್ಟುವಾಂಗಂನಲ್ಲಿ ವಿದುಷಿ ಶ್ರೀ ಲಕ್ಷ್ಮಿಯವರ ಶಕ್ತಿಶಾಲಿ ನೇತೃತ್ವ ಕೂಡ ಗಮನ ಸೆಳೆಯಿತು. ಕಾರ್ಯಕ್ರಮವು ನೃತ್ಯ ಜಗತ್ತಿನ ದಿಗ್ಗಜರಾಗಿದ್ದ, ದಿವಂಗತ ಶ್ರೀಮತಿ ಪದ್ಮಿನಿ ರಾಮಚಂದ್ರ ರಚಿಸಿದ ವಿಶಿಷ್ಟ ಪುಷ್ಪಾಂಜಲಿಯಿಂದ ಆರಂಭವಾಯಿತು. ನಂತರದ ಗಣೇಶ ವಂದನೆ ಕಲಾತ್ಮಕ ಶ್ರದ್ಧಾಭಾವದಿಂದ ಕೂಡಿತ್ತು.

ಶಬ್ದಂ ಶಣ್ಮುಕ ದೇವರಿಗೆ ನಮನ ಸಲ್ಲಿಸುವ ಈ ರಚನೆಯಲ್ಲಿ ಮೂವರ ಸಮೂಹ ನೃತ್ಯ, ಕಾವಡಿಗಳ ಚಿತ್ತಾಕರ್ಷಕ ನಿರೂಪಣೆ, ಶಕ್ತಿಯುತ ಮುದ್ರೆಗಳು ಹಾಗೂ ಭಾವಪೂರ್ಣ ಅಭಿನಯಗಳು ಪ್ರೇಕ್ಷಕರ ಮನ ಗೆದ್ದವು. ತದನಂತರ, ಶಿಷ್ಯೆಯರು ತಲಾ ತಮಗೆ ನಿರ್ದಿಷ್ಟವಾದ **ಏಕಪಾತ್ರ ನೃತ್ಯಗಳನ್ನು ಪ್ರಸ್ತುತಪಡಿಸಿದರು:** ಸಾರಾ ರೆಟ್ರಿಕಾ ಎಸ್ ಅವರು ನಟರಾಜರ ಸ್ತುತಿಯನ್ನು ಒಳಗೊಂಡ ನಟೇಶ ಕವುತುವಂ ಅನ್ನು ಶಿಷ್ಟ ಶೈಲಿಯಲ್ಲಿ ಅಭಿನಯಿಸಿದರು. ಬಿಂದುಶ್ರೀ ಎಸ್ ಅವರು ಶ್ರೀ ಚಾಮುಂಡೇಶ್ವರಿ ಕುರಿತ ಕೃತಿ ಮೂಲಕ ಮಹಿಷಾಸುರನ ವಧೆ, ದೇವಿಯ ವೈಭವ ಮತ್ತು ಮೈಸೂರಿನ ವಡೆಯರರ ಕಲಾ ಪ್ರೋತ್ಸಾಹವನ್ನು ಪ್ರಭಾವಶಾಲಿಯಾಗಿ ನೃತ್ಯ ರೂಪದಲ್ಲಿ ತೋರಿಸಿದರು.




ಅಕ್ಷರ ಆರ್ ಅವರು ಶ್ರೀಕೃಷ್ಣನ ಕಾಳಿಂಗ ಮರ್ಧನ ಲೀಲೆಯನ್ನು ಗಾಢವಾಗಿ ನಿರೂಪಿಸಿದರು. ಅವರ ನೃತ್ಯ ವೈಭವ ಎಂಥದ್ದೋಂದರೆ, ಚಿದಂಬರದ ನಟರಾಜನೇ ಗೋಕುಲಕ್ಕೆ ಬಂದು ಈ ನೃತ್ಯವನ್ನು ನೋಡುವಂತೆ ಅನ್ನಿಸಿತು. ಅಂತಿಮವಾಗಿ, ಮೂವರು ಪಂಚಜಾತಿಗಳಲ್ಲಿನ ಸಾಂಕೇತಿಕ ಹಾಗೂ ಸಂಕೀರ್ಣ ನೃತ್ಯವಿಧಾನಗಳೊಂದಿಗೆ ಕಾರ್ಯಕ್ರಮವನ್ನು ಕಳೆಗಟ್ಟಿದರು.

ಈ ಪ್ರದರ್ಶನವು ನಾಟ್ಯ ಕಲೆಗಾಗಿ ಶ್ರದ್ಧೆ, ಶಿಸ್ತಿನ ಅಭ್ಯಾಸ, ಗುರುಪರಂಪರೆಯ ಮಹತ್ವವನ್ನು ಬಿಂಬಿಸಿದ ಅರ್ಥಪೂರ್ಣ ಸಂಜೆಯಾಗಿತ್ತು. ನಾಟ್ಯ ಮಯೂರಿಯ ಈ ಶಿಷ್ಯೆಯರ ಪ್ರಥಮ ಪ್ರವೇಶ ಕಲಾ ಪ್ರಪಂಚದಲ್ಲಿ ಹೊಸ ಬೆಳಕಿನ ಕಿರಣವಾಗಿ ಗುರುತಿಸಲ್ಪಟ್ಟಿತು.

# ತೂಕ ಇಳಿಸಿಕೊಳ್ಳಲು ಬಯಸಿದರೆ ವೈಟ್ ರೈಸ್ ಬಿಟ್ಟುಬಿಡಿ



ಬಿಳಿ ಅಕ್ಕಿಯಿಂದ ಮಾಡಿದ ಅನ್ನ ಊಟ ಮಾಡುವುದರಿಂದ ದೇಹದ ತೂಕ ಹೆಚ್ಚಾಗುತ್ತದೆ ಎನ್ನುತ್ತಾರೆ ತಜ್ಞರು. ಹೀಗಾಗಿ ಸಮತೋಲನ ತೂಕ ಕಾಯ್ದುಕೊಳ್ಳಲು ಬಯಸುವವರು ಬಿಳಿ ಅಕ್ಕಿಯಿಂದ ಮಾಡಿದ ಅನ್ನದ ಬದಲು, ಕೆಂಪಕ್ಕಿ, ಕಪ್ಪು ಅಕ್ಕಿಯ ಅನ್ನ ಊಟ ಮಾಡುವುದರ ಮೂಲಕ ದೇಹದ ತೂಕ ಇಳಿಸಿಕೊಳ್ಳಬಹುದಂತೆ ತೂಕ ಹೆಚ್ಚಿಸಿಕೊಂಡವರು, ಹೇಗಾದರೂ ಮಾಡಿ ದೇಹದ ತೂಕ ಇಳಿಸಿಕೊಳ್ಳಬೇಕು ಎನ್ನುವ ಒಂದೇ ಹಠಕ್ಕೆ ಬಿದ್ದು, ದಿನಾ ಬೆಳಗ್ಗೆ ಬೇಗನೇ ಎದ್ದು ವಾಕಿಂಗ್ - ಜಾಗಿಂಗ್ ಮಾಡುವುದು, ವ್ಯಾಯಾಮ ಯೋಗಾಭ್ಯಾಸಗಳನ್ನು ಮಾಡುವುದು, ಊಟವನ್ನು ತ್ಯಜಿಸುವುದು ಅಥವಾ ಒಂದೇ ಹೊತ್ತು ಊಟ ಮಾಡುವುದು, ಕೆಲವೊಮ್ಮೆ ದಿನ ಪೂರ್ತಿ ಉಪವಾಸವಿರುವುದೂ ಇದೆ! ಹೀಗೆ ಪ್ರತಿದಿನ ತೂಕ ಇಳಿಸಿಕೊಳ್ಳಲು ಬೇಕಾಗುವ ಎಲ್ಲಾ ಪ್ರಯತ್ನವನ್ನು ಕೂಡ ಚಾಚೂ ತಪ್ಪದೆ ಮಾಡುವರು, ಆದರೆ ದೇಹದ ತೂಕ ಇಳಿಯಲ್ಲಿ ಯಶಸ್ಸು ಕಾಣದೆ, ನಿರಾಸೆ ಅನುಭವಿ ಸುವರು! ಆದರೆ ನಮ್ಮಲ್ಲಿ ಬಹುತೇಕರು ತೂಕ ಇಳಿಸಿಕೊಳ್ಳುವ ಪ್ರಯತ್ನದಲ್ಲಿ ಕೆಲವೊಂದು ತಪ್ಪುಗಳನ್ನು ಮಾಡುತ್ತೇವೆ. ಅಂತಹ ತಪ್ಪುಗಳಿಂದಾಗಿಯೂ ಕೂಡ ತೂಕ ಇಳಿಕೆಗೆ ಹಿನ್ನಡೆ ಉಂಟು ಮಾಡುವ ಸಾಧ್ಯತೆ ಕೂಡ ಇರುತ್ತದೆ..

**ತೂಕ ಇಳಿಸಲು ಬಯಸುವವರು ಬಿಳಿ ಅಕ್ಕಿಯ ಅನ್ನ ಊಟ ಮಾಡಬಾರದು**

ಮನುಷ್ಯನ ದೈಹಿಕ ಬೆಳವಣಿಗೆಗೆ, ದಿನನಿತ್ಯದ ಕಾರ್ಯ ಚಟುವಟಿಕೆಗಳಿಗೆ, ದೇಹದ ಶಕ್ತಿಯನ್ನು ಹೆಚ್ಚಿಸುವಲ್ಲಿ ಅನ್ನದ ಮಹತ್ವ ಮರೆಯುವ ಹಾಗಿಲ್ಲ. ಹೀಗಾಗಿ ಮನುಷ್ಯನ ದೇಹದ ಆರೋಗ್ಯಕರ ಬೆಳವಣಿಗೆಗೆ ಅನ್ನಕ್ಕೆ ಹಿಂದಿನ ಕಾಲದಿಂದಲೂ ಕೂಡ ವಿಶೇಷ ಸ್ಥಾನಮಾನ ನೀಡುತ್ತಾ ಬರಲಾಗಿದೆ.

ಆದರೆ ತೂಕ ಇಳಿಸಲು ಬಯಸುವವರು ಬಿಳಿಅಕ್ಕಿಯ ಅನ್ನದಿಂದ ದೂರವಿರಬೇಕು ಎನ್ನುತ್ತಾರೆ ತಜ್ಞರು ಇದರ ಹಿಂದಿನ ಕಾರಣ ವೆಂದರೆ ಈ ಬಿಳಿ ಅಕ್ಕಿಯ ಗ್ಲೈಸೆಮಿಕ್ ಸೂಚ್ಯಂಕ ಹೆಚ್ಚಾಗಿದೆ.ಇದು ಸುಮಾರು 70 ರಿಂದ 90 ರಷ್ಟಿದೆ. ಇದರಲ್ಲಿ ಪೋಷಕಾಂಶಗಳು ಕಡಿಮೆ ಮತ್ತು ಹೆಚ್ಚಿನ ಕಾರ್ಬೋ ಹೈಡ್ರೇಟ್ ಗಳಿವೆ. ಆದ್ದರಿಂದ, ಬಿಳಿ ಅಕ್ಕಿಯ ಅನ್ನ ಸೇವನೆ ಮಾಡು ವುದರಿಂದ ದೇಹದ ತೂಕ ಹೆಚ್ಚಾಗುವ ಸಾಧ್ಯತೆ ಹೆಚ್ಚಿರುತ್ತದೆ ಎನ್ನುವುದು ತಜ್ಞರ ಸಲಹೆ.

ಸಾಮಾನ್ಯವಾಗಿ ಅಂಗಡಿಗಳಲ್ಲಿ ಸಿಗುತ್ತಿರುವ ಬಿಳಿಅಕ್ಕಿಗಳಿಗೆ ಹೆಚ್ಚಾಗಿ ಪಾಲೀಶ್ ಮಾಡಿರುವ ಕಾರಣ, ತನ್ನಲ್ಲಿ ಹೆಚ್ಚಾಗಿ ಪೋಷಕಾಂಶಗಳು ಒಳಗೊಂಡಿರುವುದಿಲ್ಲ.

**ಕುಚ್ಚಲಕ್ಕಿ ಅಥವಾ ಕೆಂಪಕ್ಕಿ**

**ಭತ್ತವನ್ನು ಬೇಯಿಸಿ ಒಣಗಿಸಿ ಅದರ ನಂತರ ಕುಚ್ಚಲಕ್ಕಿ ಅಥವಾ ಕೆಂಪಕ್ಕಿ ಯನ್ನು ತಯಾರಿಸಲಾಗುತ್ತದೆ. ಈ ಅಕ್ಕಿಯಲ್ಲಿ ನಾರಿನಾಂಶದ ಪ್ರಮಾಣ ಅಧಿಕ ಪ್ರಮಾಣದಲ್ಲಿ ಕಂಡು ಬರುತ್ತದೆ ಎಂದು ಹೇಳಲಾಗುತ್ತದೆ. ಪ್ರಮುಖ ವಾಗಿ ಈ ಕೆಂಪಕ್ಕಿಯಲ್ಲಿ ಕಂಡುಬರುವ ಅಧಿಕ ಪ್ರಮಾಣದ ನಾರಿನಾಂಶವು, ಜೀರ್ಣಕ್ರಿಯೆ ಪ್ರಕ್ರಿಯೆಯನ್ನು ಹೆಚ್ಚಿಸುವುದರ ಜೊತೆಗೆ ದೀರ್ಘಕಾಲ ಹೊಟ್ಟೆ ತುಂಬಿರುವಂತೆ ಮಾಡುವುದ ಜೊತೆಗೆ ದೇಹದ ತೂಕ ಇಳಿಸಲು ಕೂಡ ನೆರವಿಗೆ ಬರುವುದು. ಹೀಗಾಗಿ ದೇಹದ ತೂಕ ಇಳಿಸಲು ಬಯಸುವ ವರು ಕೆಂಪಕ್ಕಿಯನ್ನು ಬಳಸುವುದು ಒಳ್ಳೆಯದು.**

**ಕೆಂಪಕ್ಕಿಯ ಗಂಜಿ ಊಟ ಮಾಡಿ!**

ಹೀಗಾಗಿ ಈ ಅಕ್ಕಿ ಯಿಂದ ತಯಾರು ಮಾಡಿದ ಅನ್ನ ದೇಹದ ತೂಕ ಹೆಚ್ಚಿಸುವ ಸಾಧ್ಯತೆ ಹೆಚ್ಚಿರುತ್ತದೆ. **ಬಿಳಿ ಅಕ್ಕಿಯಲ್ಲಿ ಗ್ಲೈಸೆಮಿಕ್ ಸೂಚ್ಯಂಕ:** ಇನ್ನು ಬಿಳಿ ಅಕ್ಕಿಯಲ್ಲಿ ಗ್ಲೈಸೆಮಿಕ್ ಸೂಚ್ಯಂಕ ಹೆಚ್ಚಾಗಿದೆ.ಇದು ಸುಮಾರು 70 ರಿಂದ 90 ರಷ್ಟಿದೆ.ಇದರಲ್ಲಿ ಪೋಷಕಾಂಶಗಳು ಕಡಿಮೆ ಮತ್ತು ಹೆಚ್ಚಿನ ಕಾರ್ಬೋಹೈಡ್ರೇಟ್ ಗಳಿವೆ.ಆದ್ದರಿಂದ ಬಿಳಿ ಅಕ್ಕಿಯ ಅನ್ನ ಮಾಡಿ ಸೇವನ ಮಾಡುವುದರಿಂದ ದೇಹದ ತೂಕ ಹೆಚ್ಚಾಗುವುದರ ಜೊತೆಗೆ ಬೊಜ್ಜು ಮಧುಮೇಹದ ಅಪಾಯ ಕೂಡ ಕಂಡು ಬರಬಹುದು. ಈಗಾಗಲೇ ಮಧುಮೇಹ ಇರುವವರು ಬಿಳಿ ಅಕ್ಕಿಯನ್ನು ತಿನ್ನದಂತೆ ಸೂಚಿಸಲಾಗಿದೆ. ಏಕೆಂದರೆ ಇದು ಸಕ್ಕರೆಯನ್ನು ಹೆಚ್ಚಿಸುತ್ತದೆ. ನಮ್ಮ ದೇಶದಲ್ಲಿ ಅನೇಕ ರೀತಿಯ ಅಕ್ಕಿಯನ್ನು ಬೆಳೆಯಲಾಗುತ್ತದೆ. ಇವುಗಳಲ್ಲಿ ಪೋಷಕಾಂಶಗಳು ಸಮೃದ್ಧವಾಗಿರುವ ಹಾಗೂ ದೇಹದ ತೂಕ ಇಳಿಸಲು ನೆರವಿಗೆ ಬರುವ ಕೆಲವೊಂದು ಬಗೆಯ ಅಕ್ಕಿಯ ಬಗ್ಗೆ ಈ ಲೇಖನದಲ್ಲಿ ಮಾಹಿತಿಯನ್ನು ನೀಡಿದ್ದೇವೆ ಮುಂದೆ ಓದಿ

**ಕಪ್ಪು ಅಕ್ಕಿ:** ಸಾಮಾನ್ಯ ಅಕ್ಕಿಯಂತೆ ಇದ್ದರೂ ಕೂಡ, ಇದರ ಬಣ್ಣ ಮಾತ್ರ ಕಡುಕಪ್ಪು ಅಥವಾ ಸ್ವಲ್ಪ ಕಡುನೇರಳೆ ಬಣ್ಣದಲ್ಲಿ ಕಂಡುಬರುತ್ತದೆ. ಸಾಮಾನ್ಯವಾಗಿ ಜಪಾನ್, ಚೀನಾ ಥೈಲ್ಯಾಂಡ್ ಮತ್ತು ಇಂಡೋನೇಶಿಯಾದಲ್ಲಿ ಇದನ್ನು ಹೆಚ್ಚಾಗಿ ಬೆಳೆಯಲಾಗುತ್ತದೆ, ಇತ್ತೀಚೆಗೆ ಭಾರತದಲ್ಲಿಯೂ ಕೂಡ ಹೇರಳ ವಾಗಿ ಈ ಅಕ್ಕಿಯನ್ನು ಬೆಳೆಸಲಾಗುತ್ತಿದೆ. ಪ್ರಮುಖವಾಗಿ ಈ ಅಕ್ಕಿಯಲ್ಲಿ ಕಂಡುಬರುವ ಆ್ಯಂಥೋಸಿಯಾನಿನ್ ಎನ್ನುವ ಆ್ಯಂಟಿ ಆಕ್ಸಿಡೆಂಟ್ ಹಾಗೂ ಇದರಲ್ಲಿ ಹೇರಳವಾಗಿ ಕಂಡು ಬರುವ ಪ್ರೋಟೀನ್, ನಾರಿನಾಂಶವು ದೇಹದ ತೂಕವನ್ನು ಇಳಿಸಲು ನೆರವಿಗೆ ಬರುತ್ತದೆ

# ರಾಮಾಯಣ



ಭರದ್ವಾಜ ಮುನಿಯಿಂದ ಭರತಾದಿಗಳಿಗೆ ಔತಣ

• ಹಿಂದಿನ ಸಂಚಿಕೆಯಿಂದ

## 91 ನೆಯ ಅಧ್ಯಾಯ

ತನ್ನ ಪ್ರಾಣಕಾಂತೆಯಾದ ಆ ದೇವಿಯನ್ನು ಕುರಿತು ಹೀಗೆ ನುಡಿದನು: ಶೋಭನಾಂಗಿ, ಈ ಚಿತ್ರಕೂಟಪರ್ವತವನ್ನು ನೋಡಿ ನನ್ನ ಮನಸ್ಸಿಗೆ ರಾಜ್ಯವರಿತ್ಯಾಗವನ್ನು ಮಾಡಿದ ದುಃಖವೂ ಅಯೋಧ್ಯಾಪಟ್ಟಣದಲ್ಲಿ ಅನೇಕಮಂದಿ ಸ್ನೇಹಿತರನ್ನು ಬಿಟ್ಟು ಬಂದ ದುಃಖವೂ ತೋರದಾಗಿದೆ.

ಸೀತೆ ಈ ಚಿತ್ರಕೂಟಪರ್ವತವು ಸೌಂದರದಲ್ಲಿ ಸ್ವರ್ಗಲೋಕವನ್ನು ಮೀರಬೇಕೆಂಬ ಬುದ್ಧಿಯಿಂದಲೋ ಎಂಬಂತೆ ಅತ್ಯಂತ ಉನ್ನತವಾದ ಕೋಡುಗಲ್ಲಿನಿಂದ ಒಪ್ಪುತ್ತಿದೆ. ಈ ಪರ್ವತದ ತಪ್ಪಲುಗಳನ್ನು ನೋಡಿದರೆ ಕೆಲವು ಬೆಳ್ಳಿಯಂತೆ ಕಾಣಿಸುತ್ತಿವೆ. ಕೆಲವು ಅತ್ಯಂತ ಕೆಂಪಾಗಿ ತೋರುತ್ತಿವೆ. ಕೆಲವು ಹೊಂಬಣ್ಣವಾಗಿ ಕಾಣಿಸುತ್ತಿವೆ. ಕೆಲವು ಹಳದಿ ವರ್ಣವಾಗಿಯೂ ಕೆಲವು ಪಚ್ಚೆಯವರ್ಣವಾಗಿಯೂ ಕೆಲವು ಪುಷ್ಯರಾಗ ರತ್ನ ಕಾಂತಿಯುಳ್ಳವಾಗಿಯೂ ಕೆಲವು ತಾಳೆಯ ಪುಷ್ಪದ ಕಾಂತಿಯುಳ್ಳವಾಗಿಯೂ ಕೆಲವು ನಕ್ಷತ್ರಕಾಂತಿಯುಳ್ಳವಾಗಿಯೂ ಕೆಲವು ಪಾದರಸದ ಕಾಂತಿಯುಳ್ಳವಾಗಿಯೂ ಕೆಲವು ಗೈರಿಕಾದಿ ಧಾತುಮಯವಾಗಿಯೂ ಒಪ್ಪುತ್ತಿವೆ. ಈ ಪರ್ವತವು ಹಿಂದೆಂದಿಗೂ ಕಣ್ಣಿಗೆ ಬೀಳದಿರುವ ನಾನಾಮೃಗಪಕ್ಷಿಗಳಿಂದ ಇಟ್ಟಣಿಸಿದೆ. ಮಾವು ನೇರಿಳೆ ಅಮ್ಮಟಿ ಸಜ್ಜರಸ ಲೋಧ್ರ ಹಲಸು ಬಿಲ್ವ ಅಂಕೋಲೆ ತೆಂಗು ಬೆಲವತ್ತ, ಆಲ ಕೆಂಡಸಂಪಿಗೆ ತಿಲ ನೆಲ್ಲಿ ಬಿದರು ಬೆತ್ತ, ನಿಂಬೆ ಅತ್ತಿ ಮೊದಲಾದ ಮರಗಳಿಂದಲೂ ಪುಷ್ಪಫಲಗಳಿಂದಲೂ ಇಟ್ಟಣಿಸಿರುವ ವನದಿಂದ ಕೂಡಿ ಈ ಚಿತ್ರಕೂಟಪರ್ವತವು ಮನೋಹರವಾಗಿದೆ. ಈ ಪರ್ವತದ ತಪ್ಪಲುಗಳಲ್ಲಿ ಕಾಮಧೇನುವಿಗೆ ಸಮಾನವಾದ ಗೋಸಮೂಹಗಳು ಅಮೃತಕ್ಕೆ ಸಮಾನವಾದ ಕ್ಷೀರವನ್ನು ಕರೆಯುತ್ತಿವೆ. ಕನ್ನರ ಕಿಂಪುರುಷರೆಂಬ ದೇವತಾವಿಶೇಷಗಳ ಸ್ತ್ರೀಪುರುಷರು ಒಟ್ಟಿಗೂಡಿ ಸಂಚಾರಮಾಡುತ್ತಿರುವರು. ವಿದ್ಯಾಧರಸ್ತ್ರೀಯರು ಕೆಂದಾವರೆಯ ಪುಷ್ಪಗಳುಳ್ಳ ಕೊಳಗಳಲ್ಲಿ ತಾವು ಉಟ್ಟ ವಸ್ತ್ರಗಳನ್ನು ಮರದ ಕೊಂಬೆಗಳಲ್ಲಿರಿಸಿ ಜಲಕ್ರೀಡೆಯನ್ನು ಮಾಡುತ್ತಿರುವರು.

ಈ ಪರ್ವತವು ತನ್ನ ತಪ್ಪಲುಗಳಲ್ಲಿ ಬೀಳುವ ನಿರ್ಝರೋದಕದಿಂದ ಮದ ಸುರಿಯುತ್ತಿರುವ ಗಜರಾಜನಂತೆ ಒಪ್ಪುತ್ತಿದೆ. ಗುಹೆಗಳ ಬಾಗಿಲುಗಳಿಂದ ಹೊರಡುವ ತಂಗಾಳಿಯು ಪಲ್ಲವಿತವೂ ಪುಷ್ಪಿತವೂ ಆದ ಮರಗಳ ಕೊಂಬೆಗಳನ್ನು ಕೊಡಹಿಕೊಂಡು ಪರಿಮಳಯುಕ್ತವಾಗಿ ಬೀಸುತ್ತ ಮನುಷ್ಯರ ಮನಸ್ಸನ್ನು ಅಪಹರಿಸುತ್ತಿದೆ. ಇಂಥ ಮನೋಹರವಾದ ಪರ್ವತದ ವನದಲ್ಲಿ ನಿನ್ನೊಡನೆಯೂ ಲಕ್ಷ್ಮಣನೊಡನೆಯೂ ಎಷ್ಟುವರುಷಗಳಿದ್ದರೂ ನನ್ನನ್ನು ಶೋಕವು ಸೇರಲಾರದು. ಇಲ್ಲಿ ವನವಾಸಮಾಡುತ್ತಿದ್ದೆನಾದರೆ ಎರಡು ಕಾರ್ಯಗಳು ಸಿದ್ಧಿಯಾಗುವುವು. ನಮ್ಮ ತಂದೆಯಾದ ದಶರಥರಾಯನ ಆಜ್ಞೆಯನ್ನು ಮೀರದೆ ಆತನ ಋಣವನ್ನು ತೀರಿಸುವುದೊಂದು ಕಾರ್ಯ: ಭರತನ ಮನಸ್ಸಿಗೆ ಹಿತವನ್ನುಂಟು ಮಾಡುವುದು ಮತ್ತೊಂದು ಕಾರ್ಯ ವೈದೇಹಿ, ನೀನು ನನ್ನೊಡನೆ ಈ ಪರ್ವತದ ವಿನೋದಗಳನ್ನು ನೋಡುತ್ತ ಇದ್ದರೆ ಇದೇ ಸ್ವರ್ಗಸುಖವೆಂದು ಭಾವಿಸು.

ಮುಂದುವರಿಯುವುದು...

# ಗಾಂಜಾ, ಕ್ಲಬ್ ದಂಧೆಗೆ ಕಡಿವಾಣ ಹಾಕಿ: ಶಾಸಕ ಜಿ.ಜನಾರ್ದನರೆಡ್ಡಿ ಹೇಳಿಕೆ

• ಉದಯವಾಹಿನಿ ಗಂಗಾವತಿ

ಶಾಸಕರಿಲ್ಲದೆ ಗಂಗಾವತಿ ಕ್ಷೇತ್ರ ಅನಾಥವಾಗಿದೆ. ಕ್ಷೇತ್ರದ ಅಭಿವೃದ್ಧಿಗೆ ನಾವಿದ್ದೇವೆ. ಜನರು ತಲೆಕೆಡಿಸಿಕೊಳ್ಳುವ ಅಗತ್ಯ ಇಲ್ಲ ಎಂದು ಕೆಡಿಪಿ ಸಭೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ವೆಂಕಟಗಿರಿ ಗ್ರಾಮಕ್ಕೆ ಮಂಜೂರಾಗಿದ್ದ ಸಮುದಾಯ ಆರೋಗ್ಯ ಕೇಂದ್ರ ರದ್ದು ಮಾಡಿಸಿ ಮಹಾನ್ ಕೆಲಸ ಮಾಡಿದ್ದಾರೆ' ಎಂದು ಶಾಸಕ ಜಿ.ಜನಾರ್ದನರೆಡ್ಡಿ ಹೇಳಿದರು.

ನಗರದ ತಾ. ಪಂಚಾಯಿತಿಯ ಮಂಥನ ಸಭಾಂಗಣದಲ್ಲಿ ಸೋಮವಾರ ನಡೆದ ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ (ಕೆಡಿಪಿ) ತ್ರೈಮಾಸಿಕ ಸಭೆಯಲ್ಲಿ ಮಾತನಾಡಿ, ಸಿಬಿಐ ಪ್ರಕರಣದ ಭಾಗವಾಗಿ ನಾನು ಒಂದು ತಿಂಗಳು ಕ್ಷೇತ್ರದಲ್ಲಿ ಇರಲಿಲ್ಲ. ಆಗ ಸಿಎಂ, ಇಲ್ಲಿನ ಸಚಿವರು ಸೇರಿ ಇತರ ನಾಯಕರು ಗಂಗಾವತಿಯಲ್ಲಿ ಚುನಾವಣೆ ಮಾಡಿಯೇ ಬಿಡಬೇಕು ಎಂದು ಪಣತೊಟ್ಟಿದ್ದರು. ಜಾಮೀನು ದೊರತ ಕೂಡಲೇ ಎಲ್ಲರೂ ತಣ್ಣಗಾದರು ಎಂದರು. ಸರ್ಕಾರ ರಚನೆಯಾಗಿ 2 ವರ್ಷಗಳಾಗುತ್ತಿವೆ. ಅವರ ಹಣೆ ಬರಹಕ್ಕೆ ಅಭಿವೃದ್ಧಿ ಕೆಲಸಗಳಿಗೆ ಅನುದಾನ ನೀಡಲು ಆಗುತ್ತಿಲ್ಲ. ವಾಲ್ಮೀಕಿ ನಿಗಮದ ಹಗರಣದ ನಂತರ ಆ ಖಾತೆಯನ್ನು ಸಿಎಂ ಸಿದ್ದರಾಮಯ್ಯನವರೇ ಇರಿಸಿಕೊಂಡಿದ್ದಾರೆ. ಅಹಿಂದ ನಾಯಕ ಎಂದು ಬಿಂಬಿಸಿಕೊಳ್ಳುವ ಅವರು ವಾಲ್ಮೀಕಿ ಸಮುದಾಯಕ್ಕೆ ಈವರೆಗೂ ನಯಾಪೈಸೆಯನ್ನೂ ಬಿಡುಗಡೆ ಮಾಡಿಲ್ಲ ಎಂದು ಆರೋಪಿಸಿದರು.

ಗಂಗಾವತಿ, ಕೊಪ್ಪಳ ಅರಣ್ಯ ಅಧಿಕಾರಿ ಸುಭಾಷ ಚಂದ್ರ ನಾಯಕ, ಸ್ವಾತಿ ಮಾತನಾಡಿ, ಅಂಜನಾದ್ರಿ, ಇರಕಲಗಡ ಭಾಗದಲ್ಲಿ ಕರಡಿ ಮತ್ತು ಚಿರತೆ ಹಾವಳಿ ಹೆಚ್ಚಿದೆ. ಇಲ್ಲಿ ಸೆರೆ ಹಿಡಿದ ಪ್ರಾಣಿಗಳನ್ನು ಮೊದಲು ದಾಂಡೇಲಿ ಭಾಗದಲ್ಲಿ ಬಿಡಲಾಗುತ್ತಿತ್ತು. ಅಲ್ಲಿನ ಅಧಿಕಾರಿಗಳು ಇಲ್ಲಿ ಪ್ರಾಣಿಗಳ ಹಾವಳಿ ಹೆಚ್ಚಾಗುತ್ತಿದೆ. ಬಂಡಿಪುರಕ್ಕೆ ಬಿಡಿ ಎನ್ನುತ್ತಿದ್ದು, ಆ ಸ್ಥಳ ದೂರವಿದ್ದರೂ ಅನಿವಾರ್ಯವಾಗಿ ಬಿಟ್ಟು ಬರಬೇಕಾಗುತ್ತಿದೆ. ಇಲ್ಲಿನ ಅರಣ್ಯ ಪ್ರದೇಶವನ್ನು ವನ್ಯಜೀವಿ ವಲಯ ಎಂದು ಗುರುತಿಸಿದರೆ ಪ್ರಾಣಿ ಪ್ರಭೇದಗಳನ್ನ ರಕ್ಷಿಸಿಸಬಹುದು' ಎಂದು ತಿಳಿಸಿದರು.

> ಪ್ರಸಕ್ತ ಸಾಲಿನಲ್ಲಿ ಶಾಲಾ ಕೊಠಡಿಗಳ ದುರಸ್ತಿ, ಶೌಚಾಲಯ ವ್ಯವಸ್ಥೆ ಕಲ್ಪಿಸಿ ಎಂದು ತಾ.ಪಂ ಇಒ ಅವರಿಗೆ ಮನವಿ ಮಾಡಲಾಗಿದೆ. ಬಹುತೇಕ ಕಟ್ಟಡಗಳ ಸ್ಲ್ಯಾಬ್ ಕಳಪೆ ಗುಣಮಟ್ಟದಿಂದ ಕೂಡಿದ ಕಾರಣ ಮೇಲ್ಛಾವಣಿಗಳು ಬೇಗ ಕುಸಿಯುತ್ತಿವೆ. ಹಾಗಾಗಿ ಶಾಲೆಗಳಿಗೆ ಶೀಟ್ ಹಾಕಿಸಲಾಗುತ್ತಿದೆ. -ನಟೇಶ, ಕ್ಷೇತ್ರ ಶಿಕ್ಷಣಾಧಿಕಾರಿ



ಉದಯವಾಹಿನಿ ಚಿತ್ರ

## ಬಿಜೆಪಿ ಬಳ್ಳಾರಿ ನಗರ ಅಧ್ಯಕ್ಷರಾಗಿ ವೆಂಕಟರಮಣ ಅವಿರೋಧ ಆಯ್ಕೆ

• ಉದಯವಾಹಿನಿ ಬಳ್ಳಾರಿ

ಭಾರತೀಯ ಜನತಾ ಪಾರ್ಟಿಯ ಬಳ್ಳಾರಿ ನಗರ ಮಂಡಲದ ನೂತನ ಅಧ್ಯಕ್ಷರಾಗಿ ಮಾಜಿ ಮೇಯರ್ ಗುರ್‍ರಂ ವೆಂಕಟರಮಣ ಆಯ್ಕೆಯಾಗಿದ್ದಾರೆ. ಪಕ್ಷದ ಮುಖಂಡ ಅರುಣ್ ಶಾಪುರ್ ಬಂದು ಚುನಾವಣಾ ಪ್ರಕ್ರಿಯೆಗಳನ್ನು ನಡೆಸಿ ವೆಂಕಟರಮಣ ಒಬ್ಬರೇ ನಾಮ ಪತ್ರ ಸಲ್ಲಿಸಿದ್ದರಿಂದ ಇವರ ಆಯ್ಕೆಯನ್ನು ಅವಿರೋಧ ಎಂದು ಘೋಷಣೆ ಮಾಡಿದ್ದಾರೆ. ವೆಂಕಟರಮಣ ಅವರು ಇಂದು ಪಕ್ಷದ ಜಿಲ್ಲಾ ಕಚೇರಿಯಲ್ಲಿ ನಗರ ಅಧ್ಯಕ್ಷರಾಗಿ. ಜಿಲ್ಲಾ ಅಧ್ಯಕ್ಷ ಅನಿಲ್ ನಾಯ್ಡು, ವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್, ಮುಖಂಡರಾದ ಕೆ.ಎಸ್.ದಿವಾಕರ್, ಓಬಳೇಶ ಅವರ ಸಮ್ಮುಖದಲ್ಲಿ ಪದಗ್ರಹಣ ಮಾಡಿದರು. ಇವರು ಈ ಹಿಂದೆ ಕಾಂಗ್ರೆಸ್ ಪಕ್ಷದಿಂದ ಇಲ್ಲಿನ ಮಹಾನಗರ ಪಾಲಿಕೆಯ ಮೇಯರ್ ಆಗಿದ್ದರು. ನಂತರ ಕೆಆರ್ ಪಿ ಪಕ್ಷ ಸೇರಿದ್ದರು. ಆ ಪಕ್ಷ ಬಿಜೆಪಿಯಲ್ಲಿ ವಿಲೀನ ಆಗಿದ್ದರಿಂದ ಈ ಪಕ್ಷದಲ್ಲಿದ್ದರು.

ಮಾಜಿ ಸಚಿವ, ಗಂಗಾವತಿ ಶಾಸಕ ಜನಾರ್ಧನರೆಡ್ಡಿ ಅವರ ಪರಮ ಆಪ್ತರು. ಇವರ ಆಯ್ಕೆಗೆ ನಗರ ಮಾಜಿ ಶಾಸಕ ಸೋಮಶೇಖರ ರೆಡ್ಡಿ ಅವರು ಆಕ್ಷೇಪ ಮಾಡಿ, ಬುಡಾ ಮಾಜಿ ಅಧ್ಯಕ್ಷ ಮಾರುತಿ ಪ್ರಸಾದ್ ಅವರನ್ನು ಮಾಡಲು ಬಯಸಿದ್ದರು. ಅಂತಿಮವಾಗಿ ವೆಂಕಟರಮಣ ಅವರ ಆಯ್ಕೆಗೆ ಮುದ್ರೆ ಬಿದ್ದಿದೆ.

## ಸಂಭ್ರಮದ ಮೊಹರಂ ಆಚರಣೆ

• ಉದಯವಾಹಿನಿ ಶಿಗ್ಗಾವಿ

ಪಟ್ಟಣದಲ್ಲಿ ಭಾನುವಾರ ಮೊಹರಂ ಹಬ್ಬದ ಅಂಗವಾಗಿ ಅಲೈ ದೇವರ ಮೆರವಣಿಗೆಯಲ್ಲಿ ಹಿಂದೂ-ಮುಸ್ಲಿಮ ಭಕ್ತರು ವಿಶೇಷ ಪೂಜೆ ಸಲ್ಲಿಸುವ ಮೂಲಕ ಸಂಭ್ರಮದಿಂದ ಆಚರಿಸಿದರು. ಪಟ್ಟಣದ ಸವಣೂರ ರಸ್ತೆ, ಪುರಸಭೆ ವೃತ್ತ, ಪೇಟೆ ರಸ್ತೆ ಸೇರಿದಂತೆ ವಿವಿಧೆಡೆ ಪ್ರತಿಷ್ಠಾಪಿಸಿರುವ ಅಲೈ ದೇವರಿಗೆ ಭಕ್ತರು ಪೂಜೆ ಸಲ್ಲಿಸಿದರು. ಸಂಜೆ ನಡೆದ ಅಲೈದೇವರ ಮೆರವಣಿಯಲ್ಲಿ ಸಾವಿರಾರು ಭಕ್ತರು ಭಾಗವಹಿಸಿದ್ದರು.

ಮೆರವಣಿಗೆ ಪುರಸಭೆ ವೃತ್ತ, ಸಂತೆ ಮೈದಾನ, ಹಳೇ ಬಸ್ ನಿಲ್ದಾಣ, ಪಿಎಲ್‌ಡಿ ಬ್ಯಾಂಕ್ ವೃತ್ತ, ಹಳೇಪೇಟೆ, ಜೋಳದ ಪೇಟೆ, ಮುಖ್ಯ ಪೇಟೆ ರಸ್ತೆ ಸೇರಿದಂತೆ ಪಟ್ಟಣದ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಜರುಗಿತು. ಮೆರವಣಿಗೆಯಲ್ಲಿ ಕರ್ಬಲ, ಅಲಾವಿ ಹಾಡುಗಳನ್ನು ಯುವಕರು ಹಾಡಿದರು. ಹುಲಿ, ಕರಡಿ ವೇಷದಾರಿಗಳ ಹಲಗೆ ನಾದಕ್ಕೆ ತಕ್ಕಂತೆ ಕಾಲಿಕ ಗೆಜ್ಜೆ ಕಟ್ಟಿಕೊಂಡು ಕುಣಿಯುತ್ತಾ ಸಾಗುತ್ತಿದ್ದರು. ಕೆಲವು ಯುವಕರ ತಂಡ ಮೆರವಣಿಗೆಯಲ್ಲಿ ಬರುವ ಭಕ್ತರಿಗೆ ತಂಪು ಪಾನೀಯ ಹಾಗೂ ಉಪಹಾರ ವಿತರಿಸಿದರು.

## ವಿದ್ಯುತ್ ಸಮಸ್ಯೆ ಪರಿಹಾರಕ್ಕೆ ಸಹಾಯವಾಣಿ

• ಉದಯವಾಹಿನಿ ವಿಜಯಪುರ

ಹೆಚ್ಚಿನ ಮಳೆ-ಗಾಳಿಯ ರಭಸಕ್ಕೆ ವಿದ್ಯುತ್ ಮೂಲಭೂತ ಸಲಕರಣೆಗಳು, ವಿದ್ಯುತ್ ಕಂಬಗಳು ಹಾಗೂ ತಂತಿಗಳು ತುಂಡಾಗಿ ಹರಿದು ಬಿದ್ದು, ಹಾನಿಯನ್ನುಂಟು ಮಾಡುವ ಸಂಭವವಿರುವುದರಿಂದ ಇಂತಹ ಸಮಸ್ಯೆಗಳು ಕಂಡು ಬಂದಲ್ಲಿ ಹೆಸ್ಕಾಂ ಸಹಾಯವಾಣಿ ಸಂಖ್ಯೆಗೆ ಕರೆ ಮಾಡಿ ತಿಳಿಸುವ ಮೂಲಕ ಜೀವಹಾನಿಯನ್ನು ತಪ್ಪಿಸಲು ಸಾರ್ವಜನಿಕರು ಸಹಕರಿಸಬೇಕು ಎಂದು ವಿಜಯಪುರ ಹೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಕೋರಿದ್ದಾರೆ. ಸ್ಥಾಪಿಸಲಾದ ಉಚಿತ ಸಹಾಯವಾಣಿ ಸಂಖ್ಯೆ 1912, ಗ್ರಾಹಕರ ದೂರು ಕೇಂದ್ರದ ದೂರವಾಣಿ ಸಂಖ್ಯೆ: 08352-276940 ಮೊ:9480882690, ನಗರ ಉಪ ವಿಭಾಗ -2ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಮೊ: 9448375711ಸಂಪರ್ಕಿಸಬಹುದಾಗಿದೆ.

## ಬೈಕ್ ಅಪಘಾತ: ಮಾನವೀಯತೆ ಮೆರೆದ ಆಸ್ಪತ್ರೆ

• ಉದಯವಾಹಿನಿ ಹರಿಹರ

ಬೈಕ್ ಅಪಘಾತದಲ್ಲಿ ಗಾಯಗೊಂಡು ರಸ್ತೆ ಮಧ್ಯೆ ನರಳಾಡುತ್ತಿದ್ದ ವ್ಯಕ್ತಿಯನ್ನ ಆಸ್ಪತ್ರೆ ಸಿಬ್ಬಂದಿಯೇ ಆಸ್ಪತ್ರೆಗೆ ಸೇರಿಸಿ ಮಾನವೀಯತೆ ಮೆರೆದಿದ್ದಾರೆ. ತಾಲ್ಲೂಕಿನ ಬಿಳಸನೂರು ಗ್ರಾಮದ ನಿವಾಸಿ ಲೋಕೇಶಪ್ಪ ಪಿ. ಹೊಸಹಳ್ಳಿ ಮಾರ್ಗ ಮಧ್ಯದಲ್ಲಿ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಬಿದ್ದು, ಗಾಯಗೊಂಡಿದ್ದರು. ವಿಷಯ ತಿಳಿದ ಆರೋಗ್ಯ ಕೇಂದ್ರದ ಸಿಬ್ಬಂದಿ ನೀಲಪ್ಪ, ಮಂಜುನಾಥ್, ಅಕ್ಷಯ್, ಸಂತೋಷ್, ನಾಗರಾಜ್ ತಕ್ಷಣ ಸ್ಥಳಕ್ಕೆ ಆಗಮಿಸಿ, ಗಂಭೀರ ಸ್ಥಿತಿಯಲ್ಲಿದ್ದ ಗಾಯಾಳುವನ್ನು ಹರಿಹರದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದಾರೆ.

## ಕಿರುಕುಳ ಆರೋಪ: ವಿಷಸೇವಿಸಿದ ಕೆಎಸ್‌ಆರ್‌ಟಿಸಿ ಚಾಲಕ

• ಉದಯವಾಹಿನಿ ಬೇಲೂರು

ಇಲ್ಲಿನ ಕೆಎಸ್‌ಆರ್‌ಟಿಸಿ ಡಿಪೋ ವ್ಯವಸ್ಥಾಪಕಿ ಶಾಜೀಯಭಾನು ಅವರು ಕಿರುಕುಳ ನೀಡುತ್ತಿದ್ದಾರೆ ಎಂದು ಆರೋಪಿಸಿ, ಬಸ್ ಚಾಲಕ ಕೋಟಿಗನಹಳ್ಳಿಯ ಹರೀಶ್ ಸೋಮವಾರ ಬೆಳಿಗ್ಗೆ ವಿಷ ಸೇವಿಸಿದ್ದಾರೆ. ಬೇಲೂರಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ದಾಖಲಿಸಲಾಗಿದೆ. ನನ್ನ ಸಾವಿಗೆ ಡಿಪೋ ಘಟಕ ವ್ಯವಸ್ಥಾಪಕಿ ಶಾಜೀಯ ಅವರೇ ಕಾರಣ, ಅವರ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ' ಎಂದು ಹರೀಶ್ ಪತ್ರ ಬರೆದಿದ್ದಾರೆ. ಡಿಪೋದಲ್ಲಿರುವ ವಿಶ್ರಾಂತಿ ಕೊಠಡಿಯಲ್ಲಿ ವಿಷ ಸೇವಿಸಿ ಒದ್ದಾಡುತ್ತಿದ್ದ ಹರೀಶ್ ಅವರನ್ನು ವ್ಯವಸ್ಥಾಪಕಿ ಶಾಜೀಯಭಾನು ಹಾಗೂ ಇತರೆ ನೌಕರರು ಬಸ್‌ನಲ್ಲಿ ಕರೆತಂದು ಆಸ್ಪತ್ರೆಗೆ ದಾಖಲಿಸಿದರು.

ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ ಆಗಮಿಸಿದ್ದ ಶಾಸಕ ಎಚ್. ಕೆ. ಸುರೇಶ್ ಮಾತನಾಡಿ ಹರೀಶ್ ಕುಟುಂಬದವರು ಹಾಗೂ ನೌಕರರನ್ನು ಸಮಾಧಾನಪಡಿಸಿಡಿದರು. ಡಿಪೋ ವ್ಯವಸ್ಥಾಪಕಿ ಹಾಗೂ ವಿಭಾಗೀಯ ನಿಯಂತ್ರಣಾಧಿಕಾರಿ ಜಗದೀಶ್ ಕುಮಾರ್ ಅವರಿಂದಾಗಿ ಇಲ್ಲಿ ಯಾವೊಬ್ಬ ಚಾಲಕ ಹಾಗೂ ನಿರ್ವಾಹಕರು ಕೆಲಸ ಮಾಡದ ಸ್ಥಿತಿ ನಿರ್ಮಾಣವಾಗಿದೆ. ಪ್ರತಿನಿತ್ಯ ಒಂದಲ್ಲ ಒಂದು ರೀತಿಯಲ್ಲಿ ಕೆಲಸಗಾರರಿಗೆ ತೊಂದರೆ ನೀಡುತ್ತಿದ್ದಾರೆ. ಇವರಿಬ್ಬರ ಮೇಲೆ ಕಠಿಣ ಕ್ರಮ ಕೈಗೊಂಡು ಅಮಾನತುಗೊಳಿಸುವಂತೆ ಸಾರಿಗೆ ಸಚಿವರಿಗೆ ದೂರವಾಣಿ ಮೂಲಕ ಮನವಿ ಮಾಡಿದ್ದೇನೆ. ಅವರು ನನ್ನ ಕ್ಷೇತ್ರದಲ್ಲಿ ಯಾವುದೇ ಕಾರಣಕ್ಕೂ ಇರಬಾರದು. ನೌಕರರ ಮೇಲೆ ದೌರ್ಜನ್ಯ ದಬ್ಬಾಳಿಕೆ ಮಾಡಲು ಬಿಡುವುದಿಲ್ಲ, ಬೇಲೂರು ಹಾಗೂ ಸಕಲೇಶಪುರ ಡಿಪೋಗಳು ಚಿಕ್ಕಮಗಳೂರು ವಿಭಾಗದಲ್ಲಿ ಇರುವುದರಿಂದ ಸಮಸ್ಯೆಯಾಗಿದ್ದು, ಹಾಸನ ವಿಭಾಗಕ್ಕೆ ವರ್ಗಾವಹಿಸುವಂತೆ ಸದನದಲ್ಲಿ ಮಾತನಾಡುತ್ತೇನೆ ಎಂದು ಶಾಸಕರು ತಿಳಿಸಿದರು.

# ಕರಾವಳಿಗೆ ಮುಂದಿನ ವರ್ಷ ಸಮುದ್ರ ಆಂಬ್ಯುಲೆನ್ಸ್

• ಉದಯವಾಹಿನಿ ಮಂಗಳೂರು

ಹಲವು ವರ್ಷಗಳ ಕನಸಾಗಿದ್ದ ಬಹುನಿರೀಕ್ಷಿತ ರಾಜ್ಯದ ಮೊದಲ ಸಮುದ್ರ ಆಂಬ್ಯುಲೆನ್ಸ್ ಮುಂದಿನ ವರ್ಷ ಸಾಕಾರಗೊಳ್ಳಲಿದೆ. ಮೀನುಗಾರಿಕೆ ಇಲಾಖೆಯು ಸುಮಾರು 7.85 ಕೋಟಿ ರೂ. ಮೊತ್ತದ ಸಮುದ್ರ ಆಂಬ್ಯುಲೆನ್ಸ್ ಸಿದ್ಧಪಡಿಸಲಿದೆ.

ಮೀನುಗಾರ ಸಮುದಾಯದ ಬೇಡಿಕೆಗೆ ಪೂರಕವಾಗಿ ಇಲಾಖೆ ಸಿದ್ಧತೆ ಮಾಡಿಕೊಂಡಿದ್ದು, ಮುಂದಿನ ವಾರ ನಿರ್ಮಾಣ ಕಾರ್ಯಾದೇಶ ನೀಡಲಿದೆ. ಇದಾದ ಸುಮಾರು ಏಳು ತಿಂಗಳಲ್ಲಿ ಆಂಬ್ಯುಲೆನ್ಸ್ ಸಿದ್ಧಗೊಳ್ಳಲಿದೆ ಎನ್ನುತ್ತಾರೆ ಮೀನುಗಾರಿಕೆ ಇಲಾಖೆ ನಿರ್ದೇಶಕ ದಿನೇಶ್ ಕುಮಾರ್ ಕಳ್ಳೇರ್.

800 ಎಚ್‌ಪಿ ಎಂಜಿನ್ ಸಾಮರ್ಥ್ಯದ ಆಂಬ್ಯುಲೆನ್ಸ್‌ನಲ್ಲಿ ನಾಲ್ಕು ಮಂದಿ ಅರೆವೈದ್ಯಕೀಯ ಸಿಬ್ಬಂದಿ ಮತ್ತು 4-5 ಹಾಸಿಗೆಗಳು ಇರಲಿವೆ. ಆಕ್ಸಿಜನ್ ಘಟಕ, ರೆಫ್ರಿಜರೇಟರ್, ಸ್ಟ್ರೆಚರ್, ಶವಾಗಾರ ವ್ಯವಸ್ಥೆ ಇರಲಿದೆ. ಮೀನುಗಾರಿಕೆ ಮಾಡುತ್ತಿರುವಾಗ ಸಮುದ್ರದಲ್ಲಿ ತೊಂದರೆಗೆ ಸಿಲುಕುವ ಮೀನುಗಾರರ ರಕ್ಷಣೆಗೆ ಆಂಬ್ಯುಲೆನ್ಸ್ ತುರ್ತು ವೈದ್ಯಕೀಯ ನೆರವು ನೀಡಲಿದೆ.

> **1** ರಾಜ್ಯದ ಮೊದಲ ಸಮುದ್ರ ಆಂಬ್ಯುಲೆನ್ಸ್‌ಗೆ 7.85 ಕೋಟಿ ರೂ. ಖರ್ಚಿನಲ್ಲಿ ಮುಂದಿನ ವಾರ ನಿರ್ಮಾಣ ಕಾರ್ಯಾದೇಶ ನೀಡಲಿದೆ.
>
> **2** 800 ಎಚ್‌ಪಿ ಎಂಜಿನ್ ಸಾಮರ್ಥ್ಯದ ಆಂಬ್ಯುಲೆನ್ಸ್‌ನಲ್ಲಿ 4-5 ಹಾಸಿಗೆಗಳು ಮತ್ತು ಅಗತ್ಯ ವೈದ್ಯಕೀಯ ಉಪಕರಣಗಳ ವ್ಯವಸ್ಥೆ ಇರಲಿದೆ.
>
> **3** 2024-25ರ ಬಜೆಟ್‌ನಲ್ಲಿ ರಾಜ್ಯಕ್ಕೆ ಸಮುದ್ರ ಆಂಬ್ಯುಲೆನ್ಸ್ ಸೇವೆ ಪರಿಚಯಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿದ್ದಾರೆ.

**ಅಗತ್ಯ ಉಪಕರಣಗಳ ವ್ಯವಸ್ಥೆ**

ವೈದ್ಯಕೀಯ ಉಪಕರಣಗಳ ಜತೆಗೆ, ಆಂಬ್ಯುಲೆನ್ಸ್‌ನಲ್ಲಿ ಬೆಂಕಿ ನಂದಕ ಸಾಧನಗಳು, ಅಗ್ನಿಶಾಮಕ ವ್ಯವಸ್ಥೆ, 20 ಲೈಫ್ ಜಾಕೆಟ್‌ಗಳು, ಜೀವ ರಕ್ಷಕ ಉಪಕರಣಗಳು, ಎರಡು ರಾಫ್ಟ್‌ಗಳು ಸಹಿತ ಅಗತ್ಯ ಉಪಕರಣಗಳ ವ್ಯವಸ್ಥೆ ಮಾಡಲಾಗುತ್ತದೆ.

ಸಾಮಾನ್ಯವಾಗಿ ಆಳಸಮುದ್ರ ಮೀನುಗಾರಿಕೆ ಬೋಟ್‌ಗಳಿಗೆ 350ರಿಂದ 400 ಎಚ್‌ಪಿ ಎಂಜಿನ್ ಅಳವಡಿಸಲಾಗುತ್ತದೆ. ಅದಕ್ಕೆ ಹೋಲಿಸಿದರೆ ಇದರ ಸಾಮರ್ಥ್ಯ ಕಡಿಮೆ. ಆದರೆ ತುರ್ತು ಸಂದರ್ಭದಲ್ಲಿ ನೆರವು ನೀಡಿ, ಮುಂದೆ ದಡಕ್ಕೆ ತಂದು ಹೆಚ್ಚಿನ ಚಿಕಿತ್ಸೆಗೆ ಆಂಬ್ಯುಲೆನ್ಸ್ ಅನುಕೂಲ ಕಲ್ಪಿಸಲಿದ್ದು, 2026ರ ಮೀನುಗಾರಿಕೆ ಋತುವಿಗೆ ಬಳಕೆಗೆ ಬರುವ ನಿರೀಕ್ಷೆ ಇದೆ. ಸಿದ್ಧಗೊಂಡ ಬಳಿಕ ದೊಡ್ಡ ಬಂದರು ಮಲ್ಪೆ ಅಥವಾ ಹೆಚ್ಚು ಬೋಟ್‌ಗಳು ಕಾರ್ಯಾಚರಿಸುವ ಮಂಗಳೂರಿನಲ್ಲಿದ್ದು, ತುರ್ತು ಕರೆ ವೇಳೆ ಧಾವಿಸಲಿದೆ.

ವಿದೇಶಗಳಲ್ಲಿ ಸಾಕಷ್ಟು ಸಮುದ್ರ ಆಂಬ್ಯುಲೆನ್ಸ್‌ಗಳು ಮೀನುಗಾರರ, ಪ್ರವಾಸಿಗರ ರಕ್ಷಣೆಗೆ ಕಾರ್ಯಾಚರಿಸುತ್ತಿವೆ. ಭಾರತವು ಮಾಲ್ಡೀವ್ಸ್ ಎರಡು ಸಮುದ್ರ ಆಂಬ್ಯುಲೆನ್ಸ್‌ಗಳನ್ನು 2023ರಲ್ಲಿ ನೀಡಿತ್ತು. ಕೇರಳ ರಾಜ್ಯದಲ್ಲಿ ಈಗಾಗಲೇ ಮೂರು ಸಮುದ್ರ ಆಂಬ್ಯುಲೆನ್ಸ್ ಕಾರ್ಯನಿರ್ವಹಿಸುತ್ತಿವೆ. ಕರ್ನಾಟಕದ ತಂಡವು ಅಲ್ಲಿಗೆ ಹೋಗಿ ಅಧ್ಯಯನ ನಡೆಸಿದ ಬಳಿಕ ರಾಜ್ಯದಲ್ಲೂ ಅದೇ ಮಾದರಿ ಹಾಗೂ ಹೊಸ ತಂತ್ರಜ್ಞಾನ ಬಳಸಿಕೊಂಡು ಆಂಬ್ಯುಲೆನ್ಸ್ ಸಿದ್ಧಪಡಿಸಲಿದೆ. ಜಿಪಿಎಸ್ ಮೂಲಕ ಸುಲಭವಾಗಿ ಬೋಟ್‌ಗಳ ಹುಡುಕಾಟ ವ್ಯವಸ್ಥೆ ಕೂಡ ಮಾಡಲಿದೆ.

ರಾಜ್ಯದ ಮೊದಲ ಸಮುದ್ರ ಆಂಬ್ಯುಲೆನ್ಸ್‌ಗೆ ಮುಂದಿನ ವಾರ ಕಾರ್ಯಾದೇಶ ನೀಡಲಿದ್ದು, 7.85 ಕೋಟಿ ರೂ. ಮೊತ್ತದಲ್ಲಿ 800 ಎಚ್‌ಪಿ ಎಂಜಿನ್ ಸಾಮರ್ಥ್ಯದ ಸರ್ವಸುಸಜ್ಜಿತ ಆಂಬ್ಯುಲೆನ್ಸ್ ಏಳು ತಿಂಗಳಲ್ಲಿ ಸಿದ್ಧಗೊಂಡು ಮುಂದಿನ ಮೀನುಗಾರಿಕೆ ಋತುವಿನಲ್ಲಿ ಕಾರ್ಯಾಚರಿಸುವ ನಿರೀಕ್ಷೆ ಇದೆ ಎಂದಿದ್ದಾರೆ ದಿನೇಶ್ ಕುಮಾರ್ ಕಳ್ಳೇರ್, ನಿರ್ದೇಶಕ ಮೀನುಗಾರಿಕೆ ಇಲಾಖೆ.




### ರಾಹುಲ್ ಉಪಕ್ರಮ

2023ರಲ್ಲಿ ರಾಜ್ಯ ವಿಧಾನಸಭಾ ಚುನಾವಣೆ ಪ್ರಚಾರದ ವೇಳೆ ಉಡುಪಿ ಜಿಲ್ಲೆಯ ಉಚ್ಚಿಲದಲ್ಲಿ ಮೀನುಗಾರರೊಂದಿಗೆ ಸಂವಾದ ನಡೆಸಿದ್ದ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ರಾಜ್ಯದ ಕರಾವಳಿಗೆ ಸಮುದ್ರ ಆಂಬ್ಯುಲೆನ್ಸ್ ಕೊಡುಗೆಯಾಗಿ ನೀಡಲಾಗುವುದು ಎಂದು ಭರವಸೆ ನೀಡಿದ್ದರು. ಮೀನುಗಾರ ಮಹಿಳೆಯೊಬ್ಬರ ಬೇಡಿಕೆಗೆ ರಾಹುಲ್ ತಕ್ಷಣ ಸ್ಪಂದಿಸಿ, ಅದನ್ನು ಮಾಡಲಾಗುವುದು ಎಂದು ಹೇಳಿದ್ದರು.

### ಬಜೆಟ್‌ನಲ್ಲಿ ಘೋಷಣೆ

2024-25ರ ಬಜೆಟ್‌ನಲ್ಲಿ ರಾಜ್ಯಕ್ಕೆ ಮೊದಲ ಸಮುದ್ರ ಆಂಬ್ಯುಲೆನ್ಸ್ ಸೇವೆ ಪರಿಚಯಿಸುವುದಾಗಿ ಸಿಎಂ ಸಿದ್ದರಾಮಯ್ಯ ಘೋಷಿಸಿದ್ದರು. ಚುನಾವಣಾ ಪ್ರಚಾರ ಸಮಯದಲ್ಲಿ ರಾಹುಲ್ ಗಾಂಧಿ ಮೀನುಗಾರ ಸಮುದಾಯಕ್ಕೆ ನೀಡಿದ ಭರವಸೆ ಈಡೇರಿಸುವ ನಿಟ್ಟಿನಲ್ಲಿ ಸಮುದ್ರ ಆಂಬ್ಯುಲೆನ್ಸ್ ಆರಂಭಿಸಲಿದ್ದೇವೆ ಎಂದು ಉಲ್ಲೇಖಿಸಿದ್ದರು.

# ಬಾಕಿ ವೇತನ ಪಾವತಿಸಲು ಆಗ್ರಹಿಸಿ ಪ್ರತಿಭಟನೆ

## ಕಾರಟಗಿ ತಾ. ಪಂ ಕಛೇರಿಯ ಆವರಣದಲ್ಲಿ ನರೇಗಾ ನೌಕರರ ಅಸಹಕಾರ

• ಉದಯವಾಹಿನಿ ಕಾರಟಗಿ

ಬಾಕಿ 6 ತಿಂಗಳ ವೇತನ ಪಾವತಿ, ನರೇಗಾ ಎಲ್ಲಾ ನೌಕರರಿಗೆ ಸೇವಾ ಭದ್ರತೆ, ಆರೋಗ್ಯ ವಿಮೆ ಸೇರಿ ಇನ್ನಿತರ ಬೇಡಿಕೆಗಳಿಗೆ ಒತ್ತಾಯಿಸಿ ನರೇಗಾ ನೌಕರರ ಕ್ಷೇಮಾಭಿವೃದ್ಧಿ ಸಂಘ, ಬೇರ್ ಫೂಟ್ ಟೆಕ್ನಿಷಿಯನ್ ಸಂಘದಿಂದ ತಾ.ಪಂ ಕಛೇರಿ ಆವರಣದಲ್ಲಿ ಮಂಗಳವಾರದಂದು ಅನಿರ್ಧಿಷ್ಟಾವದಿ ಅಸಹಕಾರ ಚಳುವಳಿ ಪ್ರತಿಭಟನೆ ನಡೆಸಲಾಯಿತು. ನರೇಗಾ ನೌಕರರ ಕ್ಷೇಮಾಭಿವೃದ್ಧಿ ಸಂಘದ ತಾಲ್ಲೂಕು ಘಟಕದ ಪದಾಧಿಕಾರಿಗಳಾದ ತಾಂತ್ರಿಕ ಸಂಯೋಜಕ ವಿಶ್ವನಾಥ ಜಿನ್ನೂರು ಅವರು ಮಾತನಾಡಿ ಉದ್ಯೋಗ ಖಾತರಿ ಯೋಜನೆಯಡಿ ಕಾರ್ಯ ನಿರ್ವಹಿಸುತ್ತಿರುವ ನೌಕರರಿಗೆ 06 ತಿಂಗಳಿಂದ ವೇತನ ಪಾವತಿಯಾಗಿಲ್ಲ, ಇದರಿಂದ ಎಲ್ಲಾ ನೌಕರರು ತೀವ್ರ ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುತ್ತಾರೆ. ಕುಟುಂಬ ನಿರ್ವಹಣೆ, ದಿನಸಿ ಖರೀದಿ, ಮಕ್ಕಳ ಶಾಲಾ ಪ್ರವೇಶಾತಿ, ಕುಟುಂಬ ಸದಸ್ಯರ ವೈದ್ಯಕೀಯ ವೆಚ್ಚಗಳು, ಪ್ರಯಾಣ ವೆಚ್ಚಗಳು, ಸಾಲಗಳ ಮರುಪಾವತಿ, ಇ.ಎಂ.ಐ. ಸೇರಿ ಅನೇಕ ರೀತಿಯ ಖರ್ಚುವೆಚ್ಚಗಳನ್ನು ನಿಭಾಯಿಸಲು ತೀವ್ರ ತೊಂದರೆಯುಂಟಾಗುತ್ತಿದ್ದು, ತ್ವರಿತವಾಗಿ ವೇತನ ಪಾವತಿಸಲು ವಿಫಲವಾಗಿದೆ ತ್ವರಿತವಾಗಿ ಮುಂದಾಗಬೇಕು ಎಂದರು.

ಈ ವೇಳೆ ನರೇಗಾ ನೌಕರರ ಕ್ಷೇಮಾಭಿವೃದ್ಧಿ ಸಂಘ ತಾಲ್ಲೂಕು ಘಟಕದ ಸದಸ್ಯರಾದ ಅಭಿಷೇಕ್ , ಚೇತನ್, ಶರಣಬಸವ, ಯೋಗೇಶ್, ವಿರೂಪಾಕ್ಷ, ನೂರುಪಾಷ, ಅನಿತಾ, ಜಯಶ್ರೀ, ಬೇರ್ ಫೂಟ್ ಟೆಕ್ನಿಷಿಯನ್ ಸಂಘದ ಸದಸ್ಯರಾದ ಅನಿಲ್ ಕುಮಾರ್, ಸೋಮನಾಥ, ಇಮಾಂಬಿ, ವಿರೇಶ್, ಮುದುಕಪ್ಪ, ಯಮನೂರು, ಕಾಶೀನಾಥ್, ಬಸವರಾಜ್ ಸೇರಿದಂತೆ ಇತರರಿದ್ದರು.



ಉದಯವಾಹಿನಿ ಚಿತ್ರ

> ಈಗಾಗಲೇ ಬೇಡಿಕೆಗಳ ಈಡೇರಿಕೆಗಾಗಿ ಜು.7 ರಿಂದ ರಾಜ್ಯದ್ಯಂತ ನೌಕರರು ಅಸಹಕಾರ ಚಳುವಳಿ ಮಾಡುತ್ತಿದ್ದು, ಕೂಡಲೇ ಬಾಕಿ ವೇತನ ಪಾವತಿಸಿ ಎಲ್ಲ ಬೇಡಿಕೆಗಳನ್ನು ಈಡೇರಿಸಬೇಕು. ನೌಕರರಿಗೆ ಸೇವಾ ಭದ್ರತೆ, ಆರೋಗ್ಯ ವಿಮೆ ಹಾಗೂ ಬಾಕಿ 6 ತಿಂಗಳ ವೇತನ ಪಾವತಿ ಆಗುವವರೆಗೂ ಅಸಹಕಾರ ಚಳುವಳಿ ಮಾಡುತ್ತೇವೆ.
>
> -ಸೋಮನಾಥ ಗೌಡರ್, ತಾ.ಪಂ ಐಇಸಿ ಸಂಯೋಜಕ

## ದಾನ ಮಾಡುವದು ಪ್ರೀತಿ ಕಾಳಜಿಗಾಗಿ, ಪ್ರಚಾರಕ್ಕಲ್ಲ

• ಉದಯವಾಹಿನಿ ಕಲಬುರಗಿ

ದಾನದ ಸಂತೋಷವು ಇತರರಿಗೆ ದಾನ ಮಾಡುವುದರಿಂದ ದೊರೆಯುವ ಅತ್ಯಂತ ದೊಡ್ಡ ಪ್ರಯೋಜನವಾಗಿದೆ ಎಂದು ಉದ್ಯಮಿ ಡಾ. ಹರಿಪ್ರಸಾದ್ ಬಿ. ಸೋಮಾನಿ ಅವರು ಹೇಳಿದರು.

ಅವರು ಕೆಕೆಸಿಸಿಐ ಸಭಾಂಗಣದಲ್ಲಿ ಆರ್ಟ್ ಆಫ್ ಗಿವ್ವಿಂಗ್ ವಿಷಯ ಕುರಿತಾಗಿ ಶ್ರೀರಾಮಚಂದ್ರ ಲಾಹೋಟಿ ಸ್ಮಾರಕ ಉಪನ್ಯಾಸ ನೀಡಿದರು. ದಾನ ಮಾಡಲು ಭೌತಿಕವಾಗಿ ಶ್ರೀಮಂತರಾಗಿರಬೇಕಾಗಿಲ್ಲ ದಾನ ಮಾಡಲು ವಿಶಾಲ ಹೃದಯವಿರಬೇಕು.

ಪ್ರಚಾರಕ್ಕಾಗಿ ಅಲ್ಲ, ಪ್ರೀತಿ ಮತ್ತು ಕಾಳಜಿಯಿಂದ ನೀಡಬೇಕು.ದಾನ ಎಂದರೆ ಕೇವಲ ಹಣವನ್ನು ನೀಡುವುದಲ್ಲ, ಇತರರಿಗೆ ಹೆಚ್ಚು ಅಗತ್ಯವಿರುವುದನ್ನು ನೀಡುವುದು ನಿಜವಾದ ಉಡುಗೊರೆ ಹಸಿದವರಿಗೆ ಆಹಾರ ನೀಡುವುದು, ನಿರುದ್ಯೋಗಿಗಳಿಗೆ ಕೆಲಸ ನೀಡುವುದು, ಮುಗ್ಧರಿಗೆ ಜ್ಞಾನ ನೀಡುವುದು, ಶಿಕ್ಷಣ ಅಥವಾ ಅನಕ್ಷರಸ್ಥರಿಗೆ, ರೋಗಿಗೆ ಔಷಧ ನೀಡುವುದು, ದುಃಖಿತರಿಗೆ ಸಾಂತ್ವನ ನೀಡುವುದು, ಖಿನ್ನತೆಗೆ ಒಳಗಾದವರಿಗೆ ಪ್ರೋತ್ಸಾಹ ನೀಡುವುದು. ಸಮಯಕ್ಕೆ ಸರಿಯಾಗಿ ದಾನ ಮಾಡುವುದು ಸಹ ಅತ್ಯಗತ್ಯ ಯಾರಿಗಾದರೂ ಅಗತ್ಯವಿದ್ದಾಗ ದಾನ ಮಾಡುವ ಅವಕಾಶವನ್ನು ಕಳೆದುಕೊಳ್ಳಬಾರದು. ಅವರು ಕೆಲವು ನಿಜ ಜೀವನದ ಕಥೆಗಳನ್ನು ಮತ್ತು ನಮ್ಮ ಜೀವನದುದ್ದಕ್ಕೂ ನಾವು ಒಯ್ಯುವ ಒಳ್ಳೆಯ ಕಾರ್ಯಗಳು ಮಾತ್ರ ಎಂದು ಸುಬ್ಬಾಶಿತರು ಹೇಗೆ ಎತ್ತಿ ತೋರಿಸುತ್ತಾರೆ ಎಂಬುದನ್ನು ವಿವರಿಸಿದರು. ಕಾರ್ಯಕ್ರಮವನ್ನು ಸಾರ್ವಜನಿಕರು ಚೆನ್ನಾಗಿ ಸ್ವೀಕರಿಸಿದರು ಮತ್ತು ನಿಂತು ಚಪ್ಪಾಳೆ ಮೂಲಕ ತಮ್ಮ ಮೆಚ್ಚುಗೆ ಮತ್ತು ಕೃತಜ್ಞತೆಯನ್ನು ವ್ಯಕ್ತಪಡಿಸಿದರು.




ಉದಯವಾಹಿನಿ ಚಿತ್ರ

## ಇನ್‌ಸ್ಟಾದಲ್ಲಿ ಪರಿಚಯಿಸಿಕೊಂಡು ಅತ್ಯಾಚಾರ: 20 ವರ್ಷ ಜೈಲು

• ಉದಯವಾಹಿನಿ ಕೊಪ್ಪಳ

ಬಾಲಕಿ ಮೇಲೆ ಅತ್ಯಾಚಾರ ಎಸಗಿದ ತುಮಕೂರು ಜಿಲ್ಲೆ ಬೀರನಕಲ್ ಗ್ರಾಮದ ರಮೇಶ ಎಂ. ಎಂಬಾತನಿಗೆ ಇಲ್ಲಿನ ಹೆಚ್ಚುವರಿ ಜಿಲ್ಲಾ ಹಾಗೂ ಸಷನ್ಸ್ ನ್ಯಾಯಾಲಯವು 20 ವರ್ಷ ಜೈಲು ಹಾಗೂ 25 ಸಾವಿರ ದಂಡ ವಿಧಿಸಿದೆ. ನ್ಯಾಯಾಧೀಶರಾದ ಕುಮಾರ ಡಿ.ಕೆ. ಅವರು ಈ ಆದೇಶ ನೀಡಿದ್ದಾರೆ. ರಮೇಶ ಇನ್‌ಸ್ಟಾಗ್ರಾಮ್ ಮೂಲಕ ಬಾಲಕಿಯನ್ನು ಪರಿಚಯಿಸಿಕೊಂಡು ಮೇಲಿಂದ ಮೇಲೆ ಫೋನ್‌ನಲ್ಲಿ ಮಾತನಾಡಿ ಸಲುಗೆ ಬೆಳೆಸಿಕೊಂಡಿದ್ದ. 2023ರ ಅಕ್ಟೋಬರ್‌ನಲ್ಲಿ ಬಾಲಕಿಯ ತಾಯಿ ಕೆಲಸಕ್ಕೆ ಹೋಗಿದ್ದಾಗ ರಮೇಶ ನಗರದ ಬಾಲಕಿ ಮನೆಗೆ ತೆರಳಿ ನಾವಿಬ್ಬರೂ ಮದುವೆಯಾಗೋಣ ಎಂದು ನಂಬಿಸಿದ್ದಾನೆ. ಬಳಿಕ ಮನೆಯಲ್ಲಿಯೇ ಅತ್ಯಾಚಾರ ಎಸಗಿದ್ದಾನೆ ಎಂದು ಇಲ್ಲಿನ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಮಹಿಳಾ ಠಾಣೆಯ ಈಗಿನ ಪೊಲೀಸ್ ಇನ್‌ಸ್ಪೆಕ್ಟರ್ ಆಂಜನೇಯ ಡಿ.ಎಸ್. ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು. ಸರ್ಕಾರದ ಪರವಾಗಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಗೌರಮ್ಮ ದೇಸಾಯಿ ವಾದ ಮಂಡಿಸಿದ್ದರು.

## ಮಳೆಗಾಗಿ ಕೆರೆಯಲ್ಲಿ ಗಂಗಾಪೂಜೆ: ಮೌನವ್ರತಾಚರಣೆ

• ಉದಯವಾಹಿನಿ ನರೇಗಲ್

ಆರಂಭದಲ್ಲಿ ಅಬ್ಬರಿಸಿ ನಂತರ ಕೈಕೊಟ್ಟ ಮುಂಗಾರು ಮಳೆಯಿಂದಾಗಿ ಕೆಲವು ಹೊಲಗಳಲ್ಲಿ ಹೆಸರು ನೆಲಬಿಟ್ಟು ಮೇಲಕ್ಕೆ ಬಂದಿಲ್ಲ. ತೇವಾಂಶ ಕೊರತೆಯಿಂದ ಬಾಡುವ ಹಂತಕ್ಕೆ ತಲುಪಿವೆ. ರೈತರು ಮುಗಿಲು ನೋಡುತ್ತಾ ಪ್ರತಿದಿನ ಮಳೆಗಾಗಿ ಕಾಯುತ್ತಿದ್ದಾರೆ.

ಈ ಹಿನ್ನಲೆಯಲ್ಲಿ ನರೇಗಲ್ ಪಟ್ಟಣದ ಕೃಷಿಕರ ಮನೆಯ ಮಹಿಳೆಯರು ಮಳೆಗಾಗಿ ಮೌನವ್ರತ ಆಚರಣೆಗೆ ಮುಂದಾಗಿದ್ದಾರೆ. ಪ್ರತಿದಿನ ನಸುಕಿನ ವೇಳೆ ಐದು ಗಂಟೆಗೆ ಎದ್ದು ಸ್ನಾನ ಮಾಡಿ, ವಿವಿಧ ವಿಧಿವಿಧಾನಗಳನ್ನು ಅನುಸರಿಸಿ ಪೂಜೆ ಮಾಡಿ ನಂತರ ವರುಣ ದೇವನಿಗೆ ವಿಶೇಷ ರೀತಿಯಲ್ಲಿ ಪ್ರಾರ್ಥಿಸುತ್ತಿದ್ದಾರೆ.

ನರೇಗಲ್ ಪಟ್ಟಣದ ಹಿರೇಮಠ ಓಣಿಯ ಮಹಿಳೆಯರು ಮೌನದಲ್ಲಿ ಸಮೀಪದ ಹಿರೇಕೆರೆಗೆ ಹೋಗಿ ಗಂಗಾ ಪೂಜೆ ಮಾಡುತ್ತಾರೆ. ನಂತರ ಅವರು ತಮ್ಮೊಂದಿಗೆ ತೆಗೆದುಕೊಂಡು ಹೋದ ಕೊಡದಲ್ಲಿ ಕೆರೆಯ ನೀರು ತುಂಬಿಕೊಂಡು, ತಲೆಯ ಮೇಲೆ ಹೊತ್ತು ತರುತ್ತಾರೆ. ಆ ನೀರನ್ನು ಮಲ್ಲಯ್ಯಜ್ಜನ ಗುಡಿಯ ಬರಮ ದೇವರ ಮೂರ್ತಿಗೆ ಹಾಕುತ್ತಾರೆ.

ನಂತರ ಉತ್ತಮ ಮಳೆ, ಸಮೃದ್ಧಿ ಬೆಳೆಗಾಗಿ ದೇವರಲ್ಲಿ ಪ್ರಾರ್ಥಿಸುತ್ತಾರೆ. ಈ ಆಚರಣೆಯು ಸೂರ್ಯೋದಯದ ಮೊದಲು ಅಂದರೆ ಜನರು ಎದ್ದು ಮನೆಯಿಂದ ಹೊರಗಡೆ ಬರುವ ಮೊದಲೇ ಮುಗಿದಿರುತ್ತದೆ. ಹೀಗೆ ನಿರಂತರವಾಗಿ ಐದು ದಿನಗಳ ವಿಶೇಷ ಆಚರಣೆ ನಡೆಯುತ್ತದೆ.

## ಅನುದಾನ ನೀಡಲು ಲಂಚದ ಬೇಡಿಕೆ ಇಟ್ಟ ಸಚಿವ ತಂಗಡಿಗಿ ರಾಜೀನಾಮೆಗೆ ವೈ ಎಂ.ಸತೀಶ್ ಆಗ್ರಹ

• ಉದಯವಾಹಿನಿ ಬಳ್ಳಾರಿ

ಮಠಗಳಿಗೆ ಮಂಜೂರು ಮಾಡಿದ ಹಣ ಬಿಡುಗಡೆಗೆ ಶೆ 20-25 ರಷ್ಟು ಲಂಚ ಕೇಳುವ ಸಚಿವ ಶಿವರಾಜ್ ತಂಗಡಿಗಿ ರಾಜೀನಾಮೆ ನೀಡಬೇಕೆಂದುವಿಧಾನ ಪರಿಷತ್ ಸದಸ್ಯ ವೈ.ಎಂ.ಸತೀಶ್ ಆಗ್ರಹಿಸಿದ್ದಾರೆ. ಇಂದು ನಗರದಲ್ಲಿನ ಬಿಜೆಪಿ ಜಿಲ್ಲಾ ಕಚೇರಿಯಲ್ಲಿ ಸುದ್ದಿಗೋಷ್ಟಿ ನಡೆಸಿದ ಅವರು. ಮಾ. 26 ರಂದು ನ್ಯಾ. ನಾಗಪ್ರಸನ್ನ ವಿಶ್ವ ಗಾಣಿಗರ ಟ್ರಸ್ಟ್ ನ ಅಭಿವೃದ್ಧಿಗೆ 2022 ರಲ್ಲಿ

ಮೂರುವರೆ ಕೋಟಿ ರೂ. ಗಳ ಅನುದಾನವನ್ನು ಅಂದಿನ ಸಿಎಂ ಬಸವರಾಜ ಬೊಮ್ಮಾಯಿ ಅವರು ಮಂಜೂರು ಮಾಡಿದ್ದರು ಇದಕ್ಕೆ ಹಣ ಕಾಸು ಇಲಾಖೆಯ ಅನುಮತಿ ಆಗಿತ್ತು. ಎರಡು ಕೋಟಿ ರೂ ಬಿಡುಗಡೆ ಮಾಡಿತ್ತು, ಉಳಿದ ಒಂದು ವರೆ ಕೋಟಿ ರೂ ಬಾಕಿ ಇತ್ತು. ಅದನ್ನು ಬಿಡುಗಡೆ ಮಾಡಲು ಕೇಳಿದರೆ ಸಚಿವರ ಕಡೆಯವರು ಲಂಚ ಕೇಳುತ್ತಾರೆಂದು ಬೆಂಗಳೂರಿನ ನೆಲಮಂಗಲದ ತೈಲೇಶ್ವರ ಗಾಣಿಗರ ಮಹಾ ಸಂಸ್ಥಾನ ಮಟದ ಪೂರ್ಣಾ ನಂದ ಪುರಿ ಶ್ರೀಗಳು ಆರೋಪ ಮಾಡಿದ್ದಾರೆ. ಈ ವಿಷಯದಲ್ಲಿ ನ್ಯಾಯಾಲಯದ ಮೊರೆ ಹೋದ ಶ್ರೀಗಳಿಗೆ ನಾ. ನಾಗಪ್ರಸನ್ನ ಅವರ ನ್ಯಾಯ ಪೀಠ ನಾಲ್ಕು ವಾರದಲ್ಲಿ ಹಣ ನೀಡಲು ಕಳೆದ ಮಾ. 22 ರಂದ ಆದೇಶ ಮಾಡಿತ್ತು.

ಅದರಂತೆ ಶ್ರೀಗಳು ಉಳಿದ ಹಣ ಬಿಡುಗಡೆ ಮಾಡಲು ಸರ್ಕಾರಕ್ಕೆ ಮನವಿ ಮಾಡಿದರೆ. ಸಚಿವ ಶಿವರಾಜ್ ತಂಗಡಿಗಿ ಅವರಿಗೆ ಶೇ 20 ರಿಂದ 25 ರಷ್ಟು ಕಮೀಷನ್ ನೀಡಬೇಕೆಂದು ಸಚಿವರ ಕಡೆಯವರು ಬೇಡಿಕೆ ನೀಡಿದ್ದರಂತೆ. ಈಗ ಇದು ರಾಜಕೀಯ ಬಣ್ಣ ಪಡೆಯುತ್ತಿದೆ. ತಂಗಡಿಯವರು ಕೇಳಿಲ್ಲ ಎಂದು ಹೇಳುತ್ತಾರೆ.

ನ್ಯಾಯಾಲಯದ ಆದೇಶವನ್ನಾದರೂ ಪಾಲಿಸಿ ಹಣ ಬಿಡುಗಡೆ ಮಾಡಲಿ. ಇಲ್ಲ ಆರೋಪ ಮುಕ್ತರಾಗುವವರೆಗೆ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಲು ಆಗ್ರಹಿಸಿದರು. ಪಕ್ಷದ ಜಿಲ್ಲಾ ಅಧ್ಯಕ್ಷ ಅನಿಲ್ ನಾಯ್ಡು ಮಾತನಾಡಿ, ಸರ್ಕಾರದ ಬಳಿ ಹಣ ಇಲ್ಲ. ಅದಕ್ಕಾಗಿ ಪಡಿತರ ಸಾಗಾಣೆಯ ಲಾರಿಗಳಿಗೆ ಬಾಕಿ ಹಣ ನೀಡದ ಕಾರಣ 32 ಲಾರಿಗಳು ಬಳ್ಳಾರಿಯಲ್ಲಿ ನಿಂತಿವೆ. ಹಿಗಾದರೆ ಬಡವರಿಗೆ ಪಡಿತರ ದೊರೆಯುವುದು ಹೇಗೆ ಎಂದು ಪ್ರಶ್ನಿಸಿದರು. ಅಭಿವೃದ್ಧಿಗೆ ಹಣ ಇಲ್ಲ ಎಂಬುದನ್ನು ಸಿಎಂ ಸಿದ್ದರಾಮಯ್ಯ, ಬಸವರಾಜ ರಾಯರೆಡ್ಡಿ ಮೂಲಕ ಹೇಳಿಸಿದ್ದಾರೆಂದರು.

ಪರಿಸರ ಮಾಲಿನ್ಯಕ್ಕೆ ಕಾರಣವಾಗಿರುವ ನಗರದ ಜೀನ್ಸ್ ವಾಸಿಂಗ್ ಪ್ಲಾಂಟ್‌ಗಳನ್ನು ಬಂದ್ ಮಾಡುವುದು ಸರಿಯಲ್ಲ. ವಾಟರ್ ಟ್ರೀಟ್ ಮೆಂಟ್ ಪ್ಲಾಂಟ್ ಹಾಕಲು ಡಿಎಂಎಫ್‌ನಿಂದ ಹಣ ನೀಡಲಿ ಇಲ್ಲದಿದ್ದರೆ ಜೀನ್ಸ್ ಉದ್ಯಮದ ಕಾರ್ಮಿಕರು ಬೀದಿಗೆ ಬೀಳುತ್ತಾರೆಂದರು.



ಉದಯವಾಹಿನಿ ಚಿತ್ರ

> **ನಗರದಲ್ಲೂ ಹಣ ಬಿಡಗಡೆ ಆಗಿಲ್ಲ**
>
> ನಗರದ ಮಾಜಿ ಶಾಸಕ ಗಾಲಿ ಸೋಮಶೇಖರ ರೆಡ್ಡಿ ಮಾತನಾಡಿ, ನಗರದ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿ ವಿವಿಗೆ ಒಂದು ವರೆ ಕೋಟಿ ರೂ, ಗವಿಯಪ್ಪ ಸರ್ಕಲ್ ನಲ್ಲಿನ ಶ್ರೀರಾಮ ದೇವರ ಮಂದಿರಕ್ಕೆ 50 ಲಕ್ಷ ರೂ ಮಂಜೂರು ಮಾಡಿತ್ತು. ಅದರಲ್ಲಿ ಅರ್ಧ ಹಣ ಬಿಡುಗಡೆ ಮಾಡಿತ್ತು. ಉಳಿದ ಹಣವನ್ನು ಎರಡು ವರ್ಷಗಳಾದರೂ ಈ ಸರ್ಕಾರ ಹಣ ಬಿಡುಗಡೆ ಮಾಡಿಲ್ಲ. ಆದರೆ ಶಾಸಕ ಭರತ್ ರೆಡ್ಡಿ, ದೇವಸ್ಥಾನಗಳಿಗೆ ಐದು ಕೋಟಿ ರೂ ನೀಡಿದೆಂದು ಸನ್ಮಾನ ಮಾಡಿಸಿಕೊಂಡಿದ್ದಾರೆ. ಐದು ಕೋಟಿ ರೂ ಯಾವ ಯಾವ ದೇವಸ್ಥಾನಕ್ಕೆ ನೀಡಿದೆ ಅವರು ಸ್ಪಷ್ಟನೆ ನೀಡಲಿ ಎಂದು ಒತ್ತಾಯಿಸಿದರು.

• ಮಳೆ ಕೊರತೆಯ ಕಾರಣದಿಂದಾಗಿ 20 ಹೋಬಳಿಗಳಲ್ಲಿ ಕೃಷಿ ಚಟುವಟಿಕೆ ಮೇಲೆ ಪರಿಣಾಮ ಬೀರಲಿದೆ

# ಹಾಸನದಲ್ಲಿ ಒಂದೆಡೆ ವಾಡಿಕೆಗೂ ಅಧಿಕ ಮಳೆ ಮತ್ತೊಂದೆಡೆ ಕೊರತೆ

• ಉದಯವಾಹಿನಿ ಹಾಸನ

ಈ ಬಾರಿ ಜಿಲ್ಲಾದ್ಯಂತ ವಾಡಿಕೆಗೂ ಮೀರಿದ ಮಳೆ ಸುರಿದಿದೆ. ಆದರೆ ಒಂದೆಡೆ ಹೆಚ್ಚು ಮಳೆಯಾಗಿದ್ದರೆ, ಮತ್ತೊಂದೆಡೆ ಮಳೆ ಕೊರತೆ ಕಂಡು ಬಂದಿದೆ.


ಸಕಲೇಶಪುರ, ಆಲೂರು, ಬೇಲೂರು ತಾಲ್ಲೂಕಿನಲ್ಲಿ ಅತ್ಯಧಿಕ ಮಳೆಯಾಗಿದ್ದರೆ, ಅರಸೀಕೆರೆ, ಹಾಸನ, ಚನ್ನರಾಯಪಟ್ಟಣ , ಅರಕಲಗೂಡು ತಾಲ್ಲೂಕುಗಳು ಮಳೆ ಕೊರತೆ ಎದುರಿಸುತ್ತಿವೆ. ನಿರೀಕ್ಷಿತ ಮಳೆ ಬಾರದೆ ಬೆಳೆಗೆ ಹಾನಿಯಾಗುತ್ತಿದೆ ಎಂಬ ಆತಂಕಕಾರಿ ಸಂಗತಿಯನ್ನು ಕೃಷಿ ಇಲಾಖೆ ಹೊರ ಹಾಕಿದೆ.

ಜಿಲ್ಲೆಯಲ್ಲಿ 2025 ರ ಜನವರಿ ಯಿಂದ ಈವರೆಗೂ ವಾಡಿಕೆಯಂತೆ 664.30 ಮಿ.ಮೀ ಮಳೆಗೆ ಬದಲಾಗಿ 1879.90 ಮಿ.ಮೀ. ಮಳೆಯಾಗಿದೆ. ಆ ಮೂಲಕ ಶೇ.182ರಷ್ಟು ಹೆಚ್ಚುವರಿ ಮಳೆಯಾಗಿದೆ. ಅದು ಮಲೆನಾಡು ಪ್ರದೇಶ ವಾದ ಸಕಲೇಶಪುರ, ಆಲೂರು, ಬೇಲೂರು ತಾಲ್ಲೂಕಿನ ಮಳೆಯ ಪ್ರಮಾಣವಷ್ಟೇ ಎಂಬುದು ಗಮನಾರ್ಹ ಸಂಗತಿ.

ಜಿಲ್ಲಾವಾರು ವಿಂಗಡಿಸಿದಾಗ ಹೆಚ್ಚಿನ ಮಳೆಯಾಗಿದೆ ಎನ್ನಲಡ್ಡಿಯಿಲ್ಲವಾದರೂ, ತಾಲ್ಲೂಕುವಾರು ಮಳೆ ಪ್ರಮಾಣ ಅವಲೋಕಿಸಿದಾಗ ಅರಸೀಕೆರೆ ತಾಲ್ಲೂಕು ಶೇ.59ರಷ್ಟು ಮಳೆ ಕೊರತೆ ಎದುರಿಸಿದೆ.

ಚನ್ನರಾಯಪಟ್ಟಣ ತಾಲ್ಲೂಕು ಶೇ.35 ಹಾಗೂ ಹಾಸನ ಶೇ.27 ರಷ್ಟು ಕೊರತೆ ಎದುರಿಸಿದೆ. ಜೂನ್ ತಿಂಗಳಿನಲ್ಲಿ ಅರಸೀಕೆರೆ ತಾಲ್ಲೂಕು ಶೇ.59ರಷ್ಟು, ಅರಕಲಗೂಡು ಶೇ.24 ಮಳೆ ಕೊರತೆ ಎದುರಿಸಿದೆ'' ಎನ್ನುತ್ತಾರೆ ಕೃಷಿ ಇಲಾಖೆ ಜಂಟಿ ನಿರ್ದೇಶಕ ರಮೇಶ್ ಕುಮಾರ್.

ಅರಸೀಕೆರೆ ತಾಲ್ಲೂಕಿನ ಜಾವ್‌ಗಲ್ ಹಾಗೂ ಗಂಡಸಿ, ಹಾಸನ ತಾಲ್ಲೂಕಿನ ದುದ್ದ ಹೋಬಳಿ ಸೇರಿದಂತೆ ಜಿಲ್ಲೆಯ 20 ಹೋಬಳಿಗಳು ಶೇ.33ರಷ್ಟು ಮಳೆ ಕೊರತೆ ಎದುರಿಸಿವೆ. ಹೀಗಾಗಿ ಬಿತ್ತನೆ ಮಾಡಿರುವ ಬೆಳೆಗಳ ಮೇಲೂ ಪರಿಣಾಮ ಬೀರುತ್ತಿದೆ ಎಂದು ಕೃಷಿ ಅಧಿಕಾರಿಗಳು ಕಳವಳ ವ್ಯಕ್ತಪಡಿಸಿದ್ದಾರೆ.



ಉದಯವಾಹಿನಿ ಚಿತ್ರ

**ಬೆಳೆ ಹಾನಿ ಬಗ್ಗೆ ರೈತರ ಆತಂಕ,**

> **ಬಿಳಿಸುಳಿ ಬಾಧೆ-ಮಳೆ ಅಕ**
>
> ಒಂದೆಡೆ ಮುಸುಕಿನ ಜೋಳಕ್ಕೆ ಬಿಳಸುಳಿ ರೋಗ, ಮತ್ತೊಂದೆಡೆ ಮಳೆ ಕೊರತೆ ರೈತಾಪಿ ವರ್ಗವನ್ನು ಚಿಂತೆಗೀಡು ಮಾಡಿದೆ. ಸಕಲೇಶಪುರ, ಬೇಲೂರು, ಆಲೂರು ತಾಲ್ಲೂಕಿನಲ್ಲಿ ಅಕ ಮಳೆಯಿಂದ ಕೃಷಿ ಚಟುವಟಿಕೆ ಮಾಡದ ಸ್ಥಿತಿ ನಿರ್ಮಾಣವಾಗಿದೆ. ಕಾಫಿ ತೋಟದ ಕೆಲಸಕ್ಕೆ ಕಾರ್ಮಿಕರು ಬರುತ್ತಿಲ್ಲ. ಏಲಕ್ಕಿ, ಮೆಣಸಿಗೂ ಮಳೆ ಹಾನಿ ಮಾಡಿದೆ ಎನ್ನುತ್ತಾರೆ ಬೆಳೆಗಾರರು.

- ಹಾಸನ ಜಿಲ್ಲೆಯಲ್ಲಿ ಈ ಬಾರಿ ವಾಡಿಕೆಗೂ ಮೀರಿದ ಮಳೆ ಸುರಿದಿದ್ದು, ಸಕಲೇಶಪುರ, ಆಲೂರು, ಬೇಲೂರು ತಾಲ್ಲೂಕುಗಳಲ್ಲಿ ಹೆಚ್ಚು ಮಳೆಯಾಗಿದೆ.
- ಅರಸೀಕೆರೆ, ಹಾಸನ, ಚನ್ನರಾಯಪಟ್ಟಣ , ಅರಕಲಗೂಡು ತಾಲ್ಲೂಕುಗಳಲ್ಲಿ ಮಳೆ ಕೊರತೆಯನ್ನು ಕೃಷಿ ಇಲಾಖೆ ವರದಿ ಮಾಡಿದ್ದು, ಅರಸೀಕೆರೆ ತಾಲ್ಲೂಕಿನಲ್ಲಿ ಶೇ.59ರಷ್ಟು ಮಳೆ ಕೊರತೆಯಾಗಿದೆ.
- ಮಳೆ ಕೊರತೆಯ ಕಾರಣದಿಂದಾಗಿ 20 ಹೋಬಳಿಗಳಲ್ಲಿ ಕೃಷಿ ಚಟುವಟಿಕೆ ಮೇಲೆ ಪರಿಣಾಮ ಬೀರಲಿದೆ, ವಿಶೇಷವಾಗಿ ಕಾಫಿ ಮತ್ತು ಇತರ ಕೃಷಿ ಬೆಳೆಗಳಿಗೆ ಹಾನಿಯಾಗಿದೆ.

### 20 ಹೋಬಳಿಗಳಲ್ಲಿ ಕೊರತೆ

ಚನ್ನರಾಯಪಟ್ಟಣ ತಾಲ್ಲೂಕಿನ ಬಾಗೂರು ಶೇ.21, ದಂಡಿಗನಹಳ್ಳಿ ಹೋಬಳಿ ಶೇ.29, ಹಿರೀಸಾವೆ ಶೇ.30, ನುಗ್ಗೇಹಳ್ಳಿ ಶೇ.51, ಶ್ರವಣಬೆಳಗೊಳ ಹೋಬಳಿ ಶೇ.40ರಷ್ಟು ಮಳೆ ಕೊರತೆ ಎದುರಿಸಿದೆ. ಹಾಸನ ತಾಲ್ಲೂಕಿನ ದುದ್ದದಲ್ಲಿಶೇ.44ರಷ್ಟು ಮಳೆ ಕೊರತೆ ಇದೆ. ಅರಸೀಕೆರೆ ತಾಲ್ಲೂಕಿನ ಬಾಣಾವರ ಶೇ.62, ಗಂಡಸಿ ಶೇ. 51, ಜಾವ್‌ಗಲ್ ಹೋಬಳಿ ಶೇ.76ರಷ್ಟು ಮಳೆ ಕೊರತೆ ಇದೆ.

# ಬೇರೆ ನಟರಿಗಿಲ್ಲದ ಟೀಕೆ ನನಗೆ ಮಾತ್ರ

**ವಿಜಯ್ ದೇವರಕೊಂಡ ಬೇಸರಕ್ಕೆ ಏನು ಕಾರಣ**

ವಿಜಯ್ ದೇವರಕೊಂಡ ನಟನೆಯ 'ಕಿಂಗ್‌ಡಮ್' ಸಿನಿಮಾ ಕೆಲವೇ ದಿನಗಳಲ್ಲಿ ಬಿಡುಗಡೆ ಆಗಲಿದೆ. ಸಿನಿಮಾದ ಪ್ರಚಾರದಲ್ಲಿ ವಿಜಯ್ ದೇವರಕೊಂಡ ಭಾಗಿ ಆಗಿದ್ದಾರೆ. ಈ ಸಿನಿಮಾ ಅನ್ನಾದರೂ ಗೆಲ್ಲಿಸಿಕೊಳ್ಳಬೇಕು ಎಂಬ ಉಮೇದಿನಲ್ಲಿದ್ದಾರೆ.



ನಟ. ಇತ್ತೀಚೆಗೆ ನೀಡಿರುವ ಸಂದರ್ಶನದಲ್ಲಿ ವಿಜಯ್ ದೇವರಕೊಂಡ ತುಸು ಬೇಸರ ವ್ಯಕ್ತಪಡಿಸಿದ್ದಾರೆ. ನನಗೆ ಮಾತ್ರ ಅನ್ಯಾಯ ಮಾಡಲಾಗಿದೆ ಎಂದಿದ್ದಾರೆ. ವಿಜಯ್ ದೇವರಕೊಂಡ ತೆಲುಗು ಚಿತ್ರರಂಗದ 'ಫ್ಲಾಪ್ ಸ್ಟಾರ್' ಆಗಿದ್ದಾರೆ. ಅವರ ನಟನೆಯ ಸಿನಿಮಾ ಒಂದು ಹಿಟ್ ಆಗಿ ವರ್ಷಗಳೇ ಆಗಿವೆ. 'ಗೀತಾ ಗೋವಿಂದಂ' ಸಿನಿಮಾದ ಬಳಿಕ ವಿಜಯ್ ದೇವರಕೊಂಡ ನಾಯಕನಾಗಿ ನಟಿಸಿರುವ ಯಾವೊಂದು ಸಿನಿಮಾ ಸಹ ಹಿಟ್ ಆಗಿಲ್ಲ. ಇದೀಗ ಮತ್ತೊಂದು ಹೊಸ ಸಿನಿಮಾ ಮೂಲಕ ಪ್ರೇಕ್ಷಕರ ಮುಂದೆ ಬರುತ್ತಿದ್ದಾರೆ ವಿಜಯ್ ದೇವರಕೊಂಡ. ಅವರ ನಟನೆಯ 'ಕಿಂಗ್‌ಡಮ್' ಹೆಸರಿನ ಆಕ್ಷನ್ ಸಿನಿಮಾ ಕೆಲವೇ ದಿನಗಳಲ್ಲಿ ಬಿಡುಗಡೆ ಆಗಲಿದೆ. ಸಿನಿಮಾದ ಪ್ರಚಾರದ ಸಮಯದಲ್ಲಿ ವಿಜಯ್ ದೇವರಕೊಂಡ ಅಸಮಾಧಾನ ಒಂದನ್ನು ತೋಡಿಕೊಂಡಿದ್ದಾರೆ. ದಕ್ಷಿಣ ಭಾರತ ಚಿತ್ರರಂಗದಲ್ಲಿ ನಾಯಕ ನಟರುಗಳಿಗೆ ಒಂದಲ್ಲ ಒಂದು ವಿಶೇಷಣಗಳು ಅವರ ಹೆಸರಿನ ಮುಂದೆ ಸೇರಿಸಲಾಗುತ್ತದೆ. ಹ್ಯಾಟ್ರಿಕ್ ಹೀರೋ, ಮೆಗಾಸ್ಟಾರ್, ಸೂಪರ್ ಸ್ಟಾರ್ ಹೀಗೆ. ಅದರಂತೆ ನಟ ವಿಜಯ್ ದೇವರಕೊಂಡ ತಮ್ಮ ಹೆಸರಿನ ಮುಂದೆ 'ದಿ ವಿಜಯ್ ದೇವರಕೊಂಡ' ಎಂದು ಸೇರಿಸಿಕೊಂಡಿದ್ದರು. ಅಂದರೆ ಭಾರಿ ಪ್ರಮುಖ, ಶಕ್ತಿಶಾಲಿ, ಮಹಾನ್ ಎಂಬ ಭಾವವನ್ನು 'ದಿ' ನೀಡುತ್ತದೆ. ಆದರೆ ಈಗ ಬಿಡುಗಡೆ ಆಗಲಿರುವ 'ಕಿಂಗ್‌ಡಮ್' ಸಿನಿಮಾದ ಟೈಟಲ್ ಕಾರ್ಡ್‌ನಲ್ಲಿ ವಿಜಯ್ ದೇವರಕೊಂಡ ಅವರು ತಮ್ಮ ಹೆಸರಿನ ಮುಂದಿರುವ 'ದಿ' ಅನ್ನು ತೆಗೆದಿದ್ದಾರೆ. ಈ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರ ನೀಡಿರುವ ವಿಜಯ್ ದೇವರಕೊಂಡ, 'ಜನರಿಂದ ಭಾರಿ ಪ್ರಮಾಣದ ವಿರೋಧ, ಟೀಕೆ ವ್ಯಕ್ತವಾಯಿತು ಹಾಗಾಗಿ ನಾನು ನನ್ನ ಹೆಸರಿನ ಮುಂದೆ ಇದ್ದ 'ದಿ' ಅನ್ನು ತೆಗೆದಿದ್ದೇನೆ' ಎಂದಿದ್ದಾರೆ.



# ನಯನತಾರಾಗೆ ಐದು ಕೋಟಿ ಪರಿಹಾರಕ್ಕೆ ನೋಟೀಸ್

ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆ ಆಗಿದ್ದ ನಯನತಾರಾ ಡಾಕ್ಯುಮೆಂಟರಿ ವಿರುದ್ಧ ಈಗಾಗಲೇ ನಟ ಧನುಶ್ ನಿರ್ಮಾಣ ಸಂಸ್ಥೆ ಪ್ರಕರಣ ದಾಖಲಿಸಿದ್ದು, ಭಾರಿ ಮೊತ್ತದ ಹಣಕ್ಕೆ ಬೇಡಿಕೆ ಇಟ್ಟಿದೆ. ಇದೀಗ ಮತ್ತೊಂದು ನಿರ್ಮಾಣ ಸಂಸ್ಥೆ ಇದೇ ಡಾಕ್ಯುಮೆಂಟರಿ ವಿರುದ್ಧ ನೋಟೀಸ್ ಕಳಿಸಿದ್ದು, ಐದು ಕೋಟಿ ಹಣಕ್ಕೆ ಬೇಡಿಕೆ ಇಟ್ಟಿದೆ. ನಟಿ ನಯನತಾರಾ , ದಕ್ಷಿಣ ಭಾರತದ ಸ್ಟಾರ್ ನಟಿ. ಆದರೆ ನಯನತಾರಾ ಅವರ ಅತಿಯಾದ ಶಿಸ್ತು, ನಿಷ್ಠುರ ನುಡಿ-ನಡೆಗಳಿಂದಾಗಿ ಅವರನ್ನು ವಿರೋಧಿಸುವವರ ಸಂಖ್ಯೆಯೂ ಚಿತ್ರರಂಗದಲ್ಲಿ ಸಾಕಷ್ಟಿದೆ. ನಯನತಾರಾ, ನಿರ್ದೇಶಕ ವಿಘ್ನೇಷ್ ಅನ್ನು ವಿವಾಹವಾಗಿ ಇದೀಗ ಬಾಡಿಗೆ ತಾಯಿಯ ಮೂಲಕ ಇಬ್ಬರು ಮಕ್ಕಳನ್ನು ಸಹ ಪಡೆದಿದ್ದಾರೆ. ಕೆಲ ತಿಂಗಳ ಹಿಂದಷ್ಟೆ ನಯನತಾರಾ ಅವರ ಜೀವನದ ಬಗ್ಗೆ ಡಾಕ್ಯುಮೆಂಟರಿಯೊಂದು ನೆಟ್‌ಫ್ಲಿಕ್ಸ್‌ನಲ್ಲಿ ಬಿಡುಗಡೆ ಆಗಿತ್ತು. ಅದರ ಹಿಂದೆಯೇ ಸಾಕಷ್ಟು ವಿವಾದವನ್ನು ಸಹ ಇದು ಆಕರ್ಷಿಸಿತ್ತು. ನಯನತಾರಾ ಅವರು, ಧನುಶ್ ನಿರ್ಮಾಣ ಮಾಡಿದ್ದ 'ನಾನುಂ ರೌಡಿ ದಾ' ಸಿನಿಮಾದ ಕೆಲ ದೃಶ್ಯಗಳನ್ನು ಡಾಕ್ಯುಮೆಂಟರಿಯಲ್ಲಿ ಬಳಸಿಕೊಳ್ಳಲಾಗಿತ್ತು. ಇದೇ ಸಿನಿಮಾದ ಶೂಟಿಂಗ್ ಸಮಯದಲ್ಲಿ ನಯನತಾರಾ ಹಾಗೂ ವಿಘ್ನೇಷ್ ಶಿವನ್ ನಡುವೆ ಪ್ರೀತಿ ಮೂಡಿತ್ತು. ಹಾಗಾಗಿ ಸಿನಿಮಾದ ಶೂಟಿಂಗ್ ವೇಳೆಯ ಕೆಲ ದೃಶ್ಯಗಳನ್ನು ನಯನತಾರಾ ಡಾಕ್ಯುಮೆಂಟರಿಯಲ್ಲಿ ಬಳಸಿಕೊಳ್ಳಲಾಗಿತ್ತು. ಇದಕ್ಕೆ ಆಕ್ಷೇಪಿಸಿ ನಟ ಧನುಶ್ ಅವರ ನಿರ್ಮಾಣ ಸಂಸ್ಥೆಯಿಂದ ನಯನತಾರಾ ಡಾಕ್ಯುಮೆಂಟರಿ ನಿರ್ಮಾಣ ಹಾಗೂ ನಿರ್ದೇಶನ ಮಾಡಿದವರ ವಿರುದ್ಧ ದೂರು ದಾಖಲಾಗಿದ್ದಲ್ಲದೆ ಭಾರಿ ಮೊತ್ತದ ಪರಿಹಾರಕ್ಕೆ ಬೇಡಿಕೆ ಇಡಲಾಗಿತ್ತು.

# ಕಾಂತಾರ ಪ್ರೀಕ್ವೆಲ್ ಯಶಸ್ಸಿಗಾಗಿ ರಿಷಬ್ ಶೆಟ್ಟಿ ಸ್ನೇಹಿತರಿಂದ ವಿಶೇಷ ಪೂಜೆ



**ಪಟಾಕಿ ಸಿಡಿಸಿ ಸಂಭ್ರಮ**

ಕಾಂತಾರ ಪ್ರೀಕ್ವೆಲ್‌ನ ಯಶಸ್ಸು ಹಾಗೂ ನಟ ನಿರ್ದೇಶಕ ರಿಷಬ್ ಶೆಟ್ಟಿ ಶ್ರೇಯಸ್ಸಿಗಾಗಿ ಗೆಳೆಯರು ಅಭಿಮಾನಿಗಳು ಪ್ರಾರ್ಥಿಸಿದ್ದಾರೆ. ರಿಷಬ್ ಶೆಟ್ಟಿ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಕುಂಭಾಸಿ ಆನೆಗುಡ್ಡೆ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿದ್ದಾರೆ. 108 ತೆಂಗಿನಕಾಯಿ ಒಡೆದು ಪ್ರಾರ್ಥಿಸಿದ್ದಾರೆ. ಬಳಿಕ ತಮ್ಮ ಕಾರುಗಳಲ್ಲಿ ಕುಂದಾಪುರದ ಪ್ರಮುಖ ಮಾರ್ಗದಲ್ಲಿ ಶುಭ ಹಾರೈಕೆ ಬ್ಯಾನರ್‌ನೊಂದಿಗೆ ಸಂಚರಿಸಿ ಶಾಸ್ತ್ರಿ ಸರ್ಕಲ್ ಬಳಿ ಪಟಾಕಿ ಸಿಡಿಸಿ ಸಂಭ್ರಮಿಸಿದ್ದಾರೆ. ಯುವ ಮೆರಿಡಿಯನ್ ರೆಸಾರ್ಟ್ ಒಳಗೆ ತಂಗಿರುವ ರಿಷಬ್ ಶೆಟ್ಟಿಯನ್ನು ಭೇಟಿಯಾಗಿ ಶುಭ ಹಾರೈಸಿದ್ದಾರೆ. ರಿಷಬ್ ಶೆಟ್ಟಿ ದಂಪತಿ ಸ್ಟುಡಿಯೋದಿಂದ ಹೊರಬಂದು ಅಭಿಮಾನಿಗಳ ಜೊತೆ ಕೆಲ ಹೊತ್ತು ಕಳೆದಿದ್ದಾರೆ. ಈ ವಿಡಿಯೋವನ್ನು ಆಪ್ತರು ರಿಲೀಸ್ ಮಾಡಿದ್ದಾರೆ. ಇದಕ್ಕೂ ಮೊದಲು ಹೊಂಬಾಳೆಯ ವಿಜಯ್ ಕಿರಗಂದೂರ್, ಮಾಜಿ ಸಂಸದ ಪ್ರತಾಪ್ ಸಿಂಹ, ಬಾಲ್ಯದ ಗೆಳೆಯರು, ಚಿತ್ರತಂಡದವರು ಡಿವೈನ್ ಸ್ಟಾರ್ ಹುಟ್ಟುಹಬ್ಬದಲ್ಲಿ ಭಾಗಿಯಾದರು. ಕುಟುಂಬದ ಜೊತೆಗಿದ್ದ ರಿಷಬ್ ಸಾರ್ವಜನಿಕವಾಗಿ ಕಾಣಿಸಿಕೊಳ್ಳಲು ಬಯಸಿಲ್ಲ.

# ರಾಜಮೌಳಿ ಸಿನಿಮಾ ರಿಜೆಕ್ಟ್ ಮಾಡಿದ ವಿಕ್ರಂ

ಎಸ್‌ಎಸ್ ರಾಜಮೌಳಿ ಹಾಗೂ ಮಹೇಶ್‌ಬಾಬು ಕಾಂಬಿನೇಷನ್‌ನ ಎಸ್‌ಎಸ್‌ಎಂಬಿ29 ಸಿನಿಮಾದ ಪ್ರೀ ಪ್ರೊಡಕ್ಷನ್ ಕೆಲಸವು ಭರ್ಜರಿಯಾಗಿ ಸಾಗಿವೆ. ಸಿನಿಮಾಗೆ ಪಾತ್ರಗಳ ಆಯ್ಕೆ ಕೂಡಾ ಅಷ್ಟೇ ಬಿರುಸಿನಿಂದ ಸಾಗಿದೆ. ಮಹೇಶ್ ಬಾಬು ಅವರ ತಂದೆ ಪಾತ್ರಕ್ಕಾಗಿ ಚಿತ್ರತಂಡ ತಮಿಳು ನಟ ಚಿಯಾನ್ ವಿಕ್ರಂ ಅವರನ್ನ ಆಯ್ಕೆ ಮಾಡಿಕೊಂಡಿತ್ತು. ಈ ಸಿನಿಮಾದಲ್ಲಿ ನಟಿಸುವಂತೆ ಚಿಯಾನ್ ವಿಕ್ರಂ ಅವರನ್ನು ಕೇಳಿದಾಗ ಅವರು ನಟಿಸುವುದಿಲ್ಲ ಎಂದು ಹೇಳಿದ್ದಾರಂತೆ. ತಮಿಳು ನಟ ಚಿಯಾನ್ ವಿಕ್ರಂ ಯಾಕೆ ನಟಿಸುವುದಿಲ್ಲ ಅನ್ನೋದಕ್ಕೆ ಕಾರಣ ಕೂಡಾ ಇದೆ. ಹೌದು, ವೀರ ಧೀರ ಸೂರನ್ ಸಿನಿಮಾದ ನಟ ವಿಕ್ರಂ ಎರಡು ಸಿನಿಮಾಗಳ ನಟನೆಯಲ್ಲಿ ಬ್ಯುಸಿಯಾಗಿದ್ದಾರೆ. ಹೀಗಾಗಿ ರಾಜಮೌಳಿ ಸಿನಿಮಾದಲ್ಲಿ ನಟಿಸಲು ಡೇಟ್ ಕ್ಲ್ಯಾಶ್ ಆಗುವ ಕಾರಣದಿಂದ ಮಹೇಶ್ ಬಾಬು ತಂದೆ ಪಾತ್ರದಲ್ಲಿ ನಟಿಸೋಕೆ ಸಾಧ್ಯವಾಗುವುದಿಲ್ಲ ಎಂದು ನಟ ವಿಕ್ರಂ ಹೇಳಿದ್ದಾರಂತೆ.

ಹೀಗಾಗಿ ಚಿತ್ರತಂಡ ಮಾಧವನ್ ಅವರನ್ನ ಸೂಪರ್ ಸ್ಟಾರ್ ತಂದೆ ಪಾತ್ರದಲ್ಲಿ ನಟಿಸುವಂತೆ ಅಪ್ರೋಚ್ ಮಾಡಿದೆ ಎನ್ನಲಾಗ್ತಿದೆ. ಇನ್ನು ಎಸ್‌ಎಸ್‌ಎಂಬಿ29 ಹೆಸರಿನ ಸಿನಿಮಾದ ಮೇಲೆ ಸಾಕಷ್ಟು ನಿರೀಕ್ಷೆಗಳಿವೆ. ಆರ್‌ಆರ್‌ಆರ್ ಸಿನಿಮಾ ಬಳಿಕ ನಿರ್ದೇಶಕ ರಾಜಮೌಳಿ ಕೈಗೆತ್ತಿಕೊಂಡಿರುವ ಸಿನಿಮಾ ಇದಾಗಿದೆ. ಹೀಗಾಗಿ ಈ ಚಿತ್ರದ ಮೇಲೆ ಭಾರೀ ನಿರೀಕ್ಷೆಗಳಿವೆ. ಜೊತೆಗೆ ರಾಜಮೌಳಿ ಹಾಗೂ ಮಹೇಶ್ ಬಾಬು ಕಾಂಬಿನೇಷನ್ ಮೊದಲ ಬಾರಿಗೆ ಒಂದಾಗ್ತಿದೆ.



# ಕಿಚ್ಚನ 47ನೇ ಚಿತ್ರಕ್ಕೆ ನಾಯಕಿ ಈ ಬ್ಯೂಟಿ

**ತಾರಾಗಣದ ಕುರಿತು ರಹಸ್ಯ**



ಕಿಚ್ಚ ಸುದೀಪ್ ಅಭಿನಯಿಸುತ್ತಿರುವ 47ನೇ ಚಿತ್ರದ ಚಿತ್ರೀಕರಣ ಇಂದಿನಿಂದ ಶುರುವಾಗಿದೆ. ಈ ಚಿತ್ರಕ್ಕಿನ್ನೂ ಹೆಸರಿಟ್ಟಿಲ್ಲ, ನಾಯಕಿ ಹೆಸರೂ ರಿವೀಲ್ ಆಗಿಲ್ಲ. ಆದರೆ ನಾಯಕಿ ಕುರಿತಾಗಿ ಸಣ್ಣದೊಂದು ಸುದ್ದಿ ಹಬ್ಬಿದ್ದು ಕಿಚ್ಚನ ಜೊತೆ ನಟಿಸುವ ಆ ಬೆಡಗಿ ಹೆಸರು ದೀಪ್ತಿಕಾ ಎನ್ನಲಾಗುತ್ತಿದೆ. ಮುದ್ದು ಮುಖದ ತಮಿಳು ನಟಿ ದೀಪ್ತಿಕಾ ಅಷ್ಟೊಂದು ಹೆಸರು ಮಾಡಿರುವ ನಟಿ ಅಲ್ಲ. ಆದರೆ ಅಭಿನಯ ಹಾಗೂ ಸೌಂದರ್ಯದಿಂದ ಅಭಿನಯಿಸಿದ್ದ ಕೆಲವೇ ಕೆಲವು ಚಿತ್ರಗಳಲ್ಲಿ ನ್ಯಾಯ ಸಲ್ಲಿಸಿರುವ ಬ್ಯೂಟಿ. ಮೈಖಲ್, ರವಿಕುಲ ರಘುರಾಮ, ಮಾರ್ಗನ್ ಚಿತ್ರಗಳಲ್ಲಿ ದೀಪ್ತಿಕಾ ಅಭಿನಯಿಸಿದ್ದಾರೆ. ಇದೀಗ ಬಹುಭಾಷೆಯಲ್ಲಿ ತಯಾರಾಗುತ್ತಿರುವ ಕಿಚ್ಚನ ಮ್ಯಾಕ್ಸ್ ಸೀಕ್ವೆಲ್ ಚಿತ್ರಕ್ಕೆ ಇವರೇ ಪ್ರಮುಖ ಲೀಡ್ ಆಯಕ್ಟ್ರೆಸ್ ಎನ್ನಲಾಗುತ್ತಿದೆ. ಕಿಚ್ಚನ ಜೊತೆ ಡ್ಯುಯೆಟ್ ಹಾಡ್ತಾರಾ ಅಥವಾ ಕಥೆಯೇ ಪ್ರಮುಖವಾದ ಚಿತ್ರ ಇದಾಗಿರೋದ್ರಿಂದ ಸಪೋರ್ಟಿಂಗ್ ಕ್ಯಾರೆಕ್ಟರ್‌ನಲ್ಲಿ ಬರ್ತಾರಾ ನೋಡ್ಬೇಕು. ಮ್ಯಾಕ್ಸ್ ನಿರ್ದೇಶಕರ ಜೊತೆ ಸುದೀಪ್ ಕೈಜೋಡಿಸಿದ್ದು, ಅದೇ ಟೆಕ್ನಿಕಲ್ ತಂಡವೇ ಮುಂದುವರೆದಿದೆ. ಶನಿವಾರ ಬೆಂಗಳೂರಿನಲ್ಲಿ ಮುಹೂರ್ತ ನಡೆದಿದ್ರೆ ಸೋಮವಾರ ಚೆನ್ನೈನಲ್ಲಿ ಮುಹೂರ್ತ ನಡೆದು ಚಿತ್ರೀಕರಣವೂ ಪ್ರಾರಂಭವಾಗಿದೆ. ಇನ್ನುಳಿದಂತೆ ತಾರಾಗಣದ ಕುರಿತು ರಹಸ್ಯ ಕಾಪಾಡಿಕೊಂಡಿತ್ತು ತಂಡ. ಇದೀಗ ನಟಿಯಾಗಿ ದೀಪ್ತಿಕಾ ಆಯ್ಕೆಯಾಗಿರೋ ಸುದ್ದಿ ಕೇಳಿಬಂದಿದೆ.

# ಹೊಸ ಪಿಚ್‌ಗೆ ಡಿಮ್ಯಾಂಡ್ ಮಾಡಿದ ಇಂಗ್ಲೆಂಡ್ ಕೋಚ್

**ಬಾಝ್ ಬಾಲ್‌ಗೆ ಭಯ**

ಭಾರತದ ವಿರುದ್ಧ 5 ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಮ್ಯಾಚ್‌ನಲ್ಲಿ ಆತಿಥೇಯ ಇಂಗ್ಲೆಂಡ್ ತಂಡವು ಭರ್ಜರಿ ಗೆಲುವು ದಾಖಲಿಸಿತ್ತು. ಇನ್ನು ಎಡ್ಜ್‌ಬಾಸ್ಟನ್‌ನಲ್ಲಿ ಜರುಗಿದ ದ್ವಿತೀಯ ಪಂದ್ಯದಲ್ಲಿ ಆಂಗ್ಲರನ್ನು ಬಗ್ಗು ಬಡಿಯುವ ಮೂಲಕ ಟೀಮ್ ಇಂಡಿಯಾ ಹೊಸ ಇತಿಹಾಸ ನಿರ್ಮಿಸಿದೆ. ಇದೀಗ ಉಭಯ ತಂಡಗಳು ಮೂರನೇ ಪಂದ್ಯಕ್ಕಾಗಿ ಸಜ್ಜಾಗುತ್ತಿದೆ.




ಭಾರತ ಮತ್ತು ಇಂಗ್ಲೆಂಡ್ ನಡುವಣ ಮೂರನೇ ಪಂದ್ಯಕ್ಕೆ ಬೌಲಿಂಗ್ ಪಿಚ್ ನಿರ್ಮಿಸುವಂತೆ ಆಂಗ್ಲ ತಂಡದ ಮುಖ್ಯ ಕೋಚ್ ಬ್ರೆಂಡನ್ ಮೆಕಲಂ ಮನವಿ ಮಾಡಿದ್ದಾರೆ. ಜು.10ರಿಂದ ಲಾರ್ಡ್ಸ್ ಮೈದಾನದಲ್ಲಿ ಶುರುವಾಗಲಿರುವ ಈ ಪಂದ್ಯಕ್ಕಾಗಿ ಸಂಪೂರ್ಣ ಬೌಲಿಂಗ್‌ಗೆ ಸಹಕಾರಿಯಾಗುವಂತೆ ಪಿಚ್ ಸಿದ್ಧಪಡಿಸಬೇಕೆಂದು ಮೆಕಲಂ, ಮೈದಾನ ಸಿಬ್ಬಂದಿ ಕಾರ್ಲ್ ಮೆಕ್‌ಡರ್ಮೊಟ್ ಅವರನ್ನು ಒತ್ತಾಯಿಸಿದ್ದಾರೆ.

ಹೀಗಾಗಿ ಲಾರ್ಡ್ಸ್ ಮೈದಾನದಲ್ಲಿ ಬೌಲಿಂಗ್ ಪಿಚ್ ಕಾಣಿಸಿಕೊಳ್ಳುವುದು ಖಚಿತ. ಇದಕ್ಕೂ ಮುನ್ನ ಹೆಡಿಂಗ್ಲೆ ಹಾಗೂ ಎಡ್ ಜ್ಬಾಸ್ಟನ್‌ನಲ್ಲಿ ಫ್ಲಾಟ್ ಪಿಚ್‌ಗಳನ್ನು ನಿರ್ಮಿಸಲಾಗಿತ್ತು. ಇದರಿಂದ ಬ್ಯಾಟರ್‌ಗಳು ಅಬ್ಬರಿಸಿದ್ದರು. ಅದರಲ್ಲೂ ಭಾರತೀಯ ಬ್ಯಾಟರ್‌ಗಳ ಆರ್ಭಟಕ್ಕೆ ಇಂಗ್ಲೆಂಡ್ ತಂಡಕ್ಕೆ ಲೆಕ್ಕಾಚಾರಗಳು ತಲೆಕೆಳಗಾಗಿದ್ದವು. ಹೀಗಾಗಿ ಮೂರನೇ ಪಂದ್ಯಕ್ಕಾಗಿ ಬೌಲಿಂಗ್ ಪಿಚ್ ನಿರ್ಮಿಸುವಂತೆ ಇಂಗ್ಲೆಂಡ್ ಕೋಚ್ ಮನವಿ ಮಾಡಿದ್ದಾರೆ. ಬ್ರೆಂಡನ್ ಮೆಕಲಂ, ವೇಗದ ಬೌಲಿಂಗ್ ಹಾಗೂ ಬೌನ್ಸ್‌ಗೆ ನೆರವಾಗುವಂತಹ ಪಿಚ್ ಅನ್ನು ಸಿದ್ಧಪಡಿಸಲು ಸೂಚಿಸಿದ್ದಾರೆ ಎಂದು ತಿಳಿದು ಬಂದಿದೆ. ಏಕೆಂದರೆ ಮುಂದಿನ ಪಂದ್ಯದಲ್ಲಿ ಇಂಗ್ಲೆಂಡ್ ಘಾತಕ ವೇಗಿ ಜೋಫ್ರಾ ಆರ್ಚರ್ ಅವರನ್ನು ಕಣಕ್ಕಿಳಿಸುವುದು ಖಚಿತ. ಇವರೊಂದಿಗೆ ಗಸ್ ಅಟ್ಕಿಸನ್ ಕೂಡ ಆಡುವ ಬಳಗದಲ್ಲಿ ಕಾಣಿಸಿಕೊಳ್ಳುವ ಸಾಧ್ಯತೆಯಿದೆ. ಈ ಮೂಲಕ ವೇಗದ ಬೌಲರ್‌ಗಳೊಂದಿಗೆ ಭಾರತೀಯ ಬ್ಯಾಟರ್‌ಗಳನ್ನು ಕಟ್ಟಿಹಾಕಲು ಪ್ಲ್ಯಾನ್ ರೂಪಿಸಲಾಗುತ್ತಿದೆ. ಹೆಡಿಂಗ್ಲೆಯಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಚೇಸಿಂಗ್‌ಗೆ ಅನುಕೂಲವಾಗುಂತೆ ಬ್ಯಾಟಿಂಗ್ ಸ್ನೇಹಿ ಪಿಚ್ ನಿರ್ಮಿಸಲಾಗಿತ್ತು. ಅದರಂತೆ ಆ ಪಂದ್ಯದಲ್ಲಿ ಇಂಗ್ಲೆಂಡ್ ತಂಡವು 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತ್ತು.

# ಒಂದೇ ತಂಡದ ಪರ ಕಣಕ್ಕಿಳಿಯಲಿದ್ದಾರೆ ಸ್ಯಾಮ್ಸನ್ ಬ್ರದರ್ಸ್

**ಹರಾಜಿನಲ್ಲಿ ದಾಖಲೆಯ ಮೊತ್ತಕ್ಕೆ ಬಿಕರಿ**

ಕೇರಳ ಕ್ರಿಕೆಟ್ ಲೀಗ್ ಟಿ20 ಟೂರ್ನಿಯಲ್ಲಿ ಒಟ್ಟು 6 ತಂಡಗಳು ಕಣಕ್ಕಿಳಿಯಲಿವೆ. ಆ ತಂಡಗಳೆಂದರೆ ಕೊಚ್ಚಿ ಬ್ಲೂ ಟೈಗರ್ಸ್, ತಿರುವನಂತಪುರಂ ರಾಯಲ್ಸ್, ಅಲೆಪ್ಪಿ ರಿಪ್ಪಲ್ಸ್, ತ್ರಿಶ್ಶೂರ್ ಟೈಟಾನ್ಸ್, ಅರೀಸ್ ಕೊಲ್ಲಂ ಸೈಲರ್ಸ್ ಮತ್ತು ಕ್ಯಾಲಿಕಟ್ ಗ್ಲೋಬ್‌ಸ್ಟಾರ್ಸ್. ಈ ತಂಡಗಳ ನಡುವೆ ಆಗಸ್ಟ್ 22 ರಿಂದ ಟಿ20 ಕ್ರಿಕೆಟ್ ಕದನ ನಡೆಯಲಿದೆ.

ಕೇರಳ ಕ್ರಿಕೆಟ್ ಲೀಗ್ ಸೀಸನ್-2 ರ ಸಿದ್ಧತೆಗಳು ಶುರುವಾಗಿದೆ. ಇದರ ಮೊದಲ ಹೆಜ್ಜೆಯಾಗಿ ಇತ್ತೀಚೆಗೆ ಹರಾಜು ಪ್ರಕ್ರಿಯೆಯನ್ನು ನಡೆಸಲಾಗಿದೆ. ಈ ವೇಳೆ ದಾಖಲೆಯ ಮೊತ್ತಕ್ಕೆ ಬಿಕರಿಯಾಗುವ ಮೂಲಕ ಸಂಜು ಸ್ಯಾಮ್ಸನ್ ಇತಿಹಾಸ ನಿರ್ಮಿಸಿದ್ದಾರೆ. ವಿಶೇಷ ಎಂದರೆ ಸಂಜು ಜೊತೆ ಅವರ ಅಣ್ಣ ಸ್ಯಾಲಿ ಸ್ಯಾಮ್ಸನ್ ಕೂಡ ಕೆಸಿಎಲ್‌ಗೆ ಆಯ್ಕೆಯಾಗಿದ್ದಾರೆ.




ಕೊಚ್ಚಿ ಬ್ಲೂ ಟೈಗರ್ಸ್ ಫ್ರಾಂಚೈಸಿ ಸಂಜು ಸ್ಯಾಮ್ಸನ್ ಹಾಗೂ ಸ್ಯಾಲಿ ಸ್ಯಾಮ್ಸನ್ ಅವರನ್ನು ಆಯ್ಕೆ ಮಾಡಿಕೊಂಡಿದೆ. 75 ಸಾವಿರ ರೂ. ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದ ಸ್ಯಾಲಿ ಸ್ಯಾಮ್ಸನ್ ಅವರನ್ನು ಬೇಸ್ ಪ್ರೈಸ್‌ಗೆ ಬ್ಲೂ ಟೈಗರ್ಸ್ ಫ್ರಾಂಚೈಸಿ ಖರೀದಿಸಿದ್ದು, ಈ ಮೂಲಕ ಅಣ್ಣ-ತಮ್ಮಂದಿರನ್ನು ಒಂದೇ ತಂಡದಲ್ಲಿರಿಸಲು ಯಶಸ್ವಿಯಾಗಿದ್ದಾರೆ. ಇದಕ್ಕೂ ಮುನ್ನ 3 ಲಕ್ಷ ರೂ. ಮೂಲ ಬೆಲೆಯೊಂದಿಗೆ ಕಾಣಿಸಿಕೊಂಡಿದ್ದ ಸಂಜು ಸ್ಯಾಮ್ಸನ್ ಅವರನ್ನು ಖರೀದಿಸಲು ಎಲ್ಲಾ ಫ್ರಾಂಚೈಸಿಗಳ ನಡುವೆ ಭರ್ಜರಿ ಪೈಪೋಟಿ ಕಂಡು ಬಂತು. ಪರಿಣಾಮ ನಿಮಿಷಗಳಲ್ಲಿ ಸ್ಯಾಮ್ಸನ್ ಅವರ ಮೊತ್ತವು 20 ಲಕ್ಷ ರೂ. ದಾಟಿದೆ. ಅಂತಿಮವಾಗಿ ಕೊಚ್ಚಿ ಬ್ಲೂ ಟೈಗರ್ಸ್ ಫ್ರಾಂಚೈಸಿಯು ಬರೋಬ್ಬರಿ 26.8 ಲಕ್ಷ ರೂ. ನೀಡಿ ಸ್ಯಾಮ್ಸನ್ ಅವರನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಇದರೊಂದಿಗೆ ಕೇರಳ ಕ್ರಿಕೆಟ್ ಲೀಗ್ ಹರಾಜಿನಲ್ಲಿ ದಾಖಲೆಯ ಮೊತ್ತಕ್ಕೆ ಬಿಕರಿಯಾದ ಆಟಗಾರ ಎಂಬ ದಾಖಲೆ ಸಂಜು ಸ್ಯಾಮ್ಸನ್ ಪಾಲಾಯಿತು. ಇದಕ್ಕೂ ಮುನ್ನ ಈ ದಾಖಲೆ ಎಂಎಸ್ ಅಖಿಲ್ ಹೆಸರಿನಲ್ಲಿತ್ತು. 2024ರ ಹರಾಜಿನಲ್ಲಿ ತಿರುವನಂತಪುರಂ ರಾಯಲ್ಸ್ ಫ್ರಾಂಚೈಸಿಯು ಅಖಿಲ್ ಅವರನ್ನು 7.4 ಲಕ್ಷ ರೂ. ನೀಡಿ ಖರೀದಿಸಿತ್ತು.




# ವಿರಾಟ್ ಕೊಹ್ಲಿಗಾಗಿ ಆರ್‌ಸಿಬಿ ವಿಜಯೋತ್ಸವ

ಆರ್‌ಸಿಬಿ ಐಪಿಎಲ್ ಗೆಲುವಿನ ಸಂಭ್ರಮಾಚರಣೆ ವೇಳೆ ಬೆಂಗಳೂರಿನ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಸಂಭವಿಸಿದ ಕಾಲ್ತುಳಿತಕ್ಕೆ ವಿರಾಟ್ ಕೊಹ್ಲಿಗಾಗಿ ತರಾತುರಿಯಲ್ಲಿ ಆಯೋಜಿಸಲಾದ ಕಾರ್ಯಕ್ರಮ ಮತ್ತು ಉಚಿತ ಟಿಕೆಟ್ ಘೋಷಣೆಯಿಂದ ಉಂಟಾದ ಗೊಂದಲವೇ ಮುಖ್ಯ ಕಾರಣ ಎಂಬುದು ಸಿಐಡಿ ತನಿಖೆಯಲ್ಲಿ ತಿಳಿದುಬಂದಿದೆ ಎಂದು ಮೂಲಗಳು ತಿಳಿಸಿವೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಐಪಿಎಲ್ ಟ್ರೋಫಿ ಗೆದ್ದ ಸಂಭ್ರಮಾಚರಣೆ ವೇಳೆ ಜೂನ್ 4 ರಂದು ಚಿನ್ನಸ್ವಾಮಿ ಸ್ಟೇಡಿಯಂ ಬಳಿ ಸಂಭವಿಸಿದ ಕಾಲ್ತುಳಿತ ಪ್ರಕರಣದ ತನಿಖೆ ನಡೆಸಿರುವ ಸಿಐಡಿ ಪೊಲೀಸರು ಹಲವು ವಿಚಾರಗಳನ್ನು ದಾಖಲಿಸಿಕೊಂಡಿದ್ದಾರೆ. ಸದ್ಯ ತನಿಖೆಯಲ್ಲಿ ಕಂಡುಬಂದ ಎಲ್ಲಾ ಅಂಶಗಳನ್ನು ಸಿಐಡಿ ವರದಿಯಲ್ಲಿ ದಾಖಲಿಸಿಕೊಳ್ಳಲಾಗಿದೆ. ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿಗಾಗಿ ತರಾತುರಿಯಲ್ಲಿ ಕಾರ್ಯಕ್ರಮ ಆಯೋಜಿಸಿದ್ದೇ ಘಟನೆಗೆ ಮುಖ್ಯ ಕಾರಣ ಎಂದು ಸಿಐಡಿ ತನಿಖೆಯಲ್ಲಿ ತಿಳಿದು ಬಂದಿದೆ.



# ಟೀಮ್ ಇಂಡಿಯಾ ಗೆದ್ದಿದ್ದು ಕೇವಲ 3 ಬಾರಿ



ಕ್ರಿಕೆಟ್ ಕಾಶಿಯಲ್ಲಿ ಟೀಮ್ ಇಂಡಿಯಾ ಗೆದ್ದಿದ್ದು ಕೇವಲ 3 ಬಾರಿ ಮಾತ್ರ, ಆದರೆ ಭಾರತದ ವಿರುದ್ಧ 5 ಪಂದ್ಯಗಳ ಟೆಸ್ಟ್ ಸರಣಿಯ ಮೊದಲ ಮ್ಯಾಚ್‌ನಲ್ಲಿ ಆತಿಥೇಯ ಇಂಗ್ಲೆಂಡ್ ತಂಡವು ಭರ್ಜರಿ ಗೆಲುವು ದಾಖಲಿಸಿತ್ತು.

ಇನ್ನು ಎಡ್ಜ್‌ಬಾಸ್ಟನ್‌ನಲ್ಲಿ ಜರುಗಿದ ದ್ವಿತೀಯ ಪಂದ್ಯದಲ್ಲಿ ಆಂಗ್ಲರನ್ನು ಬಗ್ಗು ಬಡಿಯುವ ಮೂಲಕ ಟೀಮ್ ಇಂಡಿಯಾ ಹೊಸ ಇತಿಹಾಸ ನಿರ್ಮಿಸಿದೆ. ಇದೀಗ ಉಭಯ ತಂಡಗಳು ಮೂರನೇ ಪಂದ್ಯಕ್ಕಾಗಿ ಸಜ್ಜಾಗುತ್ತಿದೆ. ಭಾರತ ಮತ್ತು ಇಂಗ್ಲೆಂಡ್ ನಡುವಣ ಮೂರನೇ ಟೆಸ್ಟ್ ಪಂದ್ಯವು ಜುಲೈ 10 ರಿಂದ ಶುರುವಾಗಲಿದೆ. ಕ್ರಿಕೆಟ್ ಕಾಶಿ ಲಾರ್ಡ್ಸ್ ಮೈದಾನದಲ್ಲಿ ನಡೆಯಲಿರುವ ಈ ಪಂದ್ಯವು ಉಭಯ ತಂಡಗಳ ಪಾಲಿಗೆ ತುಂಬಾ ಮಹತ್ವದ್ದು. ಏಕೆಂದರೆ ಈ ಮ್ಯಾಚ್‌ನಲ್ಲಿ ಗೆಲ್ಲುವ ತಂಡ ಸರಣಿಯಲ್ಲಿ ಮುನ್ನಡೆ ಸಾಧಿಸಲಿದ್ದಾರೆ. ಇದಕ್ಕೂ ಮುನ್ನ ಹೆಡಿಂಗ್ಲೆ ಮೈದಾನದಲ್ಲಿ ನಡೆದ ಮೊದಲ ಟೆಸ್ಟ್ ಪಂದ್ಯದಲ್ಲಿ ಆತಿಥೇಯ ಇಂಗ್ಲೆಂಡ್ ತಂಡವು 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿತ್ತು. ಇನ್ನು ಎಡ್ಜ್‌ಬಾಸ್ಟನ್ ಸ್ಟೇಡಿಯಂನಲ್ಲಿ ನಡೆದ ದ್ವಿತೀಯ ಪಂದ್ಯದಲ್ಲಿ ಆಂಗ್ಲರನ್ನು 336 ರನ್‌ಗಳಿಸಿ ಸೋಲಿಸಿ ಟೀಮ್ ಇಂಡಿಯಾ ಹೊಸ ಇತಿಹಾಸ ಬರೆದಿದ್ದರು. ಇದೀಗ ಉಭಯ ತಂಡಗಳು ಮೂರನೇ ಹಣಾಹಣಿಗೆ ಸಜ್ಜಾಗುತ್ತಿದೆ. ಇತ್ತ ಈ ಬಾರಿ ಲಾರ್ಡ್ಸ್ ಮೈದಾನದಲ್ಲಿ ಪಂದ್ಯ ನಡೆಯುತ್ತಿರುವುದರಿಂದ ಗೆಲುವು ನಮ್ಮದೇ ಎಂಬ ವಿಶ್ವಾಸದಲ್ಲಿದ್ದಾರೆ ಆಂಗ್ಲರು. ಏಕೆಂದರೆ ಈ ಮೈದಾನದಲ್ಲಿ ಟೀಮ್ ಇಂಡಿಯಾ ಗೆದ್ದಿರುವುದು ಕೇವಲ ಮೂರು ಬಾರಿ ಮಾತ್ರ. 1932 ರಿಂದ ಟೀಮ್ ಇಂಡಿಯಾ ಲಾರ್ಡ್ಸ್ ಮೈದಾನದಲ್ಲಿ ಟೆಸ್ಟ್ ಪಂದ್ಯವಾಡುತ್ತಿದೆ.

# ಸಿಎಸ್‌ಕೆ ತಂಡವನ್ನು ಧೂಳಿಪಟ ಮಾಡಿದ ಆರ್‌ಸಿಬಿ

**ಮಾರುಕಟ್ಟೆ ಮೌಲ್ಯಮಾಪನದಲ್ಲಿ ಆರ್‌ಸಿಬಿ ಕಿಂಗ್**

ಇಂಡಿಯನ್ ಪ್ರೀಮಿಯರ್ ಲೀಗ್ ಸೀಸನ್-18 ರಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಐಪಿಎಲ್‌ನ ಅತ್ಯಂತ ಮೌಲ್ಯಯುತ ಫ್ರಾಂಚೈಸಿಯಾಗಿ ಹೊರಹೊಮ್ಮಿದೆ. ಅದು ಕೂಡ 5 ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಗಳನ್ನು ಹಿಂದಿಕ್ಕುವ ಮೂಲಕ ಎಂಬುದು ವಿಶೇಷ.

ಇಂಡಿಯನ್ ಪ್ರೀಮಿಯರ್ ಲೀಗ್‌ನ ಅತ್ಯಂತ ಮೌಲ್ಯಯುತ ತಂಡವಾಗಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿ ಹೊರಹೊಮ್ಮಿದೆ. ಕಳೆದ ಬಾರಿ ಅಗ್ರಸ್ಥಾನದಲ್ಲಿದ್ದ ಚೆನ್ನೈ ಸೂಪರ್ ಕಿಂಗ್ಸ್ ಫ್ರಾಂಚೈಸಿಯನ್ನು ಹಿಂದಿಕ್ಕಿ ಆರ್‌ಸಿಬಿ ಅಗ್ರಸ್ಥಾನಕ್ಕೇರುವಲ್ಲಿ ಯಶಸ್ವಿಯಾಗಿದೆ. ಹೌಲಿಹಾನ್ ಲೋಕೆ ಅವರ ಇತ್ತೀಚಿನ ಬ್ರ್ಯಾಂಡ್ ಮೌಲ್ಯಮಾಪನ ಅಧ್ಯಯನದ ಪ್ರಕಾರ, ಇಂಡಿಯನ್ ಪ್ರೀಮಿಯರ್ ಲೀಗ್ 2025ರಲ್ಲಿ ಅಭೂತಪೂರ್ವ ಆರ್ಥಿಕ ಜಿಗಿತ ಕಂಡಿದೆ. ಈ ಜಿಗಿತದೊಂದಿಗೆ ಆರ್‌ಸಿಬಿ ಫ್ರಾಂಚೈಸಿಯು ಹೆಚ್ಚಿನ ಮೌಲ್ಯಯುತ ತಂಡವಾಗಿ ರೂಪುಗೊಂಡಿದೆ. ಐಪಿಎಲ್‌ನ ವ್ಯವಹಾರ ಮೌಲ್ಯಮಾಪನವು ವರ್ಷದಿಂದ ವರ್ಷಕ್ಕೆ ಶೇ. 12.9 ರಷ್ಟು ಹೆಚ್ಚಾಗಿ 18.5 ಬಿಲಿಯನ್ ( 1.56 ಟ್ರಿಲಿಯನ್) ತಲುಪಿದೆ.



ಈ ಮೂಲಕ ಐಪಿಎಲ್ ವಿಶ್ವದ ಅತ್ಯಂತ ಮೌಲ್ಯಯುತ ಕ್ರೀಡಾ ಲೀಗ್‌ಗಳಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ ಎಂದು ಹೌಲಿಹಾನ್ ಲೋಕೆ ಅವರ ಬ್ರಾಂಡ್ ಮೌಲ್ಯಮಾಪನ ಅಧ್ಯಯನ ತಿಳಿಸಿದೆ. ಇನ್ನು ಐಪಿಎಲ್ ಟೂರ್ನಿಗೆ ಸಿಗುತ್ತಿರುವ ದಾಖಲೆಯ ವೀಕ್ಷಕರ ಸಂಖ್ಯೆ, ಹೆಚ್ಚುತ್ತಿರುವ ಜಾಹೀರಾತು ಆದಾಯ ಮತ್ತು ಹೂಡಿಕೆದಾರರ ಬಲವಾದ ಆಸಕ್ತಿಯಿಂದ ಇಂಡಿಯನ್ ಪ್ರೀಮಿಯರ್ ಲೀಗ್‌ನ ಸ್ವತಂತ್ರ ಬ್ರಾಂಡ್ ಮೌಲ್ಯವು 13.8% ರಷ್ಟು ಹೆಚ್ಚಾಗಿ 3.9 ಬಿಲಿಯನ್ ( 32,721 ಕೋಟಿ) ತಲುಪಿದೆ ಎಂದು ಇದೇ ವರದಿಯಲ್ಲಿ ತಿಳಿಸಲಾಗಿದೆ.

**ರಾಯಲ್ ಚಾಲೆಂಜರ್ಸ್ ಬೆಂಗಳೂರು ನಂಬರ್ ಒನ್:** ಫ್ರಾಂಚೈಸಿ ಶ್ರೇಯಾಂಕಗಳ ಗಮನಾರ್ಹ ಪುನರ್ರಚನೆಯಲ್ಲಿ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಅಗ್ರಸ್ಥಾನ ಅಲಂಕರಿಸುವಲ್ಲಿ ಯಶಸ್ವಿಯಾಗಿದೆ. ಚೊಚ್ಚಲ ಬಾರಿ ಚಾಂಪಿಯನ್ ಪಟ್ಟ ಅಲಂಕರಿಸಿರುವ ಆರ್‌ಸಿಬಿ ತನ್ನ ಬ್ರ್ಯಾಂಡ್ ವಾಲ್ಯೂ ಅನ್ನು ಹೆಚ್ಚಿಸಿಕೊಂಡಿದೆ.

Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966